# ಬೇಚಲೇಲನು

ದಿನ : 1 ಜನವರಿ 1

ವಿಮೋಚನಕಾಂಡ : 35:30–36:5

## ದೇವರನ್ನು ಮಹಿಮೆ ಪಡಿಸಲು ಆರಿಸಲ್ಪಟ್ಟವನು :

ವಚನ 30–33 ರಲ್ಲಿ ಓದುವಾಗ, ದೇವರು ಬೇಚಲೇಲನನ್ನು ಹೆಸರು ಹೇಳಿ ಕರೆದು, ಅವನನ್ನು ದೇವರಾತ್ಮದಿಂದಲೂ, ಜ್ಞಾನದಿಂದಲೂ, ತಿಳುವಳಿಕೆಯಿಂದಲೂ, ವಿವೇಕದಿಂದಲೂ ತುಂಬಿಸಿದನೆಂದು ತಿಳಿಯುತ್ತೇವೆ.

ನಾವೂ ಕೂಡ ದೇವರಿಂದ ಆರಿಸಲ್ಪಟ್ಟದ್ದೇವೆ. ಹೇಗೆಂದರೆ ಲೋಕದ ಅಸ್ತಿವಾರಕ್ಕೆ ಮುಂಚೆ ನಮ್ಮನ್ನು ತನ್ನ ಕೈಯಾರೆ ಆರಿಸಿದನು (ಎಫೆಸ 1:4) ದೇವರು ನಮಗೋಸ್ಕರ ಮುಂದಾಗಿ ಸಿದ್ಧಪಡಿಸಿದ ಸತ್ಕ್ರಿಯೆಗಳನ್ನು ಮಾಡುವುದಕ್ಕೋಸರ ಆರಿಸಿದನು (ಎಫೆಸ 2:10).

ನಾವು ಕರೆಯಲ್ಪಟ್ಟದ್ದೇವೆಂಬ ವಿಚಾರದಲ್ಲಿ ನಮಗೆ ಸಂದೇಹವಿದೆಯೋ ? ಬಹಳ ಸಾರಿ ನಮಗೆ ನಾವು ಆರಿಸಲ್ಪಟ್ಟದೇವೆಂದು ಅನಿಸುವುದಿಲ್ಲ, ಏಕೆಂದರೆ ನಾವು ಪ್ರಯೋಜನವಿಲ್ಲದವರು, ಯಾವುದಲ್ಲಿಯೂ ನಮ್ಮಲ್ಲಿ ವಿಶೇಷ ಪ್ರತಿಭೆಗಳಿಲ್ಲ ಎಂದೆಣಿಸುತ್ತೇವೆ. ಆದರೆ ದೇವರ ವಾಕ್ಯ ಬೇರೊಂದನ್ನೇ ಹೇಳುತ್ತದೆ. ನೀವು ಈ ದಿನ ದೇವರ ರಾಜ್ಯದಲ್ಲಿದ್ದೀರಿ ಎಂದರೆ, ಖಂಡಿತವಾಗಿಯೂ ನೀವು ವಿಶೇಷವಾಗಿ ಆರಿಸಲ್ಪಟ್ಟವರು, ಕ್ರಿಸ್ತ ಯೇಸು ನಿಮ್ಮನ್ನು ಆರಿಸಿ, ಶುದ್ಧೀಕರಿಸಿದ ನಂತರ ನಿಮ್ಮನ್ನು ದೇವರ ಪವಿತ್ರ ಆತ್ಮನಿಂದಲೂ ತುಂಬಿಸಿದನು. ದೇವರ ಆತ್ಮ ನಮ್ಮನ್ನು ತನ್ನ ವರಗಳಿಂದ ತುಂಬಿಸಿ, ನಾವು ಆ ವರಗಳನ್ನು ದೇವರ ರಾಜ್ಯ ಕಟ್ಟುವುದಕ್ಕಾಗಿ ಮತ್ತು ದೇವರಿಗೆ ಮಹಿಮೆ ತರುವಂತೆ ಉಪಯೋಗಿಸಲು ನಮಗೆ ಶಕ್ತಿ ಕೊಡುತ್ತಾನೆ. (1 ಕೊರಿಂಥ 12:7–11, ರೋಮಾಪುರ 12:6–8, 1 ಪೇತ್ರ 4:10–11)

## ಹಸ್ತಾಂತರ ಮಾಡುವುದು :

ವಚನ 24ರಲ್ಲಿ ಬೇಚಲೇಲ ಮತ್ತು ಒಹೋಲೀಯಾಬ ಇಬ್ಬರಿಗೂ ದೇವರು ಕಲಿಸುವ ಹೃದಯವನ್ನು ಕೊಟ್ಟರೆಂದು ಹೇಳುತ್ತದೆ. ದೇವರಿಗೆ ನಾವು ನಮ್ಮಲ್ಲಿದ್ದ ಪ್ರತಿಭೆ ಮತ್ತು ಕೌಶಲ್ಯಗಳನ್ನು ಬೇರೆಯವರಿಗೆ ಹಸ್ತಾಂತರ ಮಾಡಿ, ಅವರೂ ದೇವರ ಸೇವೆ ಮಾಡಲು ಎಲ್ಲಾ ರೀತಿಯಿಂದಲೂ ಸಿದ್ಧರಾಗುವುದು ತುಂಬಾ ಮುಖ್ಯ. ನಾವು ಈ ದಿನ ಕರೆಯಲ್ಪಟ್ಟಿರುವುದು ಆದಕ್ಕಾಗಿಯೇ ಅಲ್ಲವೇ? ನಿಮಗೆ ದೇವರು ಯಾವ ತೆರನಾದ ಪ್ರತಿಭೆ ಮತ್ತು ವರಗಳನ್ನು ಕೊಟ್ಟದ್ದಾರೆ ? ಹಾಡುವುದು, ಸೇವೆ ಮಾಡುವುದು, ಮಕ್ಕಳಿಗೆ, ಹದಿವಯಸ್ಸಿನವರಿಗೆ ಕೆಕೆಸಿಯಲ್ಲಿ ಕಲಿಸುವುದು, ಬೋಧಿಸುವುದು, ವೇದವಾಕ್ಯ ಕಲಿಸುವುದು: ಪಾಠಗಳನ್ನು ಸಿದ್ಧಪಡಿಸುವುದು, ಭಾಷಾಂತರಿಸುವುದು, ಕಲ್ಪನೆಯ ಮತ್ತು ಚಮತ್ಕಾರದ ಕೌಶಲ್ಯಗಳು, ಅಡಿಗೆ ಮಾಡುವುದು, ಪ್ರೋತ್ಸಾಹಗೊಳಿಸುವುದು, ಆಡಳಿತ ಕಾರ್ಯಗಳು, ವಿಶೇಷ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸುವುದು, ಇತ್ಯಾದಿ, ಯಾವುದರಲ್ಲಿ

ನೀವು ಪರಿಣಿತರು ? ಅದನ್ನು ದೇವರ ರಾಜ್ಯ ಕಟ್ಟಲು ಉಪಯೋಗಿಸುತ್ತಿರುವಿರಾ ? ಮತ್ತು ಬೇರೆಯವರಿಗೆ ನಿಮಗೆ ಗೊತ್ತಿರುವುದನ್ನು ಕಲಿಸಿ, ತರಬೇತಿಗೊಳಿಸಿ ಅವರನ್ನು ಸಿದ್ಧಗೊಳಿಸುತ್ತಿರುವಿರಾ?

ವಿಶ್ವಾಸಾರ್ಹ ಮತ್ತು ಜವಾಬ್ದಾರಿಯುತ ಸೇವಕರು :
ವಿಮೋಚನ ಕಾಂಡ 38:22-23ರಲ್ಲಿ ಬೇಚಲೇಲನು ಮತ್ತು ಓಹೋಲಿಯೊಬನೂ ದೇವರು ಅಜ್ಞಾಪಿಸಿದ್ದನ್ನೆಲ್ಲಾ ಮಾಡಿದರೆಂದು ಹೇಳುತ್ತದೆ ವಿಮೋಚನ ಕಾಂಡ 36:4-5ರಲ್ಲಿ ಅವರು ಮಾಡುವ ಪ್ರತಿಯೊಂದು ಕೆಲಸ ಹೇಗೆ ನಡೆಯುತ್ತಿದೆ, ಏನೇನು ಬೇಕಾಗಿದೆ ಎಂಬುದನ್ನೆಲ್ಲಾ ಮೋಶೆಯ ಸಂಗಡ ಮಾತನಾಡಿ ಕೂಲಂಕುಶವಾಗಿ ತಿಳಿಸುತ್ತಿದ್ದರು. ನೀವು ದೇವರ ಕೆಲಸಗಳಲ್ಲಿ ವಿಶ್ವಾಸಾರ್ಹರಾಗಿದ್ದೀರೋ ? ನಿಮಗೆ ಅಜ್ಞಾಪಿಸಿದ್ದನ್ನೆಲ್ಲಾ ಶ್ರದ್ಧೆಯಿಂದ ಮಾಡಿ ಮತ್ತು ನಿಮ್ಮ ನಾಯಕರಿಗೆ ನೀವು ಮಾಡುವ ಕೆಲಸದ ಪೂರ್ಣ ವಿವರಗಳನ್ನು ತಪ್ಪದೆ ತಿಳಿಸುತ್ತಿರುವಿರಾ ? ಆಗಲೇ ದೇವರ ಕಾರ್ಯ ಸುಸೂತ್ರವಾಗಿ ನಡೆಯುವುದು.

## ಅನ್ವಯ :

1. ನಿಮ್ಮನ್ನು ಆರಿಸಿದ್ದಕ್ಕೋಸ್ಕರ, ದೇವರಿಗೆ ಕೃತಜ್ಞತೆ ಸಲ್ಲಿಸಿ, ನೀವು ಹೇಗೆ ಕ್ರೈಸ್ತರಾದಿರಿ, ಮತ್ತು ದೇವರು ಅದನ್ನೆಲ್ಲಾ ಎಂಥಾ ಅದ್ಭುತ ರೀತಿಯಲ್ಲಿ ವ್ಯವಸ್ಥೆಗೊಳಿಸಿದರು ಎಂಬುದನ್ನೆಲ್ಲಾ ನೆನಪುಮಾಡಿ ಪ್ರಾರ್ಥಿಸಿ.

2. ನಿಮ್ಮ ಕ್ರೈಸ್ತ ಜೀವನದಲ್ಲಿ ಪವಿತ್ರಾತ್ಮನಿಂದಾದ ವರಗಳನ್ನು ಗುರುತಿಸಿ, ದೇವರು ಯಾವ ರೀರಿಯಲ್ಲಿ ನಿಮ್ಮನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸಬಹುದು ಮತ್ತು ಯಾವ ವಿಧವಾಗಿ ನೀವು ವಿಶ್ವಾಸಾರ್ಹ ಸೇವಕನಾಗಬಹುದು ಎಂಬುದನ್ನೆಲ್ಲಾ ಬರೆಯಿರಿ.

3. ಪ್ರಾರ್ಥನೆ ಮಾಡಿ, ಮಾತನಾಡಿ, ನಿಮ್ಮಲ್ಲಿರುವ ಪ್ರತಿಭೆಗಳನ್ನು ಯಾರಿಗೆ ಕಲಿಸಬೇಕೆಂದು ಎಂದು ಕೊಂಡಿರುವಿರೋ ಅವರೊಡನೆ ಒಟ್ಟುಸೇರಲು ಏರ್ಪಾಡು ಮಾಡಿ.

# ಫೀನೆಹಾಸನು

ದಿನ 2 ಜನವರಿ 2

## ಅರಣ್ಯಕಾಂಡ 25

ಹಿನ್ನೆಲೆ : ಫೀನೆಹಾಸನು ಆರೋನನ ಮೊಮ್ಮಗನು ಮತ್ತು ಎಲಿಯಾಜರನ ಮಗನಾಗಿದ್ದನು. ಆ ಕಾಲದಲ್ಲಿ ಇಸ್ರಾಯೇಲ್ಯರು ಈಜಿಪ್ತರ ದಾಸತ್ವದಿಂದ ಬಿಡುಗಡೆಮಾಡಲ್ಪಟ್ಟು, ವಾಗ್ದಾನ ಮಾಡಿದ ದೇಶಕ್ಕೆ ಹೋಗುವ ದಾರಿಯಲ್ಲಿದ್ದರು. ದೇವರ ಕೈ ಅವರ ಮೇಲಿದ್ದುದರಿಂದ ಅವರ ಹಾದುಹೋಗುವ ದೇಶದ ಜನರೆಲ್ಲಾ ಅವರಿಗೆ ಬಹಳವಾಗಿ ಅಂಜಿದರು, ಅಂಥಾ ದೇಶಗಳಲ್ಲಿ ಮೋವಾಬ್ ಒಂದಾಗಿತ್ತು. ಮೋವಾಬಿನ ಅರಸನಾದ ಬಾಲಾಕನು, ಬಿಳಾಮನನ್ನು ಇಸ್ರಾಯೇಲ್ಯರನ್ನು ಶಪಿಸಲು, ಕಾಣಿಕೆಕೊಟ್ಟು

ಕರೆಸಿದನು. ಆದರೆ ಬಿಳಾಮನು ಇಸ್ರಾಯೇಲ್ಯರನ್ನು ಶಪಿಸಲು ಬಾಯ್ತೆರೆದಾಗಲೆಲ್ಲಾ, ಅವರನ್ನು ಶಪಿಸದೆ ಸಂಪೂರ್ಣವಾಗಿ ಆಶೀರ್ವದಿಸುತ್ತಿದ್ದನು. ಆದರೆ ಬಿಳಾಮನು ದೇವರಿಗೆ ಹೆದರಿ ಸುಮ್ಮನಿರದೆ, ಮೊವಾಬ್ಯರಿಗೆ, ಇಸ್ರಾಯೇಲ್ಯರನ್ನು ಬಾಳ್‌ದೇವರಿಗೆ ಅಡ್ಡಬೀಳುವಂತೆ ಪ್ರೇರೇಪಿಸಲು ಹೇಳಿದನು. ಬಹಳ ಸುಂದರವಾದ ಮೋಹಾಬ್ ಹೆಣ್ಣುಮಕ್ಕಳನ್ನು ಇಸ್ರಾಯೇಲ್ಯರ ಮಧ್ಯೆ ಕಳುಹಿಸಿ, ಆ ಹೆಂಗಸರು ತಮ್ಮ ಸೌಂದರ್ಯದಿಂದ ಇಸ್ರಾಯೇಲ್ಯರನ್ನು ದುರ್ಮಾರ್ಗಕ್ಕೆ ಸೆಳೆದು ವಿಗ್ರಹಾರಾಧನೆ ಮಾಡಿಸುವಂತೆ ಸಲಹೆ ಕೊಟ್ಟನು. ಅವನ ಕುತಂತ್ರ ಫಲಿಸಿತು ಮತ್ತು ಬಹುಬೇಗ ಬಹಳ ಇಸ್ರಾಯೇಲ್ಯರು ಆ ಹೆಂಗಸರ ಮೋಹಾಪಾಶಕ್ಕೆ ಸೆಳೆಯಲ್ಪಟ್ಟು, ಅವರ ದೇವರುಗಳಿಗೆ ಅಡ್ಡ ಬಿದ್ದರು.

ಆ ಘಟನೆಯ ಭಾಗವನ್ನು ವಿಸ್ತಾರವಾಗಿ ಕಲಿಯುವುದು : ಮೊವಾಬ್ಯರಿಂದ ದುರ್ಮಾರ್ಗಕ್ಕೆ ಸೆಳೆಯಲ್ಪಟ್ಟ ನಂತರ, ಇಸ್ರಾಯೇಲ್ಯರು ಈ ಮುಂಬರುವ ಪಾಪಗಳನ್ನು ಮಾಡಿದರು: ಅವರು ಮೋವಾಬಿನ ಪುತ್ರಿಯರ ಸಂಗಡ ಜಾರತ್ವ ಮಾಡಲಾರಂಭಿಸಿದರು. ಅವರ ದೇವರುಗಳಿಗೆ ಬಲಿಗಳನ್ನು ಅರ್ಪಿಸಿ, ಅದನ್ನು ತಿಂದು, ಅವರ ದೇವರುಗಳಿಗೆ ಅಡ್ಡಬಿದ್ದರು. ಇಸ್ರಾಯೇಲ್ಯರು ಬಾಳ್‌ಪೆಯೋರಿಗೆ ತಾನೇ ಕೂಡಿ ಪೂಜಿಸಿದ್ದರಿಂದ ಯೆಹೋವನು ಇಸ್ರಾಯೇಲಿನ ಮೇಲೆ ಕೋಪಾಗ್ನಿ ಉರಿಸಿದನು.

ಪರಿಣಾಮ : ಒಂದು ಮಾರಕ ವ್ಯಾಧಿ ಉಂಟಾಗಿ 24,000 ಇಸ್ರಾಯೇಲ್ಯರು ಆ ದಿನ ಮರಣ ಹೊಂದಿದರು. ಆದರೆ ನಮ್ಮಲ್ಲಿ ಹಲವರು, ನಮ್ಮ ಪ್ರೀತಿಭರಿತ ದೇವರು ಇಷ್ಟೊಂದು ಕೋಪದಿಂದ ಇಂಥಾ ಕಾರ್ಯ ಮಾಡಬಹುದೇ ? ಎಂದು ಕೇಳಬಹುದು. ಆದರೆ ಅದೊಂದು ಬೇರೆಯಾಗಿಯೇ ಕಲಿಯುವ ವಿಶೇಷ ಪಾಠ. ಕೆಟ್ಟದ್ದನ್ನು ದ್ವೇಶಿಸದ ಪ್ರೀತಿ, ಅಂಥಾ ಪ್ರೀತಿಯ ಬಗ್ಗೆ ಸತ್ಯವೇಧ ಮಾತನಾಡುವುದಿಲ್ಲ. ಯಾರೋ ಹೇಳಿದ ಹಾಗೆ ದೇವರ ಪ್ರೀತಿಯ ಬಗ್ಗೆ ಒಂದು ದೊಡ್ಡ ಗ್ರಂಥ ಬರೆಯುವಾಗ, ದೇವರ ಕೋಪಾಗ್ನಿಯ ಕುರಿತು ಒಂದು ಅಧ್ಯಯನ ಅದರಲ್ಲಿರಬೇಕು.

ಆಗ ಜನರ ಮುಖ್ಯಸ್ಥರನ್ನೆಲ್ಲಾ ತೆಗೆದುಕೊಂಡು ಅವರನ್ನು ಸೂರ್ಯನಿಗೆದುರಾಗಿ ಯೆಹೋವನ ಮುಂದೆ ಕೊಂದುಹಾಕಲು ದೇವರು ಅಜ್ಞಾಪಿಸಿದರು. ಇಸ್ರಾಯೇಲರಲ್ಲಿ ಒಬ್ಬನಾದ ಜಿಮ್ರೀ, ಸಿಮೊಯೋನ್ಯರ ಪ್ರಧಾನನಾದಸಾಲೂವಿನ ಮಗನು, ದೇವದರ್ಶನ ಗುಡಾರದ ಮುಂದೆ ಅಳುತ್ತಿರುವ ಇಸ್ರಾಯೇಲರ ಸಮಸ್ತಸಮೂಹಕ್ಕೂ ಕಾಣುವ ಹಾಗೆ, ಡೇರೆಯೊಳಗೆ ಮಿದ್ಯಾನ ಸ್ತ್ರೀಯಾದ ಕೊಜ್ಜಿ ಎಂಬವಳನ್ನು ಕರೆತಂದನು. ಅವಳು ಮಿದ್ಯಾನರ ಮುಖ್ಯಸ್ಥನಾದ ಚೂರನ ಮಗಳಾಗಿದ್ದಳು. ಅವನು ಅವಳನ್ನು ಮೋಶೆಯ ಕಣ್ಣೆದುರಾಗಿಯೇ ಕರೆದುಕೊಂಡು ಹೋಗಿ ತನ್ನ ಡೇರೆಯೊಳಗೆ ಹೋದನು. ಇದನ್ನು ನೋಡಿದ ಕೊಡಲೇ ಪೀನೆಹಾಸನು, ಜನರ ಮಧ್ಯದಿಂದ ಎದ್ದು ತನ್ನ ಕೈಯಲ್ಲಿ ಈಟಿ ಹಿಡಿದು, ಜಿಮ್ರೀಯನ್ನು ಡೇರೆಯೊಳಗೆ ಹಿಂಬಾಲಿಸಿ, ಜಿಮ್ರೀ ಮತ್ತು ಕೊಜ್ಜಿ ಇಬ್ಬರ ಹೊಟ್ಟೆಯನ್ನೂ ಒಂದೇ ಬಾರಿಗೆ ಈಟಿಯಿಂದ ತಿವಿದನು. ಇಬ್ಬರ ಕುಟುಂಬಗಳು ತುಂಬಾ ಪ್ರಭಾವಶಾಲಿ ಎಂದು ತಿಳಿದಿದ್ದರೂ,

ಭಯಪಡದೆ ಈ ಕಾರ್ಯವನ್ನು ಪೀನೆಹಾಸನು ಮಾಡಿದನು ಆಗಲೇ ಇಸ್ರಾಯೇಲರಿಗೆ ಉಂಟಾಗಿದ್ದ ಭಯಂಕರ ವ್ಯಾಧಿಯು ನಿಂತುಹೋಯಿತು.

ಜೆಮ್ರೀಯ ಪಾಪದ ಆಳ ಏನಾಗಿತ್ತು ? ಜೆಮ್ರೀ ಏಕೆ ಶಿಕ್ಷೆಗೊಳ್ಳ ಬೇಕಾಯಿತು ?
ಜೆಮ್ರೀಗೆ ವಾಸ್ತವವಾಗಿ ನಡೆದಿರುವ ಸಂಗತಿಯ ಬಗ್ಗೆ ಕಾಳಜಿಯಿರಲಿಲ್ಲ. ದೇವರ ಕೋಪಾಗ್ನಿಯು ಉಂಟುಮಾಡಿದ ಭಯಂಕರ ವ್ಯಾಧಿಯಿಂದ ಈಗಾಗಲೇ 24,000 ಜನರು ಸತ್ತಿದ್ದರು. ಮೋಶೆಯು ಜನರ ಮುಖ್ಯಸ್ಥರೊಂದಿಗೆ ಸಭೆಸೇರಿಸಿದ್ದನು. ದೇವರ ಗುಡಾರದ ಮುಂದೆ ಸಮಸ್ತ ಇಸ್ರಾಯೇಲ್ಯರು ಕುಳಿತು ಆಳುತ್ತಿದ್ದರು, ಆದರೆ ಜೆಮ್ರೀ ಎಷ್ಟು ಪಾಪ ಮತ್ತು ಅದು ಕೊಡುವ ಇಂದ್ರಿಯ ಭೋಗದಿಂದ ತುಂಬಿಹೋಗಿದ್ದನೆಂದರೆ, ಅವನು ಆ ಸ್ತ್ರೀಯನ್ನು ತನ್ನ ಡೇರೆಯೊಳಗೆ ಮೋಶೆಯ ಕಣ್ಣೆದುರಾಗಿಯೇ ಕರೆದು ಕೊಂಡು ಹೋದನು (ಅದು ಅಧಿಕಾರಕ್ಕೆ ತೋರಿಸುವ ಘೋರ ಎಲ್ಲೆಯಿಲ್ಲದ ಅವಮರ್ಯಾದೆಯಾಗಿತ್ತು)

ಪಾಪವು ಅಂಥಾದ್ದನ್ನೇ ನಮ್ಮಲ್ಲಿಯೂ ಉಂಟುಮಾಡುತ್ತದೆ. ನಿಮ್ಮಲ್ಲಿ ಯಾವುದಾದರೂ ಅಂಥಾ ಪಾಪ, ನಿಮ್ಮ ಸುತ್ತ ನಡೆಯುತ್ತಿರುವ ವಾಸ್ತವ ಸಂಗತಿಗಳಿಂದ ದೂರವಿರಿಸಿ, ನಿಮ್ಮನ್ನು ಆವರಿಸಿಕೊಂಡಿದೆಯೇ ?

ಪೀನೆಹಾಸನು ಹೇಗೆ ನಮ್ಮ ಈ ದಿನದ ಪಾಠದ ಕಥಾನಾಯಕನಾಗಿದ್ದಾನೆ ?
ಅವನಿಗೆ ವಾಸ್ತವವಾಗಿ ನಡೆಯುವ ಸಂಗತಿಗಳಲ್ಲಿ ಕಾಳಜಿಯಿತ್ತು, ದೇವರಿಗೆ ನೋವುಂಟು ಮಾಡುವುದು ಅವನಿಗೂ ನೋವಾಗಿ ಪರಿಣಮಿಸಿತು. ಏಕೆಂದರೆ ದೇವರೇ ಪೀನೆಹಾಸನ ಬಗ್ಗೆ ಮೋಶೆಯ ಮುಂದೆ ಮೆಚ್ಚುಗೆ ವ್ಯಕ್ತಪಡಿಸಿದರು. ಆರೋನನ ಮೊಮ್ಮಗನೂ ಎಲಿಯಾಜರನ ಮಗ ಪೀನೆಹಾಸನು ಇಸ್ರಾಯೇಲರಲ್ಲಿ ನನಗೋಸ್ಕರ ಆಸಕ್ತನಾಗಿದ್ದು ನಾನು ನನ್ನ ರೋಷದಿಂದೆ ಅವರನ್ನು ನಾಶಮಾಡದ ಹಾಗೆ ನನ್ನ ಕೋಪವನ್ನು ಅವರ ಮೇಲಿನಿಂದ ತಿರುಗಿಸಿ ಬಿಟ್ಟಿದ್ದಾನೆ

ನೀವು ಯಾರ ಘನತೆಯ ಬಗ್ಗೆ ತುಂಬಾ ಕಾಳಜಿಯಿಂದಿದ್ದೀರಿ ? ಬಹಳ ಸಾರಿ ನಾವು ದೇವರ ಘನತೆಗಿಂತ ನಮ್ಮ ಘನತೆಯ ಬಗ್ಗೆ ಬಹಳ ಕಾಳಜಿ ವಹಿಸುತ್ತೇವೆ. ನಾವು ನಮ್ಮ ಘನತೆಯ ಬಗ್ಗೆ ಕಾಳಜಿ ವಹಿಸಿ ಈ ಪ್ರಪಂಚದಲ್ಲಿ ಕಥಾನಾಯಕರಾಗಿ ಮೆರೆಯಬಹುದು, ಆದರೆ ದೇವರ ಕಣ್ಮುಂದೆ ಬರೀ ಸೊನ್ನೆಯಾಗಬಹುದು. ಪೀನೆಹಾಸನಿಗೆ ದೇವರ ಘನತೆಯ ಬಗ್ಗೆ ಇದ್ದ ಕಾಳಜಿ ಅವನನ್ನು ಕಥಾನಾಯಕನನ್ನಾಗಿಸಿತು. ಪೀನೆಹಾಸನು ತನಗಿಂತ, ತನ್ನ ಜೀವಕ್ಕಿಂತ ದೇವರ ಘನತೆಯೇ ಮುಖ್ಯವೆಂದೆಣಿದಲು. ಆದರಿಂದ ಅವನನ್ನೂ ಅವನ ಸಂತತಿಯನ್ನೂ ದೇವರು ಆಶೀರ್ವದಿಸಿದರು. ಅವನು ಮತ್ತು ಅವನ ಸಂತತಿಗೆ ನಿತ್ಯ ಯಾಜಕತ್ವದ ಒಡಂಬಡಿಕೆ ಉಂಟಾಯಿತು. ಅದೇ ಒಡಂಬಡಿಕೆ

ನಾವು ದೇವರನ್ನು ನಮಗಿಂತ ಹೆಚ್ಚಾಗಿ ಘನಪಡಿಸುವುದರಿಂದ ನಮ್ಮಲ್ಲಿ ಉಂಟಾಗುವುದು.

ಅನ್ವಯ :

1. ನಾವು ದೇವರ ಬಗ್ಗೆ ಎಂಥಾ ಒಂದು ಭಾವನೆ ನಮ್ಮಲ್ಲಿಟ್ಟುಕೊಂಡಿದ್ದೇವೆ ?
2. ಈ ಜೀವನದಲ್ಲಿ ಯಾವ ವಿಷಯಗಳು ನಿಮ್ಮನ್ನು ಎಷ್ಟು ಆವರಿಸಿಕೊಂಡಿವೆಯೆಂದರೆ ನಿಮ್ಮ ಸುತ್ತ ನಡೆಯುತ್ತಿರುವ ವಾಸ್ತವಕ್ಕೆ ಕುರುಡರಾಗಿ ದೇವರಿಗೆ ಅಗೌರವ ತರುತ್ತಿವೆಯಾ ?
3. ನಿಮಗಿಂತಾ ಹೆಚ್ಚಾಗಿ ದೇವರಿಗೆ ಘನತೆ ಉಂಟುಮಾಡಲು, ನೀವು ಕಾರ್ಯರೂಪದಲ್ಲಿ ಮಾಡಬೇಕಾದ ಕೆಲವು ಸೂಕ್ತವಿಷಯಗಳಾವುವು ?

## ಯಾಯೇಲಳು

ದಿನ 3 ಜನವರಿ 3

### ನ್ಯಾಯಸ್ಥಾಪಕರು 4:17-24

ಒಂದು ಕರಾಳ ಯುದ್ಧದ ದೃಶ್ಯವನ್ನು ನಾವು ನೋಡುತ್ತಿದ್ದೇವೆ. ಶತ್ರುಸೈನ್ಯಕ್ಕೆ ಸೋಲು ಉಂಟಾಗಿ, ಸೋಲುವ ಸೈನ್ಯದ ಸೇನಾಧಿಕಾರಿ ಓಡಿ ಹೋಗುತ್ತಾನೆ. ಅವನು ಕೇನ್ಯನಾದ ಹೆಬೆರನ ಹೆಂಡತಿಯಾದ ಯಾಯೇಲಳ ಗುಡಾರಕ್ಕೆ ಓಡಿ ಬಂದನು. ಅವನು ಇದೊಂದು ಅಡಗಿಕೊಳ್ಳಲು ಸುರಕ್ಷಿತವಾದ ಸ್ಥಳ, ಇಲ್ಲಿ ಯಾರೂ ನನ್ನನ್ನು ಸೆರೆ ಹಿಡಿಯಲು ಸಾಧ್ಯವಿಲ್ಲ ಎಂದುಕೊಂಡನು. ಕೇನ್ಯ ಜನಾಂಗವು ಇಸ್ರಾಯೇಲರೊಡನೆ ಒಪ್ಪಂದ ಮಾಡಿಕೊಂಡಿದ್ದರು. ಆದರೂ ಯಾಬೀನನೆಂಬ ಹಾಚೋರಿನ ಅರಸನಿಗೂ ಕೆನ್ಯನಾದ ಹೆಬೆರಿನ ಮನೆಗೂ ಶಾಂತಿಯಿತ್ತು. ಅವನ ಕುಲದವರು ಇಸ್ರಾಯೇಲ ಸೈನ್ಯದ ಆಗುಹೋಗುಗಳನ್ನು ಶತ್ರು ಸೈನ್ಯಕೆ ಗುಪ್ತವಾಗಿ ತಿಳಿಸುತ್ತಿದ್ದರು. ಆದರೆ ಅವಳ ಗಂಡನ ಹಾಗಿರದೆ, ಯಾಯೇಲಳು ಇಸ್ರಾಯೇಲರಿಗೆ ನಿಷ್ಠೆಯಿಂದಿರಲು ನಿಶ್ಚಯಿಸಿದ್ದಳು, ಮತ್ತು ಆ ವಿಷಯವನ್ನು ತನ್ನಲ್ಲೇ ಇಟ್ಟುಕೊಂಡಿದ್ದಳು.

ಸೀಸೆರನಿಗೆ ಅವಳ ನಿಷ್ಠೆಯ ಬಗ್ಗೆ ಯಾವ ವಿಧವಾದ ಸಂದೇಹವಿರಲಿಲ್ಲ. ಅವನ ನಿಷ್ಠೆಯ ಸೇವಕನ ಹೆಂಡತಿಯಾದ್ದರಿಂದ, ಏನೂ ಭಯಪಡದೆ ತುಂಬಾ ವಿರಾಮದಿಂದ ಅವಳ ಗುಡಾರದೊಳಗೆ ಹೋದನು. ಯುದ್ಧದಿಂದ ಬೇಸತ್ತು, ಪ್ರಾಣಭಯದಿಂದ ಓಡಿ ತುಂಬಾ ಆಯಾಸವಾಗಿದ್ದರಿಂದಲೂ ಮತ್ತು ತನಗೆ ಗೊತ್ತಿದ್ದ ನಂಬಿಕಸ್ಥರ ಮನೆಯಾಗಿದ್ದರಿಂದ ಯಾವ ಕೇಡೂ ಆಗದೆಂದು ವಿರಮಿಸಲು ತೊಡಗಿದನು.

ಯಾಯೇಲಳು ಒಬ್ಬ ಕರ್ತವ್ಯ ನಿಷ್ಠ, ಅತಿಥಿ ಸತ್ಕಾರಮಾಡುವ, ಗೌರವಕೊಡುವ, ಕಾಳಜಿಯುಳ್ಳ ಪತ್ನಿಯಾಗಿದ್ದಳು, ಆದರೂ ಅವಳಲ್ಲಿ ಇಸ್ರಾಯೇಲ್ ಜನಾಂಗದ ಬಗ್ಗೆ ಒಂದು ತೀವ್ರ

ಅರ್ಪಣಾಭಾವವಿತ್ತು. ಆದರಿಂದಲೇ ಅವಳು ಎಲ್ಲಾ ಸಂಪ್ರದಾಯಕ್ಕೆ ವಿರುದ್ಧವಾಗಿ ತನ್ನ ನಿಸ್ಸಂದೇಹವಾದಿ ವಿಧೇಯತೆಯಿಂದ, ದೇವರ ಒಂದು ಅದ್ಭುತ ಯೋಜನೆಯಲ್ಲಿ ಪಾಲ್ಗೊಳ್ಳಲು ಕರೆಯಲ್ಪಟ್ಟಳು, ಆ ಯೋಜನೆ ಇಸ್ರಾಯೇಲರಿಗೆ ವಿಜಯ ತಂದುಕೊಟ್ಟಿತು. ತನ್ನ ಜವಾಬ್ದಾರಿಯ ಬಗ್ಗೆ ಅವಳಿಗೆ ಒಳ್ಳೆಯ ತಿಳುವಳಿಕೆ ಮತ್ತು ಒಂದು ಸ್ಪಷ್ಟ ಗುರಿಯಿತ್ತು. ತನ್ನ ಕರ್ತವ್ಯ ಅವಳು ತುಂಬಾ ಧೈರ್ಯ, ಗಟ್ಟಿಹೃದಯದಿಂದ ತುಂಬಾ ಆಪತ್ತಿನ ಸಮಯದಲ್ಲಿಯೂ ಸ್ಥೈರ್ಯಗೆಡಗೆ ನಿರ್ವಹಿಸಿದಳು. ಯಾಯೇಲಳು ಆ ಸಮಯದವರೆಗೆ ಒಬ್ಬ ಸಾಧಾರಣ ಸ್ತ್ರೀಯಾಗಿ ತನ್ನ ಮನೆತನವನ್ನು, ಕುಟುಂಬವನ್ನು ಪಾಲಿಸಿ ಯಾರಿಗೂ ತಿಳಿಯದೆ ಜೀವನ ಸಾಗಿಸುತ್ತಿದ್ದಳು.

ಆದರೆ ಇಸ್ರಾಯೇಲ್ ಚರಿತ್ರೆಯಲ್ಲಿ ಒಂದು ವಿಶೇಷ ಪಾತ್ರ ಮತ್ತು ಉದ್ದೇಶದಿಂದ ದೇವರು ಅವಳನ್ನು ಸಿದ್ಧಪಡಿಸುತ್ತಿದ್ದರು, ಅವಳೂ ಸಹ ದೇವರು ಅವಳ ಹೃದಯದಲ್ಲಿ ಹಾಕಿದ ಕಾರ್ಯವನ್ನು ನೆರವೇರಿಸಲು ಹಿಂದುಮುಂದು ನೋಡಲಿಲ್ಲ. ದೇವರ ಉದ್ದೇಶಗಳನ್ನು ನೆರವೇರಿಸಲು ನಮಗೂ ಕೂಡ ಯಾವ ದೊಡ್ಡ ಪದವಿ, ಬಿರುದು ಬೇಕಾಗಿಲ್ಲ. ದೇವರಿಂದ ಉಪಯೋಗಿಸಲ್ಪಡಲು ನಮ್ಮಲ್ಲಿ ಎಲ್ಲಾ ತೆರನಾದ ಶಕ್ತಿ ಮತ್ತು ಪ್ರತಿಭೆಗಳಿವೆ, ಆ ಕಾಲದಲ್ಲಿ ಸ್ತ್ರೀಯರೇ ಡೇರೆಗಳನ್ನು ಕಟ್ಟುತ್ತಿದ್ದರು, ಆದ್ದರಿಂದ ಯಾಯೇಲಳಿಗೆ ಡೇರೆ ಮೊಳೆ ಹೊಡೆಯುವ ಪ್ರಾವೀಣ್ಯವಿತ್ತು. ತನಗೆ ಗೊತ್ತಿದ್ದ ಪ್ರಾವೀಣ್ಯದಿಂದ, ಅವಳು ತನ್ನ ಕರ್ತವ್ಯ ನಿರ್ವಹಿಸಿ ದೇವರಿಗೆ ಮಹಿಮೆ, ಮತ್ತು ಅವನ ಜನಾಂಗಕ್ಕೆ ಜಯ ತಂದಳು. ಒಂದು ಸಣ್ಣ ಪ್ರತಿಭೆ, ಒಂದು ಸರಿಯಾದ ಸಮಯದಲ್ಲಿ ತೆಗೆದುಕೊಂಡ ಸೂಕ್ಷ್ಮನಿರ್ಣಯ ದೇವರ ಜನಾಂಗಕ್ಕೆ ಪೂರ್ಣ ವಿಜಯ ತಂದುಕೊಟ್ಟಿತು, ಯಾರಾದರೂ ಬಂದು ಈ ಕೆಲಸ ಮಾಡಲಿ ಎಂದು ಅವಳು ಕಾಯಲಿಲ್ಲ. ಬಾರಾಕನು ಬಂದು ಬೇಕಾದರೆ ಅವನ ಕರ್ತವ್ಯ ಮಾಡಲಿ ಎಂದು ಅವಳು ಕಾಯಬಹುದಾಗಿತ್ತು. ಆದರೆ ಅವಳು ಹಾಗೆ ಮಾಡಲಿಲ್ಲ ಅವಳು ಸಂದರ್ಭ ಬಂದಾಗ ಥಟ್ಟನೆ ಆಲೋಚಿಸಿ ಉತ್ಸುಕತೆಯಿಂದ ಕಾರ್ಯಮಾಡಿದಳು.

## ನ್ಯಾಯಸ್ಥಾಪಕರು 5:24-27.

ದೇವರಿಗೆ ಜಯಕಾರ ಮೊಳಗುವಾಗ ದೆಬೋರಳು, ದೇವರ ಕರೆಗೆ ವಿಧೇಯಳಾದ ಯಾಯೇಲಳು ಸ್ತ್ರೀಯರಲ್ಲಿ ಅತ್ಯಂತ ಆಶೀರ್ವಾದ ಹೊಂದಿದವಳು ಎಂದು ಹಾಡಿದಳು.

ಯಾಯೇಲಳ ಹಾಗೆ, ನಿಮ್ಮ ಮನೆಯಲ್ಲಿ ನೀವೊಬ್ಬರೇ ದೇವರಿಗಾಗಿ ನಿಲ್ಲಬೇಕಾದರೆ, ನೀವು ನಿಲ್ಲುವಿರೊ ಅಥವಾ ಬಯದಿಂದ ಎಲ್ಲರೂ ಮಾಡುವ ಹಾಗೆ ಬಿಟ್ಟುಕೊಡುವಿರೋ ?

ನಿಮ್ಮ ಹತ್ತಿರದ ಸಂಬಂಧಿಗಳು, ನಿಮ್ಮ ಗಂಡ /ಹೆಂಡತಿ, ಸಹೋದರ /ಸಹೋದರಿ, ನಿಮ್ಮ ಸ್ನೇಹಿತರು, ಅಥವಾ ನಿಮಗೆ ದಾರಿನಡೆಸುವವರು, ಆತ್ಮಿಕವಲ್ಲದ ನಿರ್ಧಾರ ತೆಗೆದುಕೊಂಡರೆ ನಿಮ್ಮ ಪ್ರತಿಕ್ರಿಯೇ ಏನಾಗಿರುತ್ತದೆ ? ನೀವು ಅದಕ್ಕೆ ವಿರುದ್ಧವಾಗಿ ನಿಲ್ಲುವಿರೋ ? ಇಲ್ಲದಿದ್ದರೆ ನೀವು ಹಾಗೆ

ನಿಲ್ಲದಿರಲು ಕಾರಣವೇನು ? ಎಲ್ಲಾ ಸಂಪ್ರದಾಯಗಳ ವಿರುದ್ಧವಾಗಿ ದೇವರು ನಿಮಗೆ ಯಾವುದಾದರೂ ಪಾತ್ರವಹಿಸಲು ಕರೆಕೊಟ್ಟಾಗ ಅದನ್ನು ನೆರವೇರಿಸಲು ನಿಮಗೆ ಏನಾದರೂ ಸಂದೇಹ, ಗಲಿಬಿಲಿ ಉಂಟಾಗುವುದೇ ? ತುಂಬಾ ಗಂಡಾಂತರದ, ನಿಮಗೆ ಹಿತಕೊಡದ, ಅಪಾಯಕರ, ನಿಮ್ಮ ಸಾಮರ್ಥ್ಯಕ್ಕಿಂತ ಹೆಚ್ಚಾದ ವಿಷಯವಾಗಿದ್ದರೆ, ನಿಮ್ಮ ಪ್ರತಿಕ್ರಿಯೆ ಏನು ? ನೀವು ವಿಧೇಯರಾಗಿ ಅಂಗೀಕರಿಸುವಿರೋ ಅಥವಾ ದೇವರ ಜ್ಞಾನದ ಬಗ್ಗೆ ಪ್ರಶ್ನಿಸುವಿರೋ ?

ಯಾವುದಾದರೂ ಅಪರೂಪದ ಸದಾವಕಾಶ ಬಂದಾಗ ನೀವು ಖುದ್ದಾಗಿ ಆ ಕೆಲಸ ಮಾಡುವಿರೋ ಅಥವಾ ಯಾರಾದರೂ ಬಂದು ಮುಂದೆ ನಿಂತು ಮಾಡಲಿ, ನಾನು ಸುರಕ್ಷಿತವಾಗಿ ದೂರ ನಿಂತು ನೋಡುತ್ತೇನೆ ಎಂದುಕೊಳ್ಳುವಿರೋ ?

ನಿಮ್ಮ ಪ್ರತಿಭೆಗಳನ್ನು ದೇವರಿಗೆ ಮಹಿಮೆ ತರಲು ಉಪಯೋಗಿಸುತ್ತಿರುವಿರೋ ?

ಯಾಯೇಲಳು ಒಬ್ಬ ಸಾಧಾರಣ ಸ್ತ್ರೀ ಮಾಡುವಂಥದ್ದನ್ನು ಮಾಡದೆ ಬಹಳ ವ್ಯತ್ಯಾಸವಾದ ತೀವ್ರ ಸ್ವರೂಪದ ಕಾರ್ಯ ಮಾಡಿದಳು, ಅದಕ್ಕಾಗಿ ಅವಳು ಆಶೀರ್ವದಿಸಪಟ್ಟಳು. ನಾವು ಕೂಡ, ಎಲ್ಲೆಂದರಲ್ಲಿ, ಯಾವ ಸಮಯದಲ್ಲಾದರೂ, ಹೇಗಿದ್ದರೂ, ದೇವರ ಕರೆಗೆ ಸಿದ್ಧರಾಗಿದ್ದರೆ ಮಾತ್ರ ದೇವರಿಗೆ ಮಹಿಮೆ ತರಬಹುದು.

## ಬೋವಜ

ದಿನ 4 ಜನವರಿ 4

1 ತಿಮೋಥೆ 5:2 : ಯೌವನಸ್ಥರನ್ನು ಸಹೋದರರಂತೆಯೂ, ವೃದ್ಧ ಸ್ತ್ರೀಯರನ್ನು ತಾಯಿಯಂತೆಯೂ, ಯೌವನ ಸ್ತ್ರೀಯರನ್ನೂ ಪೂರ್ಣ ಪವಿತ್ರತೆಯಿಂದ ಸಹೋದರಿಯರಂತೆಯೂ ಅವರವರಿಗೆ ಬುದ್ಧಿ ಹೇಳು.

ಈ ವಾಕ್ಯವನ್ನು ಬರೆಯುವ ಬಹಳ ಕಾಲದ ಹಿಂದೆಯೇ ಬೋವಜನು ಹೀಗೆ ಜೀವಿಸಿದನು. ನವೋಮಿಯನ್ನು ತನ್ನ ತಾಯಿಯಂತೆ ಮತ್ತು ರೂತಳನ್ನು ಪೂರ್ಣ ಪವಿತ್ರತೆಯಿಂದ ನೋಡಿಕೊಂಡನು. ದುರ್ಬಲ ಸ್ತ್ರೀಯರು ಸಹ ನಂಬಬಹುದಾದ ವ್ಯಕ್ತಿತ್ವ ಅವನದಾಗಿತ್ತು. ನಾವು ಜೀವಿಸುತ್ತಿರುವ ಈ ಜಗತ್ತಿನಲ್ಲಿ ದುರ್ಬಲರ ದುರುಪಯೋಗ ಮಾಡುವುದೇ ಹೆಚ್ಚು ಆದರೆ ಬೋವಜನು ಇದನ್ನೆಲ್ಲಾ ಮೀರಿ ಜನರನ್ನು ಪೂರ್ಣ ಗೌರವದಿಂದ, ಮರ್ಯಾದೆಯಿಂದ ಆದರಿಸುತ್ತಿದ್ದನು.

## 1. ಬೋವಜ : ಅನುಕರಿಸಲು ಯೋಗ್ಯನಾದ ಮನುಷ್ಯ :

ನಮ್ಮ ಹೆಣ್ಣು ಮಕ್ಕಳು ಮದುವೆಯಾಗುವ ಹುಡುಗ ಹೀಗಿರಬೇಕು ಅಥವಾ ನಮ್ಮ ಅಳಿಯ ಈ ಗುಣಗಳನ್ನು ಅನುಕರಿಸಬೇಕು ಎಂದು ಆಶಿಸುವ ಹಾಗಿದ್ದ ಬೋವಜ.

## ರೂತಳು 8-9

ಬೋವಜನು ರೂತಳ ಬಗ್ಗೆ ಕೆಲವರನ್ನು ಕೇಳಿದಾಗ, ಅವಳು ಬಹಳ ಕಷ್ಟ ಪಟ್ಟು ಕೆಲಸಮಾಡುವವಳು ಮತ್ತು ತನ್ನ ಅತ್ತೆಯನ್ನು ಎಡೆಬಿಡದೆ ನೋಡಿಕೊಳ್ಳುತ್ತಾಳೆ ಎಂಬುದನ್ನು ಕಂಡುಕೊಂಡನು. ಅವಳು ಹೆದರಬಹುದು ಎಂದುಕೊಂಡು ಅಕ್ಕರೆಯಿಂದ ನನ್ನ ಮಗಳೇ ಎಂದು ಹೇಳಿದನು. ಅದರಿಂದ ಅವರ ಮಧ್ಯೆ ಇರುವ ಸಂಬಂಧದಲ್ಲಿ ಒಂದು ಎಲ್ಲೆಯುಂಟಾಯಿತು. ಅವನ ಮಾತಿನಿಂದ ಅವಳಿಗೆ ಕೆಳಗಿನ ಭಾವನೆಗಳು ಮೂಡಿದವು :

ಸುರಕ್ಷತೆ : ಇಲ್ಲಿಯೇ ನನ್ನ ದಾಸಿಗಳ ಸಂಗಡ ಕೆಲಸಮಾಡಿಕೊಂಡಿರು

ರಕ್ಷಣೆ : ಯಾವನಾದರೂ ನಿನ್ನನ್ನು ಮುಟ್ಟದ ಹಾಗೆ ಅಜ್ಞಾಪಿಸಿದ್ದೇನೆ. ಅವನಿಗೆ ಬೇರೆ ಮನುಷ್ಯರ ಬಗ್ಗೆ ಸಂದೇಹವಿದ್ದಿರಬಹುದು, ಆದರೆ ಅವರ್‍ಯಾರೂ ಅವಳನ್ನು ಮುಟ್ಟಲಾರರು ಎಂದು ಆಶ್ವಾಸನೆ ಕೊಟ್ಟನು.

ಗೌರವ : ಅವಳಿಗೆ ದಾಹವಾದರೆ ಏನು ಮಾಡಬೇಕು ಎಂದು ಸೂಕ್ಷ್ಮವಾಗಿ ತಿಳಿಸಿದನು. ಅದರಿಂದ ಅವಳ ಬೇಕುಬೇಡಗಳ ಬಗ್ಗೆ ಕಳಕಳಿಯಿಂದಿದ್ದನು.

## ರೂತಳು 2:22-23

ನವೋಮಿಗೆ ಬೋವಜನು ಒಬ್ಬ ಒಳ್ಳೆಯ ಮನುಷ್ಯ, ತನ್ನ ಕರ್ತವ್ಯದ ಬಗ್ಗೆ ತುಂಬಾ ಜವಾಬ್ದಾರಿಯಿದೆ ಎಂಬ ವಿಷಯ ತಿಳಿದುಕೊಂಡಳು. ರೂತಳು ಬೇರೆ ಯುವಕರ ಹಿಂದೆ ಹೋಗದೆ, ತನ್ನ ಅತ್ತೆಯ ಜೊತೆ ಗೌರವದಿಂದ ಬಾಳುವುದನ್ನು ಕಂಡು ಅವಳನ್ನು ಪ್ರಶಂಶಿಸಿದನು. ಅವನ ಮಾತಿನ ಪ್ರಕಾರ ಯಾವಾಗಲೂ ಅವಳ ಜೊತೆ ಒಂದು ಮಿತಿಯಿಂದ ವರ್ತಿಸಿದನು. ಇದೆಲ್ಲಾ ಬೋವಜನ ಬಗ್ಗೆ ಏನು ಹೇಳುತ್ತದೆ.

1. ಅವನು ತನ್ನ ನಂಬಿಕೆಗಳ ಬಗ್ಗೆ ಸ್ಥಿರವಾಗಿದ್ದನು.
2. ಅವನು ತನ್ನ ಪರಿಸರಗಳಿಗೆ ತಲೆಬಾಗಲಿಲ್ಲ ಅಥವಾ ಪರಿಸರವನ್ನೇ ನೆಪವಾಗಿಟ್ಟು ಅವಿವೇಕಕ್ಕೆ ಈಡಾಗಲಿಲ್ಲ.
3. ನವೋಮಿ ಮತ್ತು ರೂತಳು ತುಂಬಾ ಕಷ್ಟದಿಂದ ಜೀವಿಸುತ್ತಿದ್ದಾರೆ ಎಂದು ತಿಳಿದು ಅವಳಿಗೆ

ಅರ್ಧಚೀಲದಷ್ಟು ಜವೆಗೋಧಿ ಸಿಗುವಂತೆ ಮಾಡಿದನು.
ಅವನ ಈ ನೀತಿವಂತಿಕೆಯನ್ನು ನೋಡಿ, ವಿಧವೆಗಳನ್ನು ಪಾಲಿಸುವ ದೇವರ ಬಗ್ಗೆ ಅವರ ನಂಬಿಕೆ ದೃಢವಾಗಿರಬಹುದು.

## ರೂತಳು 4:13-16

ಈ ಗ್ರಂಥದಲ್ಲಿ ಮೊದಲಿಗೆ ನವೋಮಿ ಒಬ್ಬ ಗತಿಯಿಲ್ಲದ ವಿಧವೆಯಾಗಿದ್ದಳು. ಆದರೆ ಗ್ರಂಥ ಕೊನೆಗೊಳ್ಳುವಾಗ, ಅವಳು ಒಬ್ಬ ಮೊಮ್ಮಗನನ್ನು ಕೈಯಲ್ಲಿ ಹಿಡಿದಿದ್ದಳು. ಕೂಡಲೇ ಆಕೆ ಕೃತಜ್ಞತೆಯಿಂದ ಬೋವಜನಿಗೋಸ್ಕರವೂ ಮತ್ತು ಮಗುವಾದ ಓಬೆದನಿಗೋಸ್ಕರ ದೇವರನ್ನು ಸ್ತುತಿಸಿದಳು. ಆ ಮಗು ಒಂದು ಸಾಧಾರಣ ಮಗುವಾಗಿರಲಿಲ್ಲ. ಏಕೆಂದರೆ ಆ ಓಬೆದನ ವಂಶದಿಂದಲೇ ಯೇಸು ಈ ಜಗತ್ತಿಗೆ ಬಂದರು.

ಆಲೋಚನೆ ಮಾಡು : ಹೇಗೆ ನಾನು ನನ್ನ ಗುಣಗಳಿಂದ ಪರರಿಗೆ ಒಂದು ಮಾದರಿಯಾಗಿ ಬೋವಜನ ಹಾಗೆ ಜನರನ್ನು ಪ್ರಭಾವಗೊಳಿಸಬಹುದು ?

# ಹನ್ನ

ದಿನ 5 ಜನವರಿ 5

ಹನ್ನಳು ನ್ಯಾಯಸ್ಥಾಪಕರ ಕಾಲದಲ್ಲಿ ಜೀವಿಸಿದ್ದಳು. ಆ ಕಾಲದಲ್ಲಿ ಒಬ್ಬೊಬ್ಬನು ತನ್ನ ದೃಷ್ಟಿಗೆ ಸರಿಯಾಗಿ ತೋಚಿದ್ದನ್ನು ಮಾಡುತ್ತಿದ್ದನು (ನಾಯಸ್ಥಾಪಕರು 21:25) ಪ್ರತಿ ವರ್ಷ ಲೇವಿಯನಾದ ಎಲ್ಕಾನನು ತನ್ನ ಕುಟುಂಬದೊಡನೆ. (1 ಪೂರ್ವಕಾಲವೃತ್ತಾಂತ 6:27) ಸರ್ವಶಕ್ತನಾದ ಯೆಹೋವನನ್ನು ಆರಾಧಿಸಲು ರಾಮಾತಾಯಿಮ್ ಪಟ್ಟಣದಿಂದ ಶೀಲೋವಿಗೆ ಪ್ರಯಾಣ ಮಾಡಿ ಅಲ್ಲಿ ದೇವಗುಡಾರದಲ್ಲಿ ಬಲಿಯನ್ನು ಅರ್ಪಿಸುತ್ತಿದ್ದನು. ಹನ್ನಳಿಗೆ ಮಕ್ಕಳಿರಲಿಲ್ಲ. ಆಗ ತನ್ನ ಗಂಡನಾದ ಎಲ್ಕಾನನ ಮತ್ತೊಬ್ಬ ಹೆಂಡತಿಯಾದ ಪೆನಿನ್ನ, ತುಂಬಾ ವರುಷ ಹನ್ನಳನ್ನು ಕಠಿಣವಾಗಿ ಕೆಣಕಿ ಭಾದಿಸುತ್ತಿದ್ದಳು. ಆಗ ಹನ್ನ ಏನೂ ತಿನ್ನದೆ ಬಹಳವಾಗಿ ಅಳುತ್ತಿದ್ದಳು. ಬೇರೆಯವರು ನಮಗೆ ದುಃಖ ಕೊಡಬಹುದು, ಆದರೆ ಆ ನೋವಿಗೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದು ನಮ್ಮ ಆಯ್ಕೆಯಾಗಿದೆ.

ದೇವರು ಅವಳ ಗರ್ಭವನ್ನು ಮುಚ್ಚಿಬಿಟ್ಟಿದ್ದರೂ (ವಚನ 1:5) ಅವಳು ದೇವರ ಬಗ್ಗೆ ಉದಾರ ಮನಸ್ಸು ಇಟ್ಟುಗೊಂಡಿದ್ದಳು (1 ಸಮುವೇಲ 1:10) ಅವಳು ಬಹಳ ಭಾರವಾದ ಹೃದಯದಿಂದ ಮನಗುಂದಿ ಯೆಹೋವನನ್ನು ಪ್ರಾರ್ಥಿಸಿದಳು. ಆದರೆ ಅಲ್ಲಿದ್ದ ಯಾಜಕನು ಅವಳು ಅಮಲಿನಲ್ಲಿದ್ದಾಳೆಂದು ತಪ್ಪಾಗಿ ಭಾವಿಸಿದನು.

ವಚನ 13: ಹನ್ನಳು ತನ್ನ ಹೃದಯದಿಂದ ಪ್ರಾರ್ಥಿಸುತ್ತಿದ್ದಳು, ಮತ್ತು ಅವಳ ತುಟಿಗಳು ಮಾತ್ರ ಆಡಿಸುತ್ತಾ ಇದ್ದುದರಿಂದ ಅವಳ ಸ್ವರ ಕೇಳಿಸಲಿಲ್ಲ. ಆದ್ದರಿಂದ ಅವಳು ಅಮಲು ಏರಿದವಳು ಎಂದು

ನೆನಸಿದನು, ಹನ್ನಳಿಗೆ ದುಃಖ ಪಡಲು, ಕಹಿಭಾವನೆ ವ್ಯಕ್ತಮಾಡಲು ತುಂಬಾ ಕಾರಣಗಳಿದ್ದುವು, ಆದರೂ ಅವಳು ತನ್ನ ಭರವಸೆಯನ್ನು ಬಿಟ್ಟುಕೊಡದೆ ನಂಬಿಕೆಯಿಂದ ಪ್ರಾರ್ಥಿಸಿದಳು. ಅವಳು ಪ್ರಾಮಾಣಿಕತೆಯಿಂದ ತನ್ನ ಕಷ್ಟವನ್ನು ದೇವರ ಮುಂದೆ ಇಟ್ಟಳು, ತನ್ನ ಹೃದಯವನ್ನು ದೇವರ ಮುಂದೆ ಬಿಚ್ಚಿಟ್ಟಳು, ಅಪಾರ ನಂಬಿಕೆ ದೇವರಲ್ಲಿಟ್ಟಳು.

ಆದರೆ ಕೊನೆಯಲ್ಲಿ ನಾವು ಅವಳ ನಡವಳಿಕೆಯಲ್ಲಿ ಒಂದು ಪೂರ್ಣ ಬದಲಾವಣೆ ಕಾಣುತ್ತೇವೆ. ವಚನ 1:18ರಲ್ಲಿ ನಿನ್ನ ಸೇವಕಳಿಗೆ ನಿನ್ನ ದೃಷ್ಠಿಯಲ್ಲಿ ದಯೆ ಇರಲಿ ಎಂದು ಹೇಳಿ ಹೊರಟು ಹೋಗಿ ಊಟ ಮಾಡಿದಳು, ಆಮೇಲೆ ಅವಳ ಮುಖದಲ್ಲಿ ದುಃಖವು ಕಾಣಲಿಲ್ಲ. ಬಹಳ ವರ್ಷಗಳಿಂದ ಪ್ರಾರ್ಥಿಸುತ್ತಿದ್ದರೂ, ಪಲಿತಾಂಶ ಸಿಗದಿದ್ದರೂ, ಏಕೆ ಅವಳು ತನ್ನ ಭರವಸೆಯನ್ನು ಬಿಟ್ಟುಕೊಡಲಿಲ್ಲ? ಹೇಗೆ ಅವಳು ದೇವರ ಬಗ್ಗೆ ಕೋಪಗೊಳ್ಳದೆ, ಕಹಿತನ ವ್ಯಕ್ತಪಡಿಸಿದೆ, ನಿತ್ಯ ಪ್ರಾರ್ಥಿಸುತ್ತಿದ್ದಳು ಏಕೆ ಅವಳು ತನ್ನ ಗಂಡನನ್ನು ದೂರಲಿಲ್ಲ ಮತ್ತು ಪೆನಿನ್ನಳೊಡನೆ ಜಗಳ ಮಾಡಲಿಲ್ಲ? ಏಕೆ ಏಲಿಯ ಬಗ್ಗೆ ಕೆಟ್ಟ ಭಾವನೆ ಹೊಂದಲಿಲ್ಲ ?

ದೇವರು ಅವಳ ಆಶೆಯನ್ನು ಪೂರೈಸಿದಾಗ, ಹೇಗೆ ಅವಳು ಆ ಮಗುವನ್ನು ದೇವರಿಗರ್ಪಿಸಿ, ಎಲಿಯನನ್ನು ಆ ಮಗುವಿನ ಪೋಷಕನಾಗಿ ನೇಮಿಸಿದಳು ? ಅವಳ ಪ್ರಾರ್ಥನೆಯನ್ನು ನಾವು ಗಮನವಿಟ್ಟು ನೋಡಿದಾಗ ನಮಗೆ ಎಲ್ಲಾ ಉತ್ತರಗಳು ಸಿಗುತ್ತವೆ. ಅವಳು ಆರಾಧಿಸುವ ದೇವರ ಬಗ್ಗೆ ಅವಳಿಗೆ ಸ್ಪಷ್ಠ ತಿಳುವಳಿಕೆಯಿತ್ತು. ಅವಳಿಗೆ ಆ ದೇವರು ಅಪ್ಯಾಯಮಾನನಾಗಿದ್ದ.

ಯಾರೂ ದೇವರ ಹಾಗೆ ಪರಿಶುದ್ಧರಲ್ಲ, ನಮ್ಮ ದೇವರು ಆಶ್ರಯ ದುರ್ಗ (ವಚನ 2:2) ಯೆಹೋವನು ತಿಳುವಳಿಕೆಯುಳ್ಳ ದೇವರು, ಆತನಿಂದ ಕಾರ್ಯಗಳು ತೂಗಲ್ಪಡುತ್ತವೆ (2:3) ಯೆಹೋವನು ಕೊಲ್ಲುವಾತನೂ, ಬದುಕಿಸುವಾತನೂ ಆಗಿದ್ದಾನೆ (2:6) ಪಾತಾಳಕ್ಕೆ ಇಳಿಯುವಂತೆ ಮಾಡುತ್ತಾನೆ, ಮೇಲಕ್ಕೆ ತರುತ್ತಾನೆ (2:7) ಭೂಮಿಯ ಆಧಾರ ಸ್ಥಂಭಗಳು ಯೆಹೋವನದಾಗಿವೆ (2:8) ಅವನು ತನ್ನ ಪರಿಶುದ್ಧರ ಕಾಲುಗಳನ್ನು ಕಾಯುವನು (2:9) ಯೆಹೋವನು ಲೋಕಾಂತ್ಯದವರೆಗೂ ನ್ಯಾಯತೀರಿಸುವನು (2:10)

ಎಲಿಯ ಪುತ್ರರು ದುಷ್ಟರಾಗಿದ್ದರೂ, ಸಣ್ಣ ಸಮುವೇಲನು ಅವರ ಮಧ್ಯೆ ಬೆಳೆಯುತ್ತಾ ಬಂದು, ಯೆಹೋವನ ಮುಂದೆಯೂ, ಮನುಷ್ಯರ ಮುಂದೆಯೂ ಒಳ್ಳೆಯವನಾಗಿದ್ದನು (2:26) ಸಮುವೇಲನು ಒಬ್ಬ ಮಹಾನ್ಯಾಯಸ್ಥಾಪಕ, ದೀರ್ಘದರ್ಶಿ ಮತ್ತು ಯೋಜಕನಾದನು.

## ಅನ್ವಯ :

1. ಯಾವ ವಿಷಯಗಳಲ್ಲಿ ನೀವು ಭರವಸೆ ಕಳೆದುಕೊಂಡು, ಪ್ರಾರ್ಥಿಸುವುದನ್ನೇ ನಿಲ್ಲಿಸಿದ್ದಿರೋ ಆ ವಿಷಯಗಳ ಬಗ್ಗೆ ಪುನಃ ನಂಬಿಕೆಯಿಟ್ಟು ಪ್ರಾರ್ಥಿಸಿರಿ.

2. ದೇವರ ವಾಕ್ಯವನ್ನು ಆಳವಾಗಿ ಅಧ್ಯಯನ ಮಾಡಿ, ದೇವರ ಜೊತೆ ಉತ್ಕೃಷ್ಟಸಮಯ ಕಳೆದು, ದೇವರ ಬಗ್ಗೆ ಸ್ಪಷ್ಟ ತಿಳುವಳಿಕೆಯಿಂದಿರಿ.

## ಬೆತ್ಸಬೆಳ ಗಂಡನಾದ ಊರೀಯನು (2 ಸಾಮುವೇಲ 11) 6:2

ದಿನ 6 ಜನವರಿ 6

ಮನುಷ್ಯರ ಚರಿತ್ರೆಯನ್ನೆಲ್ಲಾ ನಾವು ನೋಡುವಾಗ, ಕೆಲವರು ತಾವು ಮಾಡಿದ ನೀಚ ಕೃತ್ಯಗಳನ್ನು, ವ್ಯಭಿಚಾರದ ಪಾಪಗಳನ್ನು ಮತ್ತು ಅನೇಕ ಅಪರಾಧಗಳನ್ನು ಮುಚ್ಚಿಡಲು ಪ್ರಯಾಸಗಳನ್ನು ಮಾಡುತ್ತಲೇ ಬರುತ್ತಿದ್ದಾರೆ.

ಬೈಬಲ್ಲಿನ ಪ್ರಾರಂಭದಲ್ಲೇ ನಾವು ನೋಡುವಾಗ ಆದಾಮ ಮತ್ತು ಅವ್ವಳು ತಮ್ಮ ಬೆತ್ತಲೆಯನ್ನು ದೇವರ ಮುಂದೆ ಮುಚ್ಚಿಡುವುದಕ್ಕೆ ಪ್ರಯತ್ನಿಸಿದರು. ಆದರೆ ಅವರ ಪ್ರಯಾಸಗಳೇ ಅವರನ್ನು ಪಾಪಿಗಳೆಂದು ದೂಷಣೆ ಮಾಡಿತು.

2 ಸಾಮುವೇಲ 11ನೇ ಅಧ್ಯಾಯದಲ್ಲಿ ಇಂತಹದೇ ಒಂದು ಮುಚ್ಚಿಡುವ ಪ್ರಯತ್ನ ನಡೆಯಿತೇ ಆದರೂ ಸಫಲವನ್ನು ಕಾಣಲಿಲ್ಲ.

ದಾವೀದನು, ಊರೀಯನು ಮತ್ತು ಬೆತ್ಸೆಬಳು ಇವರೆಲ್ಲರ ಮಧ್ಯ ಪರಿಚಯವಿತ್ತೆಂದು ನಾವು ಇಲ್ಲಿ ಕಾಣುತ್ತೇವೆ ದಾವೀದನ ಮಹಾ ಶೂರರಲ್ಲಿ ಒಬ್ಬನಾದ ಎಲಿಯಮನ ಮಗಳೇ ಬೆತ್ಸೆಬಳು. ದಾವೀದನಿಗೆ ಸಲಹೆಗಾರನಾಗಿದ್ದ ಅಹಿತೋಫೆಲನ ಮೊಮ್ಮಗಳೇ ಬೆತ್ಸೆಬಳು (2 ಸಾಮುವೇಲನು 23:34)

ದಾವೀದನ ಮಹಾಶೂರರ ಪಟ್ಟಿಯಲ್ಲಿ ಊರೀಯನು ಒಬ್ಬನಾಗಿದ್ದನು (2 ಸಾಮುವೇಲ 23:39, 1 ಪೂರ್ವ ಕಾಲವೃತ್ತಾಂತ 11:41). ದಾವೀದನು ಅಡುಲಾಮ್ ಗುಹೆಯಲ್ಲಿ ಅಡಗಿ ಕೊಂಡಿರುವಾಗ ಕೆಲವರು ಮಹಾಶೂರರು ದಾವೀದನ ಬಳಿಗೆ ಬಂದರು (1 ಸಾಮುವೇಲನು 22:1–2) ಅವರಲ್ಲಿ ಯೋವಾಬನು, ಅಬಿಷೈಯನು ಮತ್ತು ಅಸಹೇಲನು ದಾವೀದನ ಮೂರು ಪರಾಕ್ರಮಶಾಲಿಗಳಾಗಿದ್ದರೆಂದು ನಾವು ಊಹಿಸುತ್ತೇವೆ. (2 ಸಾಮುವೇಲನು 23:18, 24 ಮತ್ತು 1 ಪೂರ್ವಕಾಲವೃತ್ತಾಂತ 11:26)

ಇನ್ನು ಕೆಲವರು ಜಕ್‌ಲ್ಯಾಗ್ ಬಳಿ ದಾವೀದನ ಜೊತೆ ಸೇರಿಕೊಂಡರು. (1 ಪೂರ್ವಕಾಲವೃತ್ತಾಂತ 12:1) ಇನ್ನು ಕೆಲವು ಮಹಾಶೂರರು ಹೆಬ್ರಾನ್ ಬಳಿ ದಾವೀದನ ಜೊತೆ ಸೇರಿಕೊಂಡರು (1 ಪೂರ್ವಕಾಲವೃತ್ತಾಂತ 12:38–40)

ಊರೀಯನು ಯಾವಾಗ ಎಲ್ಲಿ ದಾವೀದನ ಬಳಿ ಸೇರಿಕೊಂಡನೆಂದು ನಮಗೆ ಖಚಿತವಾಗಿ ಮಾಹಿತಿಯಿಲ್ಲ. ಇವರಿಬ್ಬರಿಗೂ ಒಬ್ಬರಿಗೊಬ್ಬರ ನಡುವೆ ಪರಿಚಯವಿತ್ತೆಂದೂ, ಒಟ್ಟಿಗೆ ಸೇರಿಕೊಂಡು ಯುದ್ಧವನ್ನು ಮಾಡಿದ್ದಾರೆಂದೂ ನಾವು ಕಾಣುತ್ತೇವೆ. ದಾವೀದನು ಸೌಲನನಿಂದ ತಪ್ಪಿಸಿಕೊಂಡು ಹೋಗುವಾಗ ಊರೀಯನು ಇದ್ದಿರಬಹುದೆಂದು ನಾವು ಊಹಿಸುತ್ತೇವೆ.

ದಾವೀದನು ತಾನು ಮಾಡುತ್ತಿರುವುದು ತಪ್ಪು ಎಂದು ತಿಳಿದಿದ್ದರೂ ಸಹ ಅವನು ಮಾಡಿದನು. ನಾವು ಸಹ ಅನೇಕ ಭಾರಿ ಸೈತಾನನ ಮಾತುಗಳನ್ನು ಕೇಳಿ ಅನೇಕ ಪಾಪಗಳನ್ನು ಮಾಡುತ್ತೇವೆ. ನಿಮ್ಮ ಈ ಪಾಪಗಳಿಂದ ಯಾರಿಗೂ ಹಾನಿಯಾಗುವುದಿಲ್ಲವೆಂದು ಸೈತಾನನು ನಮ್ಮನ್ನು ನಂಬಿಸುತ್ತಾನೆ.

ದಾವೀದನು ಅವನ ಆಸೆಯ ಹಿಂದೆ ಹೋಗಿ ತಾತ್ಕಾಲಿಕ ಪಾಪವನ್ನು ಮಾಡುವಾಗ, ಆದರಿಂದಾಗುವ ಪರಿಣಾಮಗಳೆಲ್ಲಾ ಅವನಿಗೆ ತಿಳಿದಿದ್ದರೆ ಬಹುಶಹ ಅವನು ಪಾಪವನ್ನೇ ಮಾಡುತ್ತಿರಲಿಲ್ಲ.

ಮುಂದೆ ಎದುರಿಸಿದ ಪರಿಣಾಮಗಳೇನು ?

- ಬೇಕಿಲ್ಲದ ಗರ್ಭಧಾರಣೆ
- ನಂಬಿಗಸ್ಥನಾಗಿದ್ದ ಸ್ನೇಹಿತನ ಕೊಲೆ
- ಸತ್ತ ಕೂಸು
- ಸ್ವಂತ ಮಗನೇ, ತನ್ನ ಸ್ವಂತ ಮಗಳ ಮೇಲೆ ಅತ್ಯಾಚಾರವೆಸಗಿದ್ದು
- ಸ್ವಂತ ಮಗನೇ ಇನ್ನೊಬ್ಬ ಸ್ವಂತ ಮಗನನ್ನು ಕೊಂದಿದ್ದು.
- ಸ್ವಂತ ಮಗನೇ ತನ್ನನ್ನು ಕೊಲ್ಲಲು ಬಂದದ್ದು

ಸಾಲೋಮೋನನು ತನ್ನ ತಂದೆಯ ಕೆಟ್ಟ ಉದಾಹರಣೆಯನ್ನು ಹಿಂಬಾಲಿಸಿ, ಅನೇಕ ಹೆಂಡತಿಯರನ್ನು ಮಾಡಿಕೊಂಡು ಕೊನೆಗೆ ಇಸ್ರೇಲ್ ದೇಶವನ್ನೇ ದೇವರಿಂದ ದೂರ ಮಾಡಿದ್ದು.

ಪ್ರಶ್ನೆ : ಈಗ ನಾವು ಮಾಡುವ ಪಾಪಗಳಿಂದ ಮುಂದೆ ಎದುರಿಸುವ ಭೀತಿಯನ್ನು ಉಂಟುಮಾಡುವಂತಹ ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ ಎಂದು ನಮಗೆ ಸ್ಪಷ್ಟವಾಗಿ ತಿಳಿದಿದೆಯಾ ?

ಬೆತ್ಸೆಬಳು ಗರ್ಭವತಿಯಾಗಿದ್ದಾಳೆಂದು ತಿಳಿದಮೇಲೆ ಎಚ್ಚರಗೊಂಡು ಮಾನಸಾಂತರ ಹೊಂದಬೇಕಿತ್ತು.

ಆದರೆ ಬದಲಾವಣೆಯಾಗಲು ಮನಸ್ಸಿಲ್ಲದೆ ಪಾಪಗಳು ತಮ್ಮ ಪಾಪಗಳನ್ನು ಮುಚ್ಚಿಡುವ ಹಾಗೆ ಅವನೂ ಮುಚ್ಚಿಟ್ಟನು.

ತಾನು ಮಾಡಿದ ಪಾಪವನ್ನು ಊರೀಯನ ಮೇಲೆ ಹೊರಿಸಲು, ಅವನನ್ನು ಯುದ್ಧಸ್ಥಳದಿಂದ ಕರೆತಂದನು. ಆದರೆ ಅದು ಸಫಲ ಕಾಣದೆಯಿರುವಾಗ ಅವನ ಕೈಯಲ್ಲೇ ಚೀಟಿಯನ್ನು ಕೊಟ್ಟದೆಯಿರುವಾಗ ಅವನ ಕೈಯಲ್ಲೇ ಚೀಟಿಯನ್ನು ಕೊಟ್ಟು ಅವನನ್ನು ಕೊಲ್ಲಿಸಿದನು.

ಪಾಪವನ್ನು ಮುಚ್ಚಿಡುವುದು ಎಷ್ಟು ಭಯಂಕರ ಮತ್ತು ಮೋಸಕರ ಎಂದು ನಾವು ಇಲ್ಲಿ ಗಮನಿಸುತ್ತೇವೆ. ನಮ್ಮ ಪಾಪಗಳನ್ನು ದೇವರಿಂದಾಗಲಿ ? ಮತ್ತು ನಮ್ಮ ಮನಸಾಕ್ಷಿಯಿಂದಾಗಲೀ, ಮುಚ್ಚಿಡಲು ಸಾಧ್ಯವೇ ಇಲ್ಲ.

ನಮ್ಮ ಪಾಪಗಳು ನಮ್ಮನ್ನು ದೇವರ ನಡುವೆ ಇರುವ ಸಂಬಂಧದಿಂದ ಮತ್ತು ಇತರರ ನಡುವೆ ಇರುವ ಸಂಬಂಧದಿಂದ ಕಡಿದು ಬಿಡುತ್ತದೆ. ನಮ್ಮನ್ನು ಆತ್ಮೀಯವಾಗಿ ಬೆಳವಣಿಗೆ ಹೊಂದಲು ಮತ್ತು ಶಕ್ತಿಶಾಲಿಯಾಗಲು ಬಿಡುವುದಿಲ್ಲ.

ದೇವರು ವಿಶ್ವಾಸವುಳ್ಳವರು, ನಾವು ನಮ್ಮ ಪಾಪಗಳನ್ನು ಒಪ್ಪುಕೊಂಡು ಅರಿಕೆ ಮಾಡಿದರೆ ನಮಗೆ ಕೃಪೆ ತೋರಿಸಿ ನಮ್ಮನ್ನು ಕ್ಷಮಿಸುತ್ತಾರೆ ಎಂದು ನಾವು ಮರೆತುಬಿಡುತ್ತೇವೆ. (1 ಯೋಹಾನ 1:7–10)

ಒಂದು ನಿಜವಾದ ಪ್ರಶ್ನೆ ನಮ್ಮೆಲ್ಲರಿಗೂ.

- ನಾವು ಮಾಡಿದ ಪಾಪವನ್ನು ಒಪ್ಪಿಕೊಂಡು ಎದುರಿಸಲು ಸಿದ್ದರಿದ್ದೇವಾ ?
- ಬೇರೆಯವರ ಪಾಪಗಳನ್ನು ಚರ್ಚೆ ಮಾಡುವುದಲ್ಲ, ಬದಲಾಗಿ ನಮ್ಮ ಪಾಪಗಳನ್ನು ಚರ್ಚೆ ಮಾಡಲು ಸಿದ್ದರಿದ್ದೇವಾ ?

## ಕಾರ್ಯ ರೂಪ :

ನಮ್ಮ ಶೋಧನೆಗಳ ಬಗ್ಗೆ ಮತ್ತು ನಮ್ಮ ಪಾಪಗಳ ಬಗ್ಗೆ ಯೋಚಿಸಿ, ಅದರಿಂದಾಗುವ ಪರಿಣಾಮಗಳನ್ನು ಪಟ್ಟಿ ಮಾಡಿರಿ.
ನನ್ನ ಪಾಪಗಳನ್ನು ಮುಚ್ಚಿಡದೆ ಧೈರ್ಯವಾಗಿ ಅದನ್ನು ಅರಿಕೆಮಾಡುತ್ತೇನೆಂದು ಪ್ರಾರ್ಥಿಸಿರಿ.

# ಮೆಫಿಬೋಶ್‌ತನು – ದೇವರು ನಮ್ಮನ್ನು ಹುಡುಕಿ ರಕ್ಷಿಸಿದನು

ದಿನ 7 ಜನವರಿ 7

2 ಸಾಮುವೇಲನು 4:4, 2 ಸಾಮುವೇಲನು 9:1–8, ಎಫೆಸ್ಸೆಯರು 2:1–6

ಮೆಫಿಬೋಶೆತನ ಜೀವನವನ್ನು ನೋಡುವಾಗ ದೇವರು ಹೇಗೆ ನಮ್ಮನ್ನು ಹುಡುಕಿ ರಕ್ಷಿಸಿದರೆಂದು ಜ್ಞಾಪಕ ಮಾಡಿಕೊಳ್ಳಬಹುದು. ನಮ್ಮ ಪಾಪಗಳಿಂದ ಬಿದ್ದು ಹೋಗಿ ಹೇಗೆ ಅಸಹಾಯಕತೆಯಿಂದ ಇದ್ದೇವೆಂದು ಜ್ಞಾಪಕ ಮಾಡಿಕೊಳ್ಳಬಹುದು.

ದೇವರ ಶತ್ರುವಾಗಿದ್ದ ನಮಗೆ ದೇವರ ಕೋಪಾಗ್ನಿಯು ಬರುವ ಬದಲಾಗಿ ದೇವರ ಅತ್ಯೋತ್ತಮವಾದ ಪ್ರೀತಿ ಧಾರಾಳವಾಗಿ ಹೇಗೆ ಹರಿದು ಬಂದಿತೆಂದು ಈ ಕಥೆಯು ನಮಗೆ ಜ್ಞಾಪಕ ಮಾಡಿಕೊಡುತ್ತದೆ.

ನಮ್ಮ ಜೀವನದಲ್ಲಿ ಸಂಕಷ್ಟಗಳು ಬರುವಾಗ ದೇವರ ಪ್ರೀತಿ ಮತ್ತು ಅವರ ಒಳ್ಳೆಯ ಗುಣಗಳನ್ನು ಸುಲಭವಾಗಿ ಮರೆತು ಅವರ ಜೊತೆ ಸಮಯ ಕಳೆಯುವುದನ್ನು ನಾವು ನಿಲ್ಲಿಸುತ್ತೇವೆ.

ಈ ಕಥೆಯಿಂದಾಗಿ ದೇವರು ನಮ್ಮ ಜೀವನದಲ್ಲಿ ಏನು ಮಾಡಿದ್ದಾರೆ ಎಂದು ನಾವು ಮತ್ತೊಮ್ಮೆ ಜ್ಞಾಪಿಸಿಕೊಳ್ಳಬಹುದು.

ಪ್ರ. 2 ಸಾಮುವೇಲನು 4:4 ರ ಪ್ರಕಾರ ಮೆಫಿಬೋಶೆತನು ಯಾರು ?

ಪ್ರ. ಸಾಲಯೋನಾತರು ಸತ್ತರೆಂಬ ವರ್ತಮಾನವು ಬಂದಾಗ ದಾದಿಯು ಅವಸರದಿಂದ ಮೆಫಿಬೋಶೆತನನ್ನು ಎತ್ತಿಕೊಂಡು ಹೋಗುವಾಗ ಏನಾಯಿತು ?

ಪ್ರ. ಈ ರೀತಿಯಾಗಿ ನಡೆದಾಗ ಮೆಬೋಶತನಿಗೆ ಎಷ್ಟು ವಯಸ್ಸಾಗಿತ್ತು ?

ಪ್ರ. ದೇವರು ದಾವೀದನಿಗೆ ವಾಗ್ದಾನ ಮಾಡಿದ ಪ್ರಕಾರ ದಾವೀದನು ಇಸ್ರಾಯೇಲಿನ ಹೊಸ ರಾಜನಾದಾಗ ಅವನ ಮನಸ್ಸಿನಲ್ಲಿದ್ದ ಮೊದಲ ಸಂಗತಿಗಳೇನು ?
(2 ಸಾಮುವೇಲನು 9:1–5)

ಪ್ರ. ಮೇಫಿಬೋಶೆತನು ಸೌಲನ ಮೊಮ್ಮಗನಾಗಿದ್ದುದರಿಂದ ದಾವೀದನ ಸಿಂಹಾಸನಕ್ಕೆ ತಡೆಯಾಗಬಹುದಿತ್ತು. ಅವರೂ ದಾವೀದನು ಮೆಫಿಬೋಶತನಿಗೆ ಏನು ಮಾಡಲು ನಿರ್ಧರಿಸಿದನು ? (2 ಸಾಮುವೇಲನು 9:6–11)

ಪ್ರ. 2 ಸಾಮುವೇಲನು 9:8 ರ ಪ್ರಕಾರ ಮೆಫಿಬೋಶೆತನು ತನ್ನ ಬಗ್ಗೆ ಏನೆಂದುಕೊಂಡಿದ್ದನು ? ಈ ರೀತಿಯಾಗಿ ಅವನು ತಿಳಿಯಲು ಕಾರಣವೇನು ?

ಪ್ರ. 2 ಸಾಮುವೇಲನು 9:11 ರ ಪ್ರಕಾರ ದಾವೀದನು ಮೆಫಿಬೋಶೆತನನ್ನು ಹೇಗೆ ನೋಡಿಕೊಂಡನು ?

ಪ್ರ. ಎಫೆಸ್ಸೆಯರಿಗೆ 2:1-6ನ್ನು ಓದಿರಿ

ನಾವು ಪಾಪಿಗಳಾಗಿದ್ದಾಗಲೂ, ಬಲಹೀನರಾಗಿದ್ದಾಗಲೂ ಸಹ ಹೇಗೆ ದೇವರು ನಮ್ಮನ್ನು ಹುಡುಕಿ ರಕ್ಷಿಸಿದರೆಂದು ನಾವು ಈ ಕಥೆಯಿಂದ ತಿಳಿಯಬಹುದು

ಪ್ರ. 1-3 ವಚನಗಳ ಪ್ರಕಾರ ನಮ್ಮ ಪರಿಸ್ಥಿತಿ ಹೇಗಿತ್ತು ?

ಈ ಪ್ರಕಾರವೇ ನಾವು ನಮ್ಮನ್ನು ನೋಡುತ್ತೇವೆಯಾ ?

ಇದು ಬಹಳ ಮುಖ್ಯ ಏತಕ್ಕಾಗಿ ?

ಪ್ರ. ವ. 4ರ ಪ್ರಕಾರ ದೇವರ ಬಗ್ಗೆ ಏನು ಹೇಳುತ್ತದೆ ?

ಪ್ರ. ವ. 6 ರ ಪ್ರಕಾರ ದೇವರು ನಮಗೇನು ಮಾಡಿದ್ದಾರೆ ?

ಈ ವಿಷಯದ ಬಗ್ಗೆ ನಾವು ಎಷ್ಟು ಭಾರಿ ಯೋಚಿಸಿ, ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ?

ನಮ್ಮ ಜೀವನದಲ್ಲಿ ತಾತ್ಕಾಲಿಕವಾಗಿ ಸಂಕಷ್ಟಗಳು ಮತ್ತು ಸಮಸ್ಯೆಗಳು ಬರುವಾಗ ದೇವರು ಯಾರು ? ಮತ್ತು ಅವರು ನಮಗೆ ಏನು ಮಾಡಿದ್ದಾರೆಂದು ನಾವು ಸುಲಭವಾಗಿ ಮರೆತುಬಿಡುತ್ತೇವೆ.

ಮೆಫಿಬೋಶೆತನ ಕಥೆಯು, ನಾವು ಬಲಹೀನರೂ ಮತ್ತು ಪಾಪಗಳೂ ಆಗಿದ್ದಾಗ ದೇವರು ಹೇಗೆ ನಮ್ಮನ್ನು ಹುಡುಕಿ ರಕ್ಷಿಸಿ ತನ್ನ ಮಗ ಮತ್ತು ಮಗಳನ್ನಾಗಿ ಮಾಡಿಕೊಂಡರೆಂದು ನಾವು ಜ್ಞಾಪಕ ಮಾಡಿ ಕೊಳ್ಳಬಹುದು.

ಈ ವಿಷಯವು ನಮಗೆ ಕೃತಜ್ಞತೆಯನ್ನು ಕಲಿಸಬೇಕು ದೇವರನ್ನು ಆರಾಧಿಸಲು ಮತ್ತು ಅವರಿಗೆ ಸೇವೆ ಮಾಡಲು ಕೃತಜ್ಞತೆಯು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ.

## ಯಾಜಕನಾದ ಯೆಹೋಯಾದನು
## (2 ಪೂರ್ವಕಾಲವೃತ್ತಾಂತ 22:10-12, 23:1-21)

ದಿನ 8 ಜನವರಿ 8

ಸನ್ನಿವೇಶ : ಹಿಂದೆ ರಾಜನಾಗಿದ್ದಂತಹ ಅಹಜ್ಯನ ಸಹೋದರಿಯನ್ನು ಯೆಹೋಯಾದನು ಮದುವೆಯಾಗಿದ್ದನು (22:11) ಹಿಂದೆ ರಾಜನಾಗಿದ್ದಂತಹ ಯೆಹೋರಾಮನ ಅಳಿಯನೂ ಆಗಿದ್ದನು.

ಯೆಹೋವಾಷನನ್ನು ರಕ್ಷಿಸುವುದು ರಾಜದ್ರೋಹವೆಂದು ಅವನಿಗೆ ತಿಳಿದಿತ್ತು. ಆದರೆ ದೇವರ ಯಾಜನಾಗಿದ್ದ ತಾನು ದೇವರ ಚಿತ್ತಕ್ಕೆ ಶರಣಾದನು.

ಎಲ್ಲರ ಕಣ್ಣುತಪ್ಪಿಸಿ ಯೆಹೋವಾಷನನ್ನು ದೇವಾಲಯದಲ್ಲಿ ಬೆಳೆಸಲು ಆರಂಭಿಸಿದನು ಅತಲ್ಯಳು ಸಂಪೂರ್ಣ ರಾಜ್ಯವನ್ನು ಹತೋಟಿಯಲ್ಲಿಟ್ಟುಕೊಂಡಿದ್ದರಿಂದ, ಈ ವಿಷಯವು ಅವಳಿಗೆ ತಿಳಿದು ಬಂದ ಸಂದರ್ಭದಲ್ಲಿ ಅವಳು ಯೆಹೋವಾಶನನ್ನು ಮಾತ್ರವಲ್ಲದೆ, ಯೆಹೋಯಾದನನ್ನೂ ಕೊಲ್ಲ ಬಹುದಿತ್ತು.

## 1. ದೇವರಿಗಾಗಿ ರಿಸ್ಕ್ ತೆಗೆದುಕೊಳ್ಳಲು ಸಿದ್ದರಾಗಿರಿ (22:10–12)

- ತನ್ನ ಜೀವನವು ತೊಂದರೆಗೊಳಗಾದರೂ ಪರವಾಗಿಲ್ಲ, ಯೋಹೋಯಾದನು ಯಾವುದು ಸರಿಯೋ ಅದನ್ನು ಮಾಡಿದನು.
- ನಮ್ಮ ವಯ್ಯಕ್ತಿಕ ಜೀವನದಲ್ಲಿ ಲಾಭ ಸಿಕ್ಕುವುದಾದರೆ ನಾವು ತೊಂದರೆಯನ್ನು ಎದುರಿಸಲು ಸಿದ್ದರಾಗಿರುತ್ತೇವೆ.
- ದೇವರ ವಾಕ್ಯಕ್ಕೆ ವಿಧೇಯನಾಗಿರುವುದಕ್ಕೋಸ್ಕರ ಯಾವಾಗ ಕೊನೆಯ ಭಾರಿ ನಾನು ತೊಂದರೆಯನ್ನು ಅನುಭವಿಸಿದ್ದೇನೆ ?
- ನಿಮ್ಮ ಸ್ನೇಹಿತರು ಪಾಪದಲ್ಲಿದ್ದಾಗ ಅವರನ್ನು ತಿದ್ದಿದಾಗ ನೀವು ತೊಂದರೆಗೆ ಒಳಗಾಗಿದ್ದೀರಾ ?
- ನಮ್ಮ ಕೆಲಸಕ್ಕೋಸ್ಕರ, ನಮ್ಮ ಸಂಬಂಧಗಳಿಗೋಸ್ಕರ, ನಮ್ಮ ಭವಿಷ್ಯಕೋಸ್ಕರ, ನಮ್ಮ ಮಕ್ಕಳ ಭವಿಷ್ಯಕೋಸ್ಕರ ದೇವರ ಸ್ಟಾಂಡರ್ಡ್‌ನ್ನು ಕಡಿಮೆ ಮಾಡಿಕೊಂಡಿದ್ದೇವಾ ?
- ನಾವು ಯೇಸುವಿಗೆ ಶಿಷ್ಯರಾದಾಗ ಆ ಸಮಯದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಿದೆವು ಈಗ ಏನು ತಡೆಯುತ್ತಿದೆ ?
- ನಾವು ಸೋತುಹೋಗುತ್ತೇವೆಂಬ ಭಯದಿಂದ ಈಗ ನಾವು ತೊಂದರೆಗಳನ್ನು ಎದುರಿಸಲು ಸಿದ್ದರಿಲ್ಲ.
- ಗೋರ್ಕಾ ರೈಫಿಲ್ಸ್ ಇಂಡಿಯನ್ ಆರ್ಮಿಯವರ ಹೇಳಿಕೆಯನ್ನು ನಾನು ಬಹಳ ಇಷ್ಟಪಡುತ್ತೇನೆ ಕೆಲವು ಗುರುಗಳು ಎಷ್ಟೊಂದು ಬೆಲೆಯುಳ್ಳದ್ದವುಗಳಾಗಿವೆ ಎಂದರೆ ಅದಕ್ಕಾಗಿ ನಾವು ಸೋತರು ಮಹಿಮೆಯನ್ನು ಹೊಂದುತ್ತೇವೆ.

ಸವಾಲು : ತೊಂದರೆಯನ್ನು ಎದುರಿಸಿರಿ ಸವಾಲೆನ್ನಿಸುವ ಕೆಲವು ಕಾರ್ಯಗಳನ್ನು ಮಾಡಿರಿ. ಬೈಬಲ್‌ಟಾಕನ್ನು ಲೀಡ್ ಮಾಡಿರಿ, ಹೊಸ ಸ್ಥಳದಲ್ಲಿ ಕುಟುಂಬ ಸಭೆಯನ್ನು ಪ್ರಾರಂಭಿಸಿ, ನಮಗೆ ಭಯವೆನ್ನಿಸುವ ವ್ಯಕ್ತಿಗಳನ್ನು ಆಮಂತ್ರಿಸೋಣ. ಮಿಶನ್ ಟೀಮ್ ಜೊತೆ ಹೋಗಿರಿ, ದೇವರಿಗಾಗಿ ಸೇವೆ ಮಾಡಲು 1 ವರ್ಷದ ಚಾಲೆಂಜನ್ನು ತೆಗೆದು ಕೊಳ್ಳಿರಿ.

ಏನಾದರೂ ಮಾಡಿರಿ, ರಿಸ್ಕನ್ನು ತೆಗೆದುಕೊಳ್ಳಿರಿ, ಏನಾದರೂ ಆಗುತ್ತದೆ ಎಂದು ತಿಳಿದು ಸುಮ್ಮನೆ ಕುಳಿತುಕೊಳ್ಳಬೇಡಿರಿ.

## 2. ತಂಡವನ್ನು ಕಟ್ಟಿರಿ (23:1–15)

- ಯೊಹವಾಷನನ್ನು ರಾಜನನ್ನಾಗಿ ಮಾಡಲು, ತನ್ನ ಯೋಜನೆಯನ್ನು ಯಶಸ್ವಿಯಾಗಿಸಲು ಯೆಹೋಯಾದನಿಗೆ ತಂಡದ ಅವಶ್ಯಕತೆ ಇತ್ತು.
- ಆರು ವರ್ಷಗಳು ಯೆಹೋಯಾದನು ಸುಮ್ಮನಿರಬೇಕಿತ್ತು
- ಆರು ವರ್ಷಗಳು ಹುಡುಗನು ದೇವಾಲಯದಲ್ಲಿ ಅಡಗಿಕೊಂಡಿರುವಾಗ ಕೆಲವರಿಗೆ ಮಾತ್ರ ಈ ವಿಷಯವು ತಿಳಿದಿತ್ತು.
- ದುಷ್ಟ ರಾಣಿಯನ್ನು ಹೊರಹಾಕಲು ಪರದೆಯ ಹಿಂದೆ ಎಲ್ಲರ ನಡುವೆ ಒಳ್ಳೆಯ ಸಂಭಂಧವ್ನು ಹೊಂದಿದ್ದನು.
- ಸರಿಯಾದ ಸಮಯಕ್ಕೆ ರಹಸ್ಯವಾಗಿ ಯಾಜಕರನ್ನೂ ಮತ್ತು ನಾಯಕರನ್ನೂ ಒಟ್ಟುಗೂಡಿಸುವುದು ಯೆಹೋಯಾದನ ಗುರಿಯಾಗಿದ್ದಿತು.
- ಎಲ್ಲರೂ ಯೆರೋಸಲೇಮಿಗೆ ಬಂದಾಗ ತನ್ನ ಅತ್ಯುತ್ತಮ ಯೋಜನೆಯನ್ನು ಯೆಹೋಯಾದನು ಪ್ರಕಟಪಡಿಸಿದನು.
- ಯೋಹೋವಾಷನನ್ನು ಅವರ ಮುಂದೆ ನಿಲ್ಲಿಸಿ, ಅವರಿಗೆ ವೋಟು ಹಾಕಲು ಹೇಳಲಿಲ್ಲ.
- ಮೊದಲು ಅವರ ಜೊತೆ ಒಡಂಬಡಿಕೆ ಮಾಡಿಕೊಂಡು, ನಂತರ ಅವರ ಮುಂದೆ ಯೆಹೋವಾಷನನ್ನು ನಿಲ್ಲಿಸಿದನು
- ಇಡೀ ತಂಡವು ಕೆಲಸಮಾಡಿದಿದ್ದರೆ ದೇವರ ರಾಜ್ಯವು ಬೆಳೆಯಲು ಸಾಧ್ಯವಿಲ್ಲ.
- ತಂಡದಲ್ಲಿ ಒಬ್ಬರಾಗಿರಲು ದೇವರು ನಮ್ಮನ್ನು ಆರಿಸಿಕೊಂಡಿದ್ದಾರೆ (1 ಕೊರಿಂಥ 12)
- ನಾನು ತಂಡದಲ್ಲಿ ಉತ್ತಮ ಆಟಗಾರನು ?
- ಅಥವಾ ನಾನು ಸುಮ್ಮನೆ ನೋಡುವವನೂ ಮತ್ತು ಪ್ರೇಕ್ಷಕನಾಗಿದ್ದೇನಾ ?
- ಇತರರಿಗೆ ಸಹಾಯಮಾಡುವುದಕ್ಕೋಸ್ಕರ ನಾವು ನಮ್ಮ ಕೈಯನ್ನು ಕೊಳೆಯಾಗಿಸಲು ಸಿದ್ದರಿದ್ದೇವಾ ? ಅಥವಾ ಅದು ಸರಿಯಿಲ್ಲ, ಇದು ಸರಿಯಿಲ್ಲ ಎಂದು ಗೊಣಗುವವರಾಗಿದ್ದೇವಾ ?

## 3. ದೇವರನ್ನು ಹಿಂಬಾಲಿಸಲು ಕರೆ (23:16–21)

- ರಾಜನು ಮತ್ತು ಜನರು ದೇವರ ಜನರಾಗಿರಬೇಕೆಂದು ಯೆಹೋಯಾದನು ಒಡಂಬಡಿಕೆಯನ್ನು ಮಾಡಿದನು.
- ಯೆಹೋಯಾದನ ರೀತಿ.ಯಾಗಿ ಸ್ವತಃ ನಾವೆ ದೇವರಿಗೆ ಹತ್ತಿರವಾಗಿರಬೇಕು ನಂತರ ನಮ್ಮ ಕುಟುಂಬ ಮತ್ತು ಪ್ರಪಂಚದ ಜನರನ್ನು ದೇವರ ಜನರನ್ನಾಗಿಸಬೇಕು.
- ನಾವು ದೀಕ್ಷಸ್ನಾನ ಹೊಂದಿದಾಗ ಯೇಸುವನ್ನು ನಮ್ಮ ಒಡೆಯನನ್ನಾಗಿ ಮಾಡಿಕೊಂಡೆವು. ಈಗಲೂ ಯೇಸುವು ನಮ್ಮ ಜೀವನಕ್ಕೆ, ನಮ್ಮ ಸಮಯಕ್ಕೆ, ನಮ್ಮ ಪ್ರತಿಭೆಗಳಿಗೆ, ನಮ್ಮ

ಹಣಕ್ಕೆ ಒಡೆಯರಾಗಿದ್ದಾರೆ ?

- ಈಗಲೂ ಸಹ ನಮ್ಮ ಒಡೆಯನ ಬಗ್ಗೆ ಮತ್ತೊಬ್ಬರ ಜೊತೆ ಉಲ್ಲಾಸದಿಂದ ಹಂಚಿಕೊಳ್ಳುತ್ತಿದ್ದೇವಾ ?
- ಕೊನೆಯ ಭಾರಿ ನಾನು ಯಾವಾಗ ಇನ್ನೊಬ್ಬರು ಯೇಸುವಿನ ಶಿಷ್ಯರಾಗಲು ಸಹಾಯ ಮಾಡಿದ್ದೇನೆ ?

ಸವಾಲು : ಯೇಸುವಿನ ಬಗ್ಗೆ ಪ್ರತಿ ದಿನ ಇನ್ನೊಬ್ಬರ ಜೊತೆ ಹಂಚಿಕೊಳ್ಳಲು ನಿರ್ಧಾರ ಮಾಡಿರಿ.

## ಚಾರೆಪ್ತ ಊರಿನ ವಿಧವೆ.

ದಿನ 9 ಜನವರಿ 9

ಪ್ರವಾದಿಯಾದ ಎಲಿಯನನ್ನು ಪ್ರಸಿದ್ಧವಿಲ್ಲದ ಸಂದೇಶದೊಡನೆ ಶತ್ರುವಾದ – ರಾಜ ಅಹಾಬನಿಗೆ ಮತ್ತು ಈಜೆಬೆಲಳಿಗೆ ಸಾರಲು ದೇವರಿಂದ ಕಳುಹಿಸಲ್ಪಟ್ಟನು.

1 ಅರಸುಗಳು 17:7–24

ಸಾಧಾರಣವಾಗಿ ವಿಧವೆಯಾಗಿ ಜೀವನ ಮಾಡುವುದು ಬಹಳ ಕಷ್ಟ ಅದರಲ್ಲೂ, ನೀರಿಲ್ಲದೆ, ಒಣಗಿದ ಬರಗಾಲ, ಬಿರುಕುಬಿಟ್ಟನೆಲ, ಯಾವುದೇ ತರಹದ ನಿರೀಕ್ಷೆ ಇಲ್ಲದಿರುವುದು. ಇದರ ಜೊತೆ ಮಗನನ್ನು ನೋಡಿಕೊಳ್ಳಬೇಕು.

1 ಅರಸು 17:7–9

- ದೇವರು ನಮ್ಮ ಎಲ್ಲಾ ಅವಶ್ಯಕತೆಗಳನ್ನು ವಿಚಿತ್ರವಾಗಿ ಪೂರೈಸುವವರಾಗಿದ್ದಾರೆ.
- ದೇವರು ಎಲೀಯನಿಗೆ,ಒಬ್ಬ ವಿಧವೆಯ ಮೂಲಕ ಆತನ ಅವಶ್ಯಕತೆಗಳನ್ನು ಪೂರೈಸುತ್ತಾರೆ.
- ದೇವರು ತನ್ನ ಚಿತ್ತವನ್ನು ನೆರವೇರಿಸಲು ಯಾರನ್ನು ಬೇಕಾದರೂ ಆರಿಸಿಕೊಳ್ಳಬಹುದು.
- ದೇವರ ಚಿತ್ತವನ್ನು ಮಾಡಲು ನಿಮ್ಮನ್ನು ಆರಿಸಿ ಕೊಂಡಿದ್ದಾರೆ ಎಂದು ನೀವು ನಂಬುತ್ತೀರಾ ?
- ದೇವರು, ಎಂತಹ ಅಸಾಧಾರಣವಾದ, ಸಾಮಾನ್ಯರಾದ: ಯಾವುದಕ್ಕೂ ಬಾರದವರನ್ನು ನಮ್ಮ ಜೀವನದಲ್ಲಿ ನಮಗೆ ಸಹಾಯ ಮಾಡಲು ಆರಿಸಿಕೊಳ್ಳುತ್ತಾರೆಂದು ನೀವು ನಂಬುತ್ತೀರಾ ?

1 ಅರಸು 17:10–14

- ವಿಧವೆಗೆ ಯಾವ ನಿರೀಕ್ಷೆ ಇರಲಿಲ್ಲ.
- ವಿಧವೆಯು ಕೊನೆಯ ಆಹಾರ ಸೇವಿಸಿ, ಮರಣಕ್ಕೆ ಶರಣಾಗಬೇಕೆಂದಿದ್ದಳು.
- ಅವಳ ಬೇಡಿಕೆಗಳನ್ನು ಪೂರೈಸಲು ದೇವರು ಎಲೀಯನನ್ನು ಕಳುಹಿಸಿದರು.

- ಆಕೆಯ ಹತ್ತಿರವಿದ್ದಕೊನೆಯ ರೊಟ್ಟಿಯನ್ನು ಕೇಳಿದಂತಹ ಮನುಷ್ಯನು ಆಕೆಯ ಮತ್ತು ಆಕೆಯವನಿಗೆ ರಕ್ಷಕನಾದನು.
- ಯಾವಾತನು ಆಕೆಗೆ ಭಾರವಾಗಬೇಕತ್ತೋ, ಆತನು ಅವಳಿಗೆ ಸಹಾಯಕನಾದನು.
- ಆಕೆಯ ವಿದೇಯತ್ವದಿಂದ ಆಕೆ ಮತ್ತು ಆಕೆಯ ಮಗನು ಮರಣದಿಂದ ಪಾರಾದರು. ವಿಧೇಯರಾಗಿರಲಿಕ್ಕೆ ಕಷ್ಟವಾದರೂ ಸಹ ಆಕೆಯ ವಿದೇಯತ್ವದ ಕಾರಣ ಆಕೆ ಆಶೀರ್ವಧಿಸಲ್ಪಟ್ಟಳು :
- ಕಷ್ಟವಾಗಿದ್ದರೂ ಸಹ ನಾವು ದೇವರ ವಾಕ್ಯಕ್ಕೆ ವಿಧೇಯರಾಗಿ ನಡೆದುಕೊಳ್ಳುತ್ತೇವಾ ?
- ನಮ್ಮಲ್ಲಿ ಕಡಿಮೆ ಇರುವಾಗಲೂ ಸಹ ನಾವು ಧಾರಾಳ ಮನಸ್ಸುಳ್ಳವಾಗಿರಬೇಕೆಂದು ನಿರ್ಧರಿಸಿದರೆ, ದೇವರು ನಮ್ಮ ಅವಶ್ಯಕತೆಗಳನ್ನು ಪೂರೈಸುತ್ತಾರೆ.

1 ಅರಸು 17:15–16

- ಯಾವಾಗ ವಿಧವೆಯು ದೇವರಲ್ಲಿ ಭರವಸೆಯಿಟ್ಟು ತನ್ನಲ್ಲಿದ್ದ ಸ್ವಲ್ಪವನ್ನೇ ಪ್ರವಾದಿಗೆ ಸಹಾಯಮಾಡಲು ನಿರ್ಧರಿಸಿದಳೋ, ದೇವರು ಆಕೆಯ ಮತ್ತು ಕುಟುಂಬದ ಎಲ್ಲಾ ಬೇಡಿಕೆಗಳನ್ನು ಪೂರೈಸಿದರು.

- ದೇವರು ನಮ್ಮ ಬೇಡಿಕೆಯನ್ನು ಪೂರೈಸುವವರು. ಆತನು ನಮ್ಮ ಬೇಡಿಕೆಗಳನ್ನು ಪೂರೈಸುತ್ತಾನೆ. ಕೆಲವು ಸಮಯ ರಹಸ್ಯವಾಗಿ, ಗೊತ್ತಿಲ್ಲದ ಜನಗಳ ಮುಖಾಂತರ ಎದುರು ನೋಡದ ಪರಿಸ್ಥಿತಿಯಲ್ಲಿ ನಮ್ಮ ಬೇಡಿಕೆಯನ್ನು ಪೂರೈಸುತ್ತಾನೆ.

1 ಅರಸು 17:17–24

- ನಾವೆಲ್ಲರು ನಮ್ಮ ಮಕ್ಕಳನ್ನು ಪ್ರೀತಿಸುತ್ತೇವೆ. ಯಾವುದೇ ತರಹದ ಕೆಟ್ಟ ವಿಷಯಗಳು ಅವರಿಗೆ ಸಂಭವಿಸಬಾರದೆಂದು ನಾವು ಬಯಸುತ್ತೇವೆ.
- ಮಕ್ಕಳಿಗೆ ಅತ್ಯುತ್ತಮವಾದದ್ದನ್ನು ಸಿಗಲೆಂದು ನಾವು ನಮ್ಮ ಎಲ್ಲಾ ಪ್ರಯಾಸಪಡುತ್ತೇವೆ. ಅತ್ಯುತ್ತಮ ವಿಧ್ಯಾಭ್ಯಾಸ, ಅತ್ಯುತ್ತಮ ಬಟ್ಟೆಗಳು ಮುಂತಾದುವುಗಳು.
- ವಿಧವೆಯ ಮಗನು ಆ ಬರಗಾಲದಲ್ಲಿ ಗುಪ್ತಟಾದ ಖಾಯಿಲೆಯಿಂದ ಸಾಯುವುದಕ್ಕೋಸ್ಕರ ಜೀವಿತವಾಗಿದ್ದನು.
- ಎಂತಹ ಆಕಸ್ಮಿಕ ! ಎಂತಹ ಅನಾಹುತ !
- ಅನಾಹುತ ಎದುರುಗೊಂಡಾಗ, ನಮ್ಮ ಪ್ರತಿಕ್ರಿಯೆ ಹೇಗಿದೆ ?

- ನಾವು ದೇವರನ್ನು ದೂಷಿಸುತ್ತೇವಾ ? ನಮ್ಮ ಸುತ್ತಮುತ್ತಲಿನ ಜನರನ್ನು ದೂಷಿಸುತ್ತೇವಾ ? ಅಥವಾ ಈ ವಿಧವೆಯ ಹಾಗೆ ಪ್ರತಿಕ್ರಿಸುತ್ತೇವಾ ?
- ಈ ವಿಧವೆಯು ತನ್ನ ಜೀವನವನ್ನು, ತನ್ನ ಪಾಪವನ್ನು ಮತ್ತು ತನ್ನ ನಡವಳಿಕೆಯನ್ನು ನೋಡಿದಳು.
- ವಿಧವೆಯ ಮಗನನ್ನು ಮತ್ತೆ ತಿರುಗಿ ಆಕೆಗೆ ಕೊಟ್ಟಂತಹ ದೇವರು ನಮಗೆ ನೆನಪು ಮಾಡುವುದೇನೆಂದರೆ, ಈ ದಿನ ನಮಗೆ ನಮ್ಮ ಜೀವನದಲ್ಲಿ ಸಿಕ್ಕಿರುವುದು ಎಲ್ಲವೂ ದೇವರಿಂದ ಮಾತ್ರ ಮತ್ತು ಯಾವಾಗಲಾದರೂ, ಏನನ್ನಾದರೂ, ಆತನು ಹಿಂತೆಗೆದುಕೊಳ್ಳಲು ಅಧಿ ಕಾರವಿದೆ.
- ನಮ್ಮ ಪ್ರತಿಕ್ರಿಯೆ ಯೋಬನ ಹಾಗೆ ಇರಬೇಕು, ಯೆಹೋವನೇ ಕೊಟ್ಟನು, ಯೆಹೋವನೇ ತೆಗೆದುಕೊಂಡನು : ಯೆಹೋವನ ನಾಮಕ್ಕೆಸ್ತೋತ್ರವಾಗಲಿ. (ಯೋಬನು 1:21)

ಸವಾಲು : ಈ ಸಮಯ ಯಾವ ವಿಷಯದಲ್ಲಿ ನಿಮಗೆ ವಿಧೇಯರಾಗಿರಲು ಬಹಳ ಕಷ್ಟಕರವಾಗಿದೆ ಎಂದು ಬರೆಯಿರಿ. ಮತ್ತುಕಷ್ಟವಾದರೂ ಸಹ ವಿಧೇಯರಾಗಿರಲು ದೇವರು ನಿಮಗೆ ಬಲವನ್ನು ಕೊಡಲೆಂದು ಪ್ರಾರ್ಥನೆಮಾಡಿರಿ.

## ಓಬದ್ಯ

ದಿನ 10 ಜನವರಿ 10

1 ಅರಸು 18:1-16 ಓಬದ್ಯಃ ಸಾಧಾರಣವಾದ ಮನುಷ್ಯ ಅಸಾಧಾರಣ ಧೈರ್ಯವನ್ನು ತೋರಿಸಿದ್ದು.

ಸಮಾರಿಯದೇಶವು ಭಯಂಕರವಾದ ಬರಗಾಲದಿಂದ ನರಳುತ್ತಿತ್ತು. ಅಲ್ಲಿ ನಿರಂತರವಾಗಿ ಮೂರು ವರ್ಷ ಆರು ತಿಂಗಳ ತನಕ ಬರಗಾಲವಿತ್ತು. ಕೊನೆಯದಾಗಿ ದೇವರು ಅವರ ಮೇಲೆ ಕೃಪೆ ಇಟ್ಟು ಮಳೆಯನ್ನು ಬರಮಾಡಿದರು.

ಅಹಾಬನು ಬಹಳ ಕ್ರೂರಿಯಾದ ರಾಜನಾಗಿದ್ದನು, ಆದರೂ ಸಹ ಅವನಿಗೆ ದೇವರ ಭಯ ಹೊಂದಿದಂತಹ ಓಬದ್ಯನಮೇಲೆ ಭರವಸೆ ಇತ್ತು, ಓಬದ್ಯನು ಅರಮನೆಯ ಖಜಾಂಜಿಯಾಗಿದ್ದನು. ಆತನ ಹೆಸರಿನ ಅರ್ಥವೇನೆಂದರೆ "ಕರ್ತನ ಸೇವಕ." ನಿಜವಾಗಲೂ ದೈವಿಕವಾದ ಸೇವಕನಾಗಿದ್ದ ಎಂದು ಶೀರ್ಷಿಕೆಯಿಂದ ತಿಳಿದು ಬರುತ್ತದೆ (ವ 3-4) ಆತನು ನಿಜವಾಗಲೂ ದೇವರ ಭಯದಲ್ಲಿರುವಂತಹ ಮನುಷ್ಯನೆಂದು ತನ್ನ ಧೈರ್ಯದ ಮೂಲಕ ತೋರಿಸಿದನು.

ಅರಮನೆಯಲ್ಲಿ ಸೇವೆಮಾಡುವಾಗ ರಾಣಿಯ ವಿರೋಧವಾಗಿ ನಡೆದುಕೊಳ್ಳುವುದು ಅಷ್ಟೊಂದು ಸಾಧಾರಣ ವಿಷಯವಲ್ಲ. ಆ ತರಹ ಮಾಡುವುದರಿಂದ ತೊಂದರೆ ಮಾತ್ರವಲ್ಲ, ಮರಣವನ್ನೂ ಸಹ ಸ್ವಾಗತಿಸುವಂತೆ. ಆದರೂ ಸಹ ಓಬದ್ಯನು, ಕ್ರೂರವಾದ ರಾಣಿಯಾದ ಈಜೆಬೆಲಳ ಸೋಧನೆಯಿಂದ ನೂರು (100) ಪ್ರವಾದಿಗಳನ್ನು ರಕ್ಷಿಸಿ ಅಸಾಧಾರಣವಾದ ಧೈರ್ಯವನ್ನು ತೋರಿಸಿದನು.

ಕೇವಲ ಆ ಪ್ರವಾದಿಗಳನ್ನು ಬಚ್ಚಿಡಲಿಲ್ಲ, ಆದರೆ ಅವರಿಗೆ ಬೇಕಾದಂತಹ ರೊಟ್ಟಿ ಮತ್ತು ನೀರನ್ನು ಕೊಟ್ಟು ದಯೆ ತೋರಿಸುವವನಾದನು.

– ನಾವು ಯಾವಾಗ ದೇವರಿಗೆ ಭಯಪಡುತ್ತೆವೋ ಆಗ ನಾವು ಜನಗಳಿಂದ ಮತ್ತು ದೇವರಿಂದ ನಂಬುವವರಾಗಿದ್ದೇವೆ.

ವ. 5–6 ಅಹಾಬನಿಗೆ ಓಬದ್ಯನಮೇಲೆ ಬಹಳ ಭರವಸೆ ವಿದ್ದದ್ದರಿಂದ ಅಂತಹ ಭಯಂಕರವಾದ ಬರಗಾಲದಲ್ಲಿಯೂ ಸಹ ತನ್ನ ಕುದುರೆ ಮತ್ತು ಹೇಸರಗತ್ತಿಗಳಿಗೆ ಹುಲ್ಲನ್ನು ತರುವುದಕ್ಕೆ ಕಳುಹಿಸಿದನು

ವ. 8–11 ಎಲೀಯನು ಸಹ ಓಬದ್ಯನನ್ನು ಬಹಳವಾಗಿ ನಂಬಿದ್ದರಿಂದ, ತನ್ನ ಮತ್ತು ರಾಜನಾದ ಅಹಾಬನ ನಡುವೆ ಸಹಾಯಕ್ಕೆ ಉಪಯೋಗಿಸುತ್ತಿದ್ದನು, ಓಬದ್ಯನು ಪ್ರವಾದಿಯನ್ನು ರಕ್ಷಿಸುವಾಗ ಬಹಳ ಅಪಾಯವನ್ನು ಏದುರಿಸಬೇಕಾಗಿತ್ತು. ಆತನು ಸಹಜವಾಗಿಯೇ ಧೈರ್ಯವುಳ್ಳ ಮನುಷ್ಯನಾಗಿದ್ದನಾ ? (1 ಅರಸು 18:9) ರಲ್ಲಿ ಎಲೀಯನ ಜೊತೆ ಆತನ ಸಂಭಾಷಣೆ ನೋಡಿದರೆ ಹಾಗೆ ಅನ್ನಿಸುವುದಿಲ್ಲ. ಆತನು ಜನಗಳಿಗಿಂತ ದೇವರಿಗೆ ಹೆಚ್ಚಾಗಿ ಬಯಪಡುವವನಾಗಿದ್ದುದರಿಂದ ಈ ತರಹದ ಅಪಾಯವನ್ನು ಎದುರಿಸಲು ಸಾಧ್ಯವಾಯಿತು.

ನೀವು ದೇವರಿಗಿಂತ ಹೆಚ್ಚಾಗಿ ಜನರಿಗೆ ಭಯ ಪಡುತ್ತೀರಾ ?
ದೇವರಿಗೆ ಭಯಪಡೂತ್ತೀರೆಂದು ನಿರೂಪಿಸಲು ಸರಿಯಾದದ್ದನ್ನು ಮಾಡುವುದಕ್ಕಾಗಿ ಯಾವಾಗಲಾದರೂ ಈ ತರಹದ ಪರಿಸ್ಥಿತಿಗೆ ಒಳಗಾಗಿದ್ದೀರಾ ?
– ನಿಮ್ಮ ನಾಯಕರು ನಿಮಗೆ ನಿರ್ಧಿಷ್ಟವಾದ ಪಾತ್ರವನ್ನು ಕೊಟ್ಟಾಗ ಮಾತ್ರ ನೀವು ಸರಿಯಾದದ್ದನ್ನು ಮಾಡುತ್ತೀರಾ ? ನೀವು ಅತ್ಯುತ್ತಮವಾದ ಕಾರ್ಯವನ್ನು ಮಾಡಿದಾಗ, ಜನರು ಅದನ್ನು ಗಮನಿಸದೆ ಇದ್ದಾಗ ನಿಮ್ಮ ಹೃದಯವು ಹೇಗಿರುತ್ತದೆ ?
ಓಬದ್ಯನು ದೇವರಿಗೆ ಭಯಪಟ್ಟಿರುವುದರಿಂದ ಅವನಿಗೆ ಸ್ವರ್ಗದಲ್ಲಿ ಅತಿಶ್ರೇಷ್ಟವಾದ ಸ್ಥಾನ ಸಿಕ್ಕಿದೆ ಎಂದು ನಾವು ನಂಬುತ್ತೀವಾ ?

ಬೈಬಲಿನಲ್ಲಿರುವ ಎಲ್ಲಾ ಮಹಾ ವ್ಯಕ್ತಿಗಳಲ್ಲಿ ಸಾಮಾನ್ಯವಾಗಿ ಒಂದೇ ರೀತಿಯಾದ ವಿಶಿಷ್ಟ ಗುಣವಿತ್ತು. ಅದು ದೇವರ ಭಯ, ಸಾಧಾರಣ ವ್ಯಕ್ತಿಗಳಾಗಿದ್ದ ಇವರಿಗೆ ದೇವರ ಭಯವಿದ್ದುದ್ದರಿಂದ ಇವರು ದೊಡ್ಡ ವ್ಯತ್ಯಾಸವನ್ನುಂಟುಮಾಡಿದರು.

ಕಾರ್ಯರೂಪ : ನಿಮಗೆ ಜನಗಳಿಗಿಂತ ದೇವರವೇಲೆ ಹೆಚ್ಚಾಗಿ ಭಯವಿರುವುದರಿಂದ ಈ ದಿನ ನೀವು ಏನಾದರು ವ್ಯತ್ಯಾಸವಾಗಿ ಮಾಡಲು ತೀರ್ಮಾನಿಸಿರಿ.
ನೀವು ಕೆಲಸ ಮಾಡುವ ಸ್ಥಳದಲ್ಲಿ ನಿಮಗೆ ಯಾರಮೇಲಾದರು ಭಯವಿದ್ದಲ್ಲಿ ಅಥವಾ ಅವರ ಜೊತೆ ಇರಲು ಕಷ್ಟವೆನಿಸಿದಿದ್ದಲ್ಲಿ, ಈ ದಿನ ನೀವು ನಿಮ್ಮ ನಂಬಿಕೆಯನ್ನು ಅವರಲ್ಲಿ ಹಂಚಿಕೊಳ್ಳಿರಿ.

ದೇವರಲ್ಲಿ ಭಯ ಅಥವಾ ದೇವರಲ್ಲಿ ಭಯವುಳ್ಳ ಜನರು ಎಂಬ ಶೀರ್ಷಿಕೆಯ ಬಗ್ಗೆ ಅಧ್ಯಯನಮಾಡಿರಿ.

ಆಯ್ಕೆ : ಓಬದ್ಯ ಮತ್ತು ದೇವರ ಮೇಲೆ ಭಯವಿರುವಂತಹ ಬೇರೆ ಜನಗಳಾದ ದಾನಿಯೇಲ (ದಾನಿಯೇಲ 6) ದಾವಿದ ಮತ್ತು ಶಿಪ್ರಾ ಮತ್ತು ಪೂಗಾ (ವಿಮೋಚನಕಾಂಡ 1:15–17) ಇವರನ್ನು ನಿಮಗೆ ಹೋಲಿಕೆ ಮಾಡಿ ನೋಡಿರಿ.

## 11ನೇ ದಿನ
## ಮಿಕಾಯ (1 ಅರಸುಗಳು 22:1–28)

ಇಸ್ರಾಯೇಲಿನ ರಾಜನಾದ ಆಹಾಬನೂ, ಯೆಹೂದದ ಅರಸನಾದ ಯೆಹೋಷಾಫಾಟನು ರಾಜಕೀಯ ಕಾರಣಗಳಿಗಾಗಿ ಒಟ್ಟುಗೂಡಿದರು. ಅವರು ಅರಾಮಿನ ಅರಸನನ್ನು ದಾಳಿ ಮಾಡಿ ಗಿಲ್ಯಾದಿನಲ್ಲಿರುವ ರಾಮೋತ್ ಪಟ್ಟಣವನ್ನು ವಶಪಡಿಸಿಕೊಳ್ಳಲು ಬಯಸಿದರು.

ಆಹಾಬನು ಯೆಹೋಷಾಫಾಟ್ ರಾಜನ ಸಹಾಯ ಕೇಳಿದನು. ಆದರೆ ಯೆಹೋಷಾಫಾಟನು ಯೆಹೋವನ ವಾಕ್ಯವನ್ನು ಮೊದಲು ವಿಚಾರಿಸಲು ಹೇಳಿದನು. ಆಗಲೇ ಅಹಾಬನ 400 ಪ್ರವಾದಿಗಳು ಮತ್ತು ಯೆಹೋವನ ಒಬ್ಬನೇ ಪ್ರವಾದಿಯಾದ ಮಿಕಾಯನು ಈ ಗ್ರಂಥದಲ್ಲಿ ಕಾಣಿಸಿಕೊಳ್ಳುತ್ತಾರೆ. ಮಿಕಾಯನ ಬಗ್ಗೆ ಅಹಾಬನು ಈ ರೀತಿ ಹೇಳುತ್ತಾನೆ :

1 ಅರಸು 22:8 – ಆಗ ಇಸ್ರಾಯೇಲಿನ ಅರಸನು ಯೆಹೋಷಾಫಾಟನಿಗೆ, ನಾವು ಯೆಹೋವನನ್ನು ವಿಚಾರಿಸುವ ಹಾಗೆ ಇಮ್ಲನ ಮಗ ಮಿಕಾಯನೆಂಬ ಇನ್ನೊಬ್ಬನಿದ್ದಾನೆ. ಆದರೆ ನಾನು ಅವನನ್ನು ಹಗೆ ಮಾಡುತ್ತೇನೆ. ಏಕೆಂದರೆ ಅವನು ನನ್ನನ್ನು ಕುರಿತು ಒಳ್ಳೆಯದನ್ನಲ್ಲ, ಕೆಟ್ಟದ್ದನ್ನು ಪ್ರವಾದಿಸುತ್ತಾನೆ ಎಂದನು.

ನಾವು ಇಲ್ಲಿ ಮಿಕಾಯ ಮತ್ತು 400 ಮಂದಿ ಸುಳ್ಳು ಪ್ರವಾದಿಗಳನ್ನು ನೋಡುತ್ತೇವೆ. ಇಸ್ರಾಯೇಲ್ ಮತ್ತು ಯೆಹೂದದ ಅರಸರಿಗೆ, ಅವರು ಅರಾಮ್ ರಾಜನ ಮೇಲೆ ದಂಡೆತ್ತಿ ಹೋದರೆ ಗೆಲ್ಲುವರೋ ಇಲ್ಲವೋ ಎಂದು ತಿಳಿಯಬೇಕಾಗಿತ್ತು.

ಆಹಾಬನ 400 ಪ್ರವಾದಿಗಳು ರಾಜನು ಬಯಸಿದುದನ್ನೇ ಪ್ರವಾದಿಸಿದರು. ಆದರೆ ಅವನು ಸತ್ಯಕ್ಕೆ ಅಂಟಿಕೊಂಡಿದ್ದನು.

ಸತ್ಯ ಹೇಳಿದ್ದಕ್ಕಾಗಿ,ಮಿಕಾಯ ಚಿದ್ಕೀಯನಿಂದ ಕೆನ್ನೆಗೆ ಹೊಡೆಸಿಕೊಳ್ಳಬೇಕಾಯಿತು, ಅವನು ಸೆರೆಮನೆಗೆ ಹಾಕಲ್ಪಟ್ಟನು. ಆದರೂ ಅವನು ದೇವರ ಮನುಷ್ಯನಾಗಿ ಸ್ಥಿರವಾಗಿ ನಿಂತನು. ಅವನು ತನ್ನನ್ನು ಮತ್ತು ಇತರರನ್ನು ಮೆಚ್ಚಿಸದೆ ದೇವರನ್ನು ಮಾತ್ರ ಮೆಚ್ಚಿಸಿದನು.

ನೀವು ನಿಮ್ಮ ಕುಟುಂಬದಲ್ಲಿ, ಕಛೇರಿಯಲ್ಲಿ ಮತ್ತು ಸಮಾಜದಲ್ಲಿ ದೇವರ ಮನುಷ್ಯ / ಮನುಷಳಾಗಿ ನಿಂತಿರುವಿರಾ ? ದೇವರು ಹೇಳುವುದನ್ನೆ ಹೇಳಲು ಬಯಸುವಿರಾ ? ಆಹಾಬನಿಗೆ ಮಿಕಾಯನನ್ನು ಕಂಡರೆ ಇಷ್ಟವಿರಲಿಲ್ಲ, ಏಕೆಂದರೆ ರಾಜನು ಬಯಸಿದ್ದನ್ನು ಅವನು ಪ್ರವಾದಿಸುತ್ತಿರಲಿಲ್ಲ. ಸತ್ಯ ಹೇಳಿ ಬೇರೆಯವರಿಂದ ತಿರಸ್ಕರಿಸ್ಪಡಲು ನೀವು ಇಚ್ಛಿಸುವಿರಾ ?

ಸತ್ಯ ಹೇಳಲು ಎಂಥ ಬೆಲೆ ತೆತ್ತಿದ್ದೀರಿ ? ಅಷ್ಟು ಬೆಲೆ ಕೊಟ್ಟಿದ್ದು ಯುಕ್ತವೇ ? ನೀವು ಯಾವ ತೆರನಾದ ಜನರನ್ನು ಇಷ್ಟಪಡುತ್ತೀರಿ ? ಸತ್ಯ ಹೇಳುವವರನ್ನೋ ಅಥವಾ ನಿಮಗೆ ಬೇಕಾದುದನ್ನು ಹೇಳಿ ನಿಮ್ಮನ್ನು ಮೆಚ್ಚಿಸುವವರನ್ನೋ ? ಯಾವ ರೀತಿಯಲ್ಲಿ ಪ್ರವಾದಿ ಮಿಕಾಯನ ತರಹ ನೀವಿದ್ದೀರಿ ?

ವಿರುದ್ಧ ಅಭಿಪ್ರಾಯಗಳಿರುವಾಗ ನೀವು ಯಾವುದನ್ನು ಆರಿಸಿಕೊಳ್ಳುತ್ತೀರಿ ? ನಿಮ್ಮ ಸುರಕ್ಷತೆ ನೋಡಿಕೊಳ್ಳುವಿರಾ ಅಥವಾ ಸತ್ಯಕ್ಕಾಗಿ ಅಪಾಯವನ್ನು ಎದುರಿಸಲು ಬಯಸುವಿರಾ ? ನೀವೊಬ್ಬರೇ ಇದ್ದರೂ ಸಹ, ಸತ್ಯಕ್ಕಾಗಿ ಸ್ಥಿರವಾಗಿ ನಿಲ್ಲುವಿರಾ ?

ಅನ್ವಯ :

1. ಕೆಲವು ಸನ್ನಿವೇಶಗಳಲ್ಲಿ ನಿಜ ಹೇಳದೆ, ಹಿಂಜರಿದ ಸಮಯಗಳನ್ನು ಪಟ್ಟಿ ಮಾಡಿ, ಪ್ರಾರ್ಥಿಸಿ, ದೇವರಿಂದ ಧೈರ್ಯ ಪಡೆದು ಮಿಕಾಯನ ಹಾಗೆ ಸ್ಥಿರವಾಗಿ ನಿಲ್ಲಿ.

2. ಯಾರು ಸತ್ಯವನ್ನು ನಿಮಗೆ ಹೇಳುತ್ತಾರೋ ಅವರ ಜೊತೆಸೇರಿ ಅವರಿಂದ ನಿಮ್ಮ ಜೀವನಕ್ಕೆ ಬೇಕಾದ ಸಲಹೆಗಳನ್ನು ಪಡೆಯಿರಿ.

# 12ನೇ ದಿನ

## ನಾಮಾನನ ಸೇವಕಿ : ಪರಿಹಾರಕ್ಕೆ ಮಾರ್ಗ

ನಮ್ಮೆಲರಿಗೆ ನಾಮಾನನು ಚೆನ್ನಾಗಿ ಗೊತ್ತು , ಅವನು ಆರಾಮ್ ರಾಜನ ಸೇನೆಯ ಸೆನಾಧಿಪತಿಯಾಗಿದ್ದನು. ಅವನು ತನ್ನ ಯಜಮಾನನ ದೃಷ್ಟಿಯಲ್ಲಿ ಒಬ್ಬ ಮಹಾನ್ ವ್ಯಕ್ತಿಯಾಗಿ ಪರಿಗಣಿಸಲ್ಪಟ್ಟಿದ್ದನು. ಅವನ ಮೂಲಕ ಆರಾಮನಿಗೆ ದೇವರು ಜಯ ಕೊಟ್ಟಿದ್ದರು, ಅವನೊಬ್ಬ ಧೀರ ಸೈನಿಕನಾಗಿದ್ದ. ಆದರೆ ಒಂದು ಸಮಸ್ಯೆಯಿತ್ತು. ಏನೆಂದರೆ ನಾಮಾನನಿಗೆ ಕುಷ್ಠರೋಗವಿತ್ತು.

ಇಸ್ರಾಯೇಲಿಂದ ಒಂದು ಸಣ್ಣ ಹುಡುಗಿಯನ್ನು ಸೆರೆಹಿಡಿದು ಕರೆತಂದರು,. ಆವಳು ನಾಮಾನನ ಹೆಂಡತಿಯ ಸೇವಕಳಾದಳು. ಅವಳಲ್ಲಿ ಏನೋ ಅಸಾಮಾನ್ಯ ನಡತೆಯಿತ್ತು. ಎಷ್ಟೊಂದು ಕಷ್ಟ, ನೋವು, ಅವಮರ್ಯಾದೆ ಅನುಭವಿಸಿದರೂ, ಸರ್ವಸೃಷ್ಟಿಯಾದ ದೇವರಲ್ಲಿ ಅಚಲ ನಂಬಿಕೆಯಿಟ್ಟಿದ್ದಳು. ಕೆಲವರು ಕಷ್ಟಬಂದಾಗ ದೇವರಲ್ಲಿ ನಂಬಿಕೆ ಕಳಕೊಳ್ಳುತ್ತಾರೆ., ಆದರೆ ಅವಳು ಒಂದು ದೊಡ್ಡ ಸಮಸ್ಯೆಗೆ ಪರಿಹಾರ ಮಾರ್ಗವಾದಳು.

ನಮ್ಮೆಲ್ಲರಿಗೆ ಜೀವನದಲ್ಲಿ ಸಮಸ್ಯೆಗಳು ಬರುತ್ತವೆ. ಕೆಲ ಸಮಯಗಳಲ್ಲಿ ನಮ್ಮಿಂದಲೇ ಸಮಸ್ಯೆಗಳು ಉಂಟಾಗುತ್ತವೆ. ಈ ದಿನ, ಈ ದಾಸಿಯಾದ ಸಣ್ಣ ಹುಡುಗಿಯಿಂದ, ನಮ್ಮ ಜೀವನದಲ್ಲಿ ಬರುವ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದು ಎಂಬುದನ್ನು ಕಲಿಯೋಣ.

ಆ ಸಣ್ಣ ಹುಡುಗಿ ತನ್ನ ಯಜಮಾನನಿಗೆ ದೀನಳಾಗಿ ಹೇಳುತ್ತಾಳೆ ನನ್ನ ಧಣಿಯು... (2 ಅರಸ 5:3) ಅವಳು ತುಂಬೂ ಗೌರವದಿಂದ ಮಾತ್ರವಲ್ಲ ಅಚಲವಾದ ನಂಬಿಕೆಯಿಂದ ಈ ಮಾತನ್ನು ಹೇಳುತ್ತಾಳೆ. ಸರ್ವಶಕ್ತನಾದ ಇಸ್ರಾಯೇಲ್ ದೇವರಲ್ಲಿ ಸಂಪೂರ್ಣ ನಂಬಿಕೆಯಿದ್ದುದರಿಂದ ಮಾತ್ರವೇ ಅವಳಿಗೆ ಈ ಮಾತು ಹೇಳುವಂತಾಯಿತು.

ನಾಮಾನನಿಗೆ ಇಸ್ರಾಯೇಲ್ ದೇವರಲ್ಲಿ ನಂಬಿಕೆಯಿತ್ತೆಂದು ನಮಗೆ ಗೊತ್ತಿದೆ. ಏಕೆಂದರೆ 2 ಅರಸು 5:1 ರ ಪ್ರಕಾರ ಸಿರಿಯಾ ದೇಶದ ನಾಮಾನನ ಮೂಲಕ ಯೆಹೋವನು ರಾಜನಾದ ಆರಾಮನಿಗೆ ಜಯ ಕೊಟ್ಟಿದ್ದನು.

ಈ ಸಣ್ಣ ಹುಡುಗಿ ನಾಮಾನನ ಹೆಂಡತಿಯ ಹತ್ತಿರ ಸತತವಾಗಿ ಯೆಹೋವನ ಬಗ್ಗೆ ಮಾತಾಡಿರಬಹುದು : ಅದೇ ಮೊದಲಬಾರಿಯಾಗಿರಲಿಕ್ಕಿಲ್ಲ, ಅವಳು ಸಮಾರಿಯದಲ್ಲಿರುವ ಪ್ರವಾದಿಯ ಬಗ್ಗೆಯೂ ಎಡೆಬಿಡದೆ ಹೇಳಿರಬಹುದು ಏಕೆಂದರೆ ತನ್ನ ನಂಬಿಕೆಯಿಂದ ಅವರ ಮನವೊಲಿಸಿದ ನಂತರ ನಾಮಾನನು ಅವಳ ಮಾತಿಗೆ ಕಿವಿಗೊಟ್ಟನು.

ಆ ಸಣ್ಣ ಹುಡುಗಿ ಹೇಳುವ ಮಾತು ಗಮನಿಸಿ ನನ್ನ ಧಣಿಯು ಆ ಮಾತು ಅವಳಿಗೆ ನಾಮಾನನ ಬಗ್ಗೆ ಇರುವ ಕಳಕಳಿಯನ್ನು ತೋರಿಸುತ್ತದೆ.

ಕಡೆಗೆ ನಾಮಾನನೇ ಬಿಲ್ಲಿಗೆ ಬಾಣವನ್ನೇರಿಸಿ ಗುರಿಯಿಡದೆ ಇಸ್ರಾಯೇಲ್ ರಾಜನಾದ ಆಹಾಬನನ್ನು ಯುದ್ಧದಲ್ಲಿ ಕೊಂದನೆಂದು ಇತಿಹಾಸ ಹೇಳುತ್ತದೆ (2 ಪುರ್ವಕಾಲವೃತ್ತಾಂತ 18:33) ಇಸ್ರಾಯೇಲ್ ಶತ್ರು ಸೈನ್ಯವಾದ್ದರಿಂದ ನಾಮಾನನು ಧೈರ್ಯಶಾಲಿಯಾಗಬೇಕಿತ್ತು. ಮೊದಲು ಸಿರಿಯಾದ ರಾಜನನ್ನು ಅಪ್ಪಣೆ ಕೇಳಿ, ಇಸ್ರೇಲ್ ರಾಜನಾದ ಯೊರಾಮನ ಮೇಲೆ ದಂಡೆತ್ತಿ ಹೋದನು. ಅದೆಲ್ಲವನ್ನು ಅವನು ಹೇಗೆ ಮಾಡಲು ಸಾಧ್ಯವಾಯಿತು ? ಅದೆಲ್ಲಾ ನಮ್ಮ ಹೊಗಳಿಕೊಳ್ಳಿದ ಕಥಾನಾಯಕಿಯಾದ ಸಣ್ಣ ಹುಡುಗಿಯ ಮೂಲಕ ದೇವರು ತಮ್ಮ ಬಲವನ್ನು ಪ್ರದರ್ಶಿಸಿದ್ದರಿಂದ ಸಾಧ್ಯವಾಯಿತು.

ನಮ್ಮ ಸಮಸ್ಯೆಗಳು ಎಷ್ಟೋ ದೊಡ್ಡದಿರಲಿ, ನಮ್ಮ ದೇವರೇ ನಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿದ್ದಾರೆ, ನೀವಿದನ್ನು ನಂಬುತ್ತಿರಾ ?

ಆ ಸಣ್ಣ ಹುಡುಗಿ ಅಸಾಧಾರಣವಾದುದನ್ನು ನಂಬಿದಳು. ದಾಸಿಯಾಗಿದ್ದರೂ ಸಹ, ತನ್ನ ಅಚಲ ನಂಬಿಕೆಯಿಂದ ತನ್ನ ಧಣಿಯ ಮನವೊಲಿಸಿ, ಅವನು ಕಲ್ಪನೆಯಲ್ಲಿ ಕೂಡ ಮಾಡಲಾರದ ಸಂಗತಿಯನ್ನು ಅವನಿಂದ ಮಾಡಿಸಿದಳು ಅದೇನೆಂದರೆ ಶತ್ರು ರಾಜನಿಂದ ಸಹಾಯ ಕೇಳುವುದು.

ನಾವು ಯೇಸುವನ್ನು ಮತ್ತು ಆತನ ಶಕ್ತಿಯನ್ನು ನಂಬದ ಜನರಿಂದ ಸುತ್ತುವರೆದಿದ್ದೇವೆ. ಅವರು ಜೀವನದಲ್ಲಿ ತುಂಬಾ ಸಮಸ್ಯೆಗಳಿಂದ ಹೋರಾಡುವುದನ್ನು ನಾವು ನೋಡುತ್ತೇವೆ. ನಾವು ಅವರನ್ನು ನಿರ್ಲಕ್ಷಿಸುತ್ತೇವೊ ಅಥವಾ ಅಸಹಾಯಕರಾಗಿದ್ದೇವೋ ? ಅಥವಾ ಆ ಸಣ್ಣ ಹುಡುಗಿಯ ತರಹ ಜನರ ಮನವೊಲಿಸಿ ಯೇಸುವಿನ ಮರೆಹೋಗು ಎಂದು ಅಚಲ ನಂಬಿಕೆಯಿಂದ ಹೇಳುತ್ತೇವೋ ?

ನಮಗೆ ಗೊತ್ತಿದೆ ನಾಮಾನನು ಶತ್ರು ರಾಜನಿಂದ ನಿಂದನೆಗೆ ಒಳಪಡಬೇಕಾಯಿತು ಮತ್ತು ಎಲೀಷನು ಗುಣಮಾಡುವ ಶೈಲಿಯಿಂದ ನಿರಾಶನಾದನು. ಆದರೂ ಅವನು ತನ್ನ ಸೇವಕನ ಮಾತನ್ನು ಕೇಳಿದ್ದರಿಂದ ಗುಣವಾದನು. ನಾಮಾನನು ಇಸ್ರಾಯೇಲ್ ದೇವರ ಶಕ್ತಿಯನ್ನು ಪರೀಕ್ಷಿಸಿ ವಿಯಿಯಾದನು.

ತೆರೆಮರೆಯಲ್ಲಿ ನಾಮಾನನ ಜೀವನದಲ್ಲಿ ಕೆಲಸಮಾಡಿದ ಆ ಸಣ್ಣ ಹುಡುಗಿಯ ಬಗ್ಗೆ ನಾವು ಮಾತನಾಡದಿದ್ದರೆ ಆ ಗೆಲುವಿನ ಕಥೆ ಪೂರ್ಣವಾಗದು.

ಅನ್ವಯ :
ಮೊದಲಿಗೆ ನಾವು ಆರಾಧಿಸುವ ದೇವರು, ಕೇಳಿದ ತಕ್ಷಣ ನಮ್ಮೆಲ್ಲಾ ಸಮಸ್ಯೆಗಳನ್ನು ಪರಿಹರಿಸುತ್ತಾನೆಂದು

ನಂಬೋಣ.
ನಂತರ ನಮ್ಮನ್ನು ಸುತ್ತುವರೆದಿರುವ ನಂಬಿಕೆಯಿಲ್ಲದ ಸಹೋದ್ಯೋಗಿಗಳ ಮನವೊಲಿಸಿ ಯೇಸುವಿನ ಮರೆಹೋಗು ಎಂದು ಹೇಳಓಮ. ಯಾರಿಗೆ ಗೊತ್ತು ಇದರಿಂದ ನಾವೂ ಕೂಡ ಅವರ ಜೀವನದಲ್ಲಿ ಒಬ್ಬ ಹೊಗಳಿಕೊಳ್ಳದ ಕಥಾನಾಯಕರಾಗಬಹುದು.

## 13. ರೇಕಾಬ್ಯರು (ಯೆರೆಮೀಯ)

ಇಸ್ರಾಯೇಲ್ಯರಿಗೆ ಪಾಠಕಲಿಸಲು ದೇವರು ರೇಕಾಬ್ಯರನ್ನು ಉಪಯೋಗಿಸಿದರು. ದೇವರು ಯೆರೆಮೀಯನಿಗೆ ವಚನ 1 ರಲ್ಲಿ ರೇಕಾಬ್ಯರಿಗೆ ದ್ರಾಕ್ಷಾರಸವನ್ನು ಕುಡಿಯಲು ಕೊಡೆಂದು ಹೇಳುತ್ತಾರೆ. ಆದರೆ ವಚನ 6-7ರಲ್ಲಿ ರೇಕಾಬ್ಯರ ಉತ್ತರವೇನೆಂದರೆ, ನಮ್ಮ ತಂದೆಯಾದ ರೇಕಾಬನು 200 ವರ್ಷಗಳ ಹಿಂದೆ ಅಜ್ಞಾಪಿಸಿದ ಪ್ರಕಾರ ನಾವು ಎಂದೆಂದಿಗೂ ದ್ರಾಕ್ಷಾರಸ ಕುಡಿಯುವುದಿಲ್ಲ, ಬೀಜವನ್ನು ಬಿತ್ತುವುದಿಲ್ಲ, ವಾಸಮಾಡುವುದಕ್ಕೆ ಮನೆಗಳನ್ನು ಕಟ್ಟುವುದಿಲ್ಲ ಅಥವಾ ದ್ರಾಕ್ಷಿ ತೋಟಗಳನ್ನು ನೆಡುವುದಿಲ್ಲ ಎಂದು ಹೇಳಿದರು.

ದೇವರು ವಚನ 12 ರಿಂದ 17ರವರೆಗೆ ಅವರ ಪ್ರತ್ಯುತ್ತರವನ್ನು ಇಸ್ರಾಯೇಲರ ಪ್ರತ್ಯುತ್ತರದೊಂದಿಗೆ ಹೋಲಿಸುತ್ತಿದ್ದಾರೆ :
ಆ ಹೋಲಿಕೆಯ ವ್ಯತ್ಯಾಸವನ್ನು ನೋಡೋಣ :

1. ರೇಕಾಬ್ಯರು ತಮ್ಮ ಯಕತ್ಮಾನವ ನಾಯಕನ ಮಾತಿಗೆ ಬೆಲೆ ಕೊಟ್ಟು ತಮ್ಮ ಪ್ರತಿಜ್ಞೆ ಉಳಿಸಿಕೊಂಡರು ಆದರೆ ಇಸ್ರಾಯೇಲರು ತಮ್ಮ ದೇವನಾಯಕನೊಂದಿಗಿದ್ದ ಒಪ್ಪಂದ ಮುರಿದುಬಿಟ್ಟಿದ್ದರು.

2. ಯೋನಾದಾಬನು ಒಂದೇ ಒಂದು ಸಲ ದ್ರಾಕ್ಷಾರಸ ಕುಡಿಯ ಬೇಡ ಎಂದು ಹೇಳಿದ ತಕ್ಷಣ ವಿಧೇಯರಾದರು ಆದರೆ ಇಸ್ರಾಯೇಲರು ಎಷ್ಟೋಸಲ ದೇವರ ಅವರನ್ನು ಪಾಪದಿಂದ ತಿರುಗಿಕೊಳ್ಳಿ ಎಂದು ಅಜ್ಞಾಪಿಸಿದಾಗಲೂ ಹಾಗೆ ಮಾಡಲು ನಿರಾಕರಿಸಿದರು.

3. ರೇಕಾಬ್ಯರು ಇಹ ಜೀವನಕ್ಕೆ ಸಂಬಂದಿಸಿದ ಕಟ್ಟು ಕಟ್ಟಳೆಗಳನ್ನು ಪಾಲಿಸಿದರು ಆದರೆ ಇಸ್ರಾಯೇಲರು ನಿತ್ಯ ಜೀವನಕ್ಕೆ ಸಂಬಂಧಿಸಿದ ದೇವರನ್ನು ಪಾಲಿಸಲು ನಿರಾಕರಿಸಿದರು.

4. ರೇಕಾಬ್ಯರು ನೂರಾರು ವರ್ಷಗಳಿಂದ ತಮ್ಮ ನಾಯಕನಿಗೆ ವಿಧೇಯರಾದರು ಆದರೆ ಇಸ್ರಾಯೇಲರು ನೂರಾರು ವರ್ಷಗಳಿಂದ ಅವಿಧೇಯರಾಗಿದ್ದರು.
5. ರೇಕಾಬ್ಯರು ಆಶೀರ್ವದಿಸಲ್ಪಟ್ಟರು ಆದರೆ ಇಸ್ರಾಯೇಲರು ಶಪಿಸಲ್ಪಟ್ಟರು.

ಯೋನಾದಾಬನು ತನ್ನ ಗಂಡು ಮತ್ತು ಹೆಣ್ಣುಮಕ್ಕಳಿಗೆ, ದ್ರಾಕ್ಷಾರಸ ಕುಡಿಯಬಾರದು,

ಮನೆಗಳನ್ನು ಕಟ್ಟಬಾರದು, ಬೀಜಬಿತ್ತಬಾರದು, ದ್ರಾಕ್ಷಿತೋಟನೆಡ ಬಾರದು, ಆದರೆ ಗುಡಾರಗಳಲ್ಲಿ ವಾಸಿಸಬೇಕೆಂದು ಅಜ್ಞಾಪಿಸಿದ್ದನು. ಅವನ ಆಜ್ಞೆ ತೀವ್ರವಾಗಿತ್ತು. ನಾವು ವಾದಮಾಡಬಹುದು ಏಕೆ ಜೀವನದಲ್ಲಿ ಸಿಗುವ ಸುಖ ಕೌಕರ್ಯಗಳಿಂದ ಅವರು ವಂಚಿತರಾಗಬೇಕೆಂದು, ಆದರೆ ನಾವು ನೋಡುವ ಹಾಗೆ ಯೋನಾರಾಬನು ದೈವಭಕ್ತಿಯುಳ್ಳ ಮನುಷ್ಯನಾಗಿದ್ದನು. ತನ್ನ ಸುತ್ತ ನಡೆಯುತ್ತಿರುವ ನೀಚತನವನ್ನು ನೋಡಿ, ಅಂಥಾ ನೀಚ ಜೀವನದಿಂದ ತನ್ನ ಮತ್ತು ತನ್ನ ಸಂತತಿಯವರನ್ನು ಸಂರಕ್ಷಿಸಲು, ಇಂಥಾ ಒಂದು ಕಠಿಣ ಆಜ್ಞೆಯಡಿ ಅವರನ್ನು ಇರಿಸಿದನು.

ಇಂಥಾ ಒಂದು ಆಜ್ಞೆಯಿಂದ ಅವರು ಜೀವನಪೂರ್ತಿ ಯಾತ್ರಿಕರಾಗಿಯೇ ಉಳಿದು ಎಲ್ಲೂ ಬೇರೂರಿ ನಿಲ್ಲುವುದಕ್ಕೆ ಅವಕಾಶವಿಲ್ಲದಾಯಿತು. ಇಸ್ರಾಯೇಲ್ ರಾಜ್ಯದ ಸಂಸ್ಥಾಪಕರೆಲ್ಲಾ ಯಾತ್ರಿಕರಾಗಿಯೇ ಉಳಿದು ಗುಡಾರಗಳಲ್ಲಿ ವಾಸಿಸಿದ್ದರು. ಆದರಿಂದ ಯೋನಾದಾಬನು ತನ್ನ ಕುಟುಂಬವೂ ಹಾಗೆಯೇ ಇರಬೇಕೆಂದು ನಿಶ್ಚಯಿಸಿದನು, ಆದರೆ ವಿಸ್ಮಯದ ಸಂಗತಿ ಏನೆಂದರೆ 200 ವರ್ಷಗಳಾದರೂ ಅವನ ಸಂತತಿ, ಅವನ ಆಜ್ಞೆಯನ್ನು ಸಂಪೂರ್ಣವಾಗಿ ಪಾಲಿಸಿದ್ದರು. ಅದುವೇ ಈ ಕಥಾಬಾಗವಾಗಿದೆ.

ಒಂದು ಸಂಪ್ರದಾಯವೇನೆಂದರೆ ಒಂದು ಸಂತತಿಯಿಂದ ಮತ್ತೊಂದು ಸಂತತಿಗೆ ಸಾಗುವುದೊ, ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆ ಅದನ್ನು ಕಲಿತು, ಅದರಂತೆ ಜೀವಿಸುವುದು, ಅವರು ಅದನ್ನು ಎಷ್ಟೊಂದು ಭದ್ರವಾಗಿ ಹಿಡಿದಿದ್ದರೆಂದರೆ, ಯೆರೆಮೀಯನು ದ್ರಾಕ್ಷರಸ ಕುಡಿಯಲು ಎಷ್ಟೊಂದು ಪ್ರೇರೆಪಿಸಿದರೂ, ಖಡಾಖಂಡಿತವಾಗಿ ನಿರಾಕರಿಸಿದರು, ಏಕೆಂದು ಕೇಳಿದಾಗ ಅವರ ಪೂರ್ವಜನಾಂಗದ ಯೋನಾದಾಬನ ಆಜ್ಞೆ ಕಥೆ ಹೇಳಿದರು.

ಅವರು ಹೇಳಿದ್ದೇನೆಂದರೆ, ನಮ್ಮ ಪೂರ್ವಜ ರೆಕಾಬನ ಮಗನಾದ ಯೋನಾದಾಬನ ಆಜ್ಞೆಯನ್ನು ನಾವು ಅಕ್ಷರಶಃ ಪಾಲಿಸಿದ್ದೇವೆ, ಆದರಿಂದ ನಾವು ಇದುವರೆಗೂ ದ್ರಾಕ್ಷಾರಸ ಕುಡಿಯಲಿಲ್ಲ, ನಾವು, ನಮ್ಮ ಹೆಂಡತಿಯರು, ಗಂಡು ಮಕ್ಕಳು, ಹೆಣ್ಣುಮಕ್ಕಳು, ಯಾರೂ ಕುಡಿಯುವುದಿಲ್ಲ, ಮತ್ತು ನಾವು ನಮ್ಮ ವಾಸಕ್ಕೆ ಮನೆ ಕಟ್ಟಿಕೊಂಡಿಲ್ಲ, ದ್ರಾಕ್ಷಿ ತೋಟ ನೆಡಲಿಲ್ಲ, ಬೀಜ ಬಿತ್ತಿಲ್ಲ. ಆದರೆ ಗುಡಾರಗಳಲ್ಲಿ ವಾಸಿಸಿದ್ದೇವೆ : ಎಂದರು (ಯೆರೇಮೀಯ 35:8-10)

ಯೆರೇಮಿಯನಿಗೆ ರೆಕಾಬ್ಯರ ಪ್ರತಿಜ್ಞೆ ಮುರಿಯಲು ಪ್ರಚೋದಿಸುವ ಮನಸ್ಸಿರಲಿಲ್ಲ, ಆದರೆ ಅವರಿಗಿದ್ದ ಸ್ವಾಮಿನಿಷ್ಠೆಯನ್ನು ಉದಾಹರಣೆಯಾಗಿಟ್ಟು ಯೆಹೂದ ಜನರಿಗೆ ಪಾಠ ಕಲಿಸಿದರು. ರೇಕಾಬ್ಯರು, ಇಸ್ರಾಯೇಲ್ ಜನಾಂಗ ತಮ್ಮ ದೇವರಿಗೆ ನಿಷ್ಠಾವಂತರಾಗಿರುವುದಕ್ಕಿಂತ ಹೆಚ್ಚಾಗಿ ತಮ್ಮ ಪೂರ್ವಜರ ಕಟ್ಟಳೆಗಳಿಗೆ ಭದ್ದರಾಗಿದ್ದರು. ಇದುವೇ ಈ ಪಾಠದ ಮುಖ್ಯ ವಿಷಯವಾಗಿದೆ.

ಪ್ರಶ್ನೆ : ನಾವು ನಮ್ಮ ಕುಟುಟಂಬಗಳಿಗೆ ಯಾವ ಆತ್ಮಿಕ ಸಂಪ್ರದಾಯಗಳನ್ನು ಸಾಗಿಸುತ್ತಿದ್ದೇವೆ ?

ನಾವು ಪಾಲಿಸದ ಸಂಪ್ರದಾಯಗಳನ್ನು ನಮ್ಮ ಕುಟುಂಬಕ್ಕೂ, ನಮ್ಮ ನಂತರದ ಪೀಳಿಗೆಗೂ ಸಾಗಿಸಲು ಸಾಧ್ಯವಿಲ್ಲ.

## 14. ಬಾರೂಕ (ದೇವರ ಧರ್ಮಶಾಸ್ತ್ರಜ್ಞ)

ಯೆರೆಮೀಯ 36:1-32, ಬಾರೂಕನು ಯೆರೆಮೀಯನ ಆಪ್ತ ಸ್ನೇಹಿತನೂ, ಮತ್ತು ಯೆಹೂದರಿಗೆ ದೇವರ ವಾಕ್ಯವನ್ನು ಸಾರಲು ಬಹಳ ವರ್ಷ ಅವನ ಜೊತೆಗಾರನೂ ಆಗಿದ್ದನು. ಕ್ರಿ.ಪೂ. 607ರಲ್ಲಿ ಬ್ಯಾಬಿಲೋನ್ನಿಯರು ಭಯಂಕರ ದಾಳಿಯಿಂದ ಇಸ್ರಾಯೇಲನ್ನು ನಾಶಮಾಡಿ, ಇಸ್ರಾಯೇಲರನ್ನು ಸೆರೆಹಿಡಿದು ಐಗುಪ್ತದೇಶಕ್ಕೆ ಕರೆದುಕೊಂಡು ಹೋದುದನ್ನು ಇವರಿಬ್ಬರೂ ನೋಡಿದ್ದರು. ಯೆರೆಮೀಯನು ಜನರ ದುರ್ನಡತೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದರಿಂದ ಅವರು ಅವನನ್ನು ಸೆರೆಮನೆಯಲ್ಲಿ ಹಾಕಿದ್ದರೋ ಅಥವಾ ದೇವಾದಲಯದೊಳಗೆ ಬರಲು ನಿಷೇಧಿಸಿದ್ದರೋ, ತಿಳಿಯದು, ಆದರೆ ಯೆರೆಮೀಯನ ಓಡಾಟಕ್ಕೆ ನಿಭಂದವಿತ್ತು. ಆದರಿಂದ ಅವನು ಬಾರೂಕನ ಸಹಾಯ ಕೇಳಿದನು.

ಬಾರೂಕನು ಯೆರೆಮೀಯನ ಎಲ್ಲಾ ಸೂಚನೆಗಳನ್ನು ಅಕ್ಷರಶ: ಪಾಲಿಸಿದನು ಯೆರೇಮೀಯನು ಹೇಳಿದ ಹಾಗೆ ದೇವರ ವಾಕ್ಯವನ್ನು ಸುರುಳಿಗಳಲ್ಲಿ ಬರೆದಿಟ್ಟನು. ಮಹಾ ಶೋಷಣೆಯ ಸ್ಥಿತಿಯಲ್ಲಿಯೂ ಬಾರೂಕನು ತನ್ನ ಜೀವ ಲೆಕ್ಕಿಸದೆ ಯೆರೆಮೀಯನ ಜೊತೆಗಾರನಾದನು. ಇವು ದೇವರ ಮುಂಬರುವ ತೀರ್ಪಿನ ಬಗ್ಗೆ ಬರೆದ ವಾಕ್ಯಗಳಾಗಿದ್ದುವು, ಆದ್ದರಿಂದ ದೇವಾಲಯದೊಳಗೆ ಹೋಗಿ ಬಹಿರಂಗವಾಗಿ ದೇವರ ವಾಕ್ಯ ಓದಿ ಜನರನ್ನು ಎಚ್ಚರಿಸುವುದು ಬಾರೂಕನಿಗೆ ಅಪಾಯವಾಗಿತ್ತು.

ಯೋಚಿಸಿ, ದೇವರ ರಾಜ್ಯಕ್ಕಾಗಿ ಏನಾದರೂ ತುಂಬಾ ಉತ್ಸುಕತೆಯಿಂದ ಕೊನೆಯ ಬಾರಿ ಏನು ಮಾಡಿದ್ದೀರಿ ? ದೇವರ ವಾಕ್ಯ ಸಾರಲು ಇತ್ತೀಚೆಗೆ ಯಾವ ಅಪಾಯ ಎದುರಿಸಿದ್ದೀರಿ ? ಎಷ್ಟು ಬಹಿರಂಗ ನಿಮ್ಮ ನಂಬಿಕೆ ಹಂಚಿಕೊಳ್ಳುತ್ತೀರಿ ? ಯಾವಾಗ ಕೊನೆಯ ಬಾರಿ ದೇವರ ಬಗ್ಗೆ ಯಾರೊಬ್ಬರೊಡನೆ ಮಾತಾಡಿದ್ದೀರಿ ?

ವಚನ 27ರಲ್ಲಿ ರಾಜನು ಸುರುಳಿಯನ್ನು ಸುಟ್ಟುಹಾಕಿದನೆಂದೂ, ವಚನ 32ರಲ್ಲಿ ಯೆರೆಮೀಯ ಪುನಃ ಬಾರೂಕನಿಗೆ ರಾಜನ ವಿರುದ್ಧ ಪ್ರವಾದನೆಗಳನ್ನು ಬರೆಯಲು ಹೇಳಿದನು. ಅದನ್ನೂ ಬಾರೂಕನು ಮಾಡಿದನು. ನಂಬಿಕೆಯ ಸ್ನೇಹಿತನಾಗಿ ಮತ್ತು ನಿಷ್ಠಾವಂತ ಜೊತೆಗಾರನಾಗಿ ಬಾರೂಕ ಒಂದು ಉತ್ತಮ ಉದಾಹರಣೆಯಾಗಿದ್ದಾನೆ. ದೇವರ ವಾಕ್ಯ ನಿಷ್ಠೆಯಿಂದ ಪದೇಪದೇ ಸಾರಲು ಯಾವ ಭಯವೂ ಯಾವ ಶೋಷಣೆಯೂ ಆತನನ್ನು ಅಡ್ಡಿಪಡಿಸಲಿಲ್ಲ.

ಬಾರೂಕನ ಹಾಗೆ ನಿಮಗೂ ಯೆರೆಮೀಯನ ತರಹ ನಿಮ್ಮ ಜೀವನದಲ್ಲಿ ಯಾರಾದರೂ ಸ್ನೇಹಿತರು ಮತ್ತು ಬೆಂಬಲ ನೀಡುವವರು ಇದ್ದಾರೆಯೇ ?
ದೇವರ ವಾಕ್ಯ ಸಾರುವುದು ನಿಮಗೆ ಎಷ್ಟು ಮುಖ್ಯವಾಗಿದೆ ?
ಜನರ ಪ್ರತಿಕ್ರಿಯೆ ಸಕಾರತ್ಮಕವಲ್ಲದಿದ್ದರೂ ನಿಮ್ಮ ನಂಬಿಕೆ ಹಂಚಿಕೊಳ್ಳಲು ಸಿದ್ಧರಿರುವಿರಾ ?

ಸವಾಲು : ಈ ವಾರ ನಿಮ್ಮ ನಂಬಿಕೆ ಯಾರಾದರೂ ಒಬ್ಬರೊಡನೆ ಹಂಚಿಕೊಳ್ಳಿ. ನಿರ್ಧಿಷ್ಟವಚನಗಳನ್ನು ಬರೆದು ಅವುಗಳನ್ನು ಹಂಚಿಕೊಳ್ಳಿ. ಅವರು ಸರಿಯಾಗಿ ಪ್ರತಿಕ್ರಿಯಸದಿದ್ದರೂ, ಬಿಟ್ಟುಕೊಡದೆ ಪುನಃ ಪುನಃ ಹಂಚಿಕೊಳ್ಳಿ. ಯಾರಾದರೂ ಒಬ್ಬರು ದೇವರ ವಾಕ್ಯ ಸಾರಲು ತುಂಬಾ ಚಟುವಟಿಕೆಯಿಂದಿರುವ ಶಿಷ್ಯರನ್ನು ನೋಡಿ, ಪ್ರಾರ್ಥಿಸಿ, ಅವರಲ್ಲಿ ನೀವು ಹೇಗೆ ಅವರಿಗೆ ಸಹಾಯ ಮಾಡಬಹುದು ಎಂದು ಕೇಳಿಕೊಳ್ಳಿ.

## 15. ಎಬೆದ್ಮೆಲೆಕ – ದೇವರ ವಿಮೋಚನೆಯ ಅಸ್ತ್ರ

ಯೆರೆಮೀಯ 38:1–3
ಯೆರೆಸಲೇಮಿನ ವಿನಾಶವನ್ನು ಪ್ರವಾದಿಸಿದ ಏಕೈಕ ಪ್ರವಾದಿ ಯೆರೆಮೀಯನಾಗಿದ್ದನು. ಬೇರೆ ಪ್ರವಾದಿಗಳು ಸಮಾಧಾನ ಮತ್ತು ಸುರಕ್ಷೆಯ ಬಗ್ಗೆ ಹೇಳುತ್ತಿರುವಾಗ, ಯೆರೆಮೀಯನು ಮಾತು ವ್ಯತಿರಿಕ್ತವಾಗಿತ್ತು. ಆದರಿಂದ ಅವನ ಭೋದನೆ ಜನರಿಗೆ ಹಿಡಿಸಲಿಲ್ಲ. ಆದ್ದರಿಂದ ಯೆರೆಮೀಯನನ್ನು ಸೆರೆಮನೆಯಲ್ಲಿ ಹಾಕಿ, ನಂತರ ಕೆಸರು ತುಂಬಿದ ಕುಣಿಯಲ್ಲಿ ಇಳಿಸಲಾಯಿತು. (ವಚನ 38:6) ಅವನು ಸಾಯಬೇಕೆಂದು (ವಚನ 38:4,6,9) ದುರ್ಬಲನಾದ ಅರಸ ಚಿದ್ಕೀಯನು ಹಾಗೆ ಮಾಡಿದನು (ವಚನ 38:5), ಅತ್ತು, ಕರೆದು, ಕರುಣೆಗಾಗಿ ಯಾಚಿಸುವುದನ್ನು ಬಿಟ್ಟರೆ ಬೇರೇನೂ ಯೆರೆಮೀಯನು ಮಾಡಲು ಸಾಧ್ಯವಿರಲಿಲ್ಲ. ದೇವರು ರಕ್ಷಿಸಿದ ಹೊರತು, ಅವನು ಆ ಜವುಗು ನೆಲದಲ್ಲಿ ಮುಳುಗಿ ಸಾಯಬೇಕಾಗಿತ್ತು (ಕೀರ್ತನೆ 102:19–20)

ದೇವರು ತನ್ನ ಜನರನ್ನು ರಕ್ಷಿಸಲು ಅವರದೇ ಆದ ವಿಷಿಷ್ಟ, ಸಂಪನ್ಮೂಲಗಳನ್ನು ಹೊಂದಿದ್ದಾರೆ. ಆತನ ಚಿತ್ತವನ್ನು ನಿರವೇರಿಸಲು ಪ್ರತಿ ಮೂಲೆಮೂಲೆಯಲ್ಲಿಯೂ ಅವರೇ ಆಯ್ಕೆ ಮಾಡಿದ ಜನರಿದ್ದಾರೆ.

ಎಬೆದ್ಮೆಲೆಕ (ಪದದ ಅರ್ಥ – ರಾಜನ ಸೇವಕ) ಇವನೊಬ್ಬ ಇಥಿಯೋಪಿಯಾ ದೇಶದವನೂ, ರಾಜನ ಅರಮನೆಯಲ್ಲಿ ಸೇವಕನಾದ ಖಂಚುಕಿಯಾಗಿದ್ದನು. ಯೆರೆಮೀಯನು ಕಾರಗೃಹದಲ್ಲಿದ್ದಾನೆ ಎಂದು ಕೇಳಿದೊಡನೆ, ಅವನು ರಾಜನ ಮನೆಗೆ ಹೋಗಿ, ಯೆರೆಮೀಯನ ರಕ್ಷಿಸುವ ಬಗ್ಗೆ ಮಾತಾಡಿದನು, ಅವನು ಅರಸನ ಅಪ್ಪಣೆ ಪಡೆದು, 30 ಮಂದಿ ಜನರ ಸಹಾಯ ಪಡೆದು ಕೆಲವು ಹಳೆಯ ಹಗ್ಗಗಳಿಂದ, ಚಿಂದಿ ಬಟ್ಟೆಗಳಿಂದ ಯೆರೆಮೀಯನನ್ನು ಕುಣಿಯಿಂದ ಮೇಲಕ್ಕೆತ್ತಿದನು.

1. ಯೆರೆಮೀಯ ಮತ್ತು ಎಬೆದ್ಮೆಲೆಕ್ ಅಂಥ ಜನರನ್ನು ಧೈರ್ಯವಾಗಿ ಮಾತನಾಡಲು ಯಾವ ವಿಷಯ ಪ್ರೇರೆಪಿಸುತ್ತದೆ.

2. ಯೆರೆಮೀಯನ ಕೆಸರಿನ ಕುಣಿಯಲ್ಲಿದ್ದಾಗ ಅವನ ಶಾರೀರಿಕ ಹಾಗೂ ಆತ್ಮಿಕ ಸ್ಥಿತಿ ಹೇಗಿದ್ದಿರಬಹುದು ? ನೀವು ಆತ್ಮಿಕ ಕುಣಿಯಲ್ಲಿ ಯಾವತ್ತಾದರೂ ಬಿದ್ದಿರುವ ಸಾಧ್ಯತೆ ಇದೆಯೇ ? ಆಗ ನಿಮ್ಮ ಮನಸ್ಸಿನಲ್ಲಿ ಯಾವ ತೆರನಾದ ಭಾವನೆಗಳು ಬಂದಿದ್ದುವು ? (ಕೀರ್ತನೆ 37:7)

3. ಅಪಾಯದ ಸಮಯದಲ್ಲೂ ಸಹ ನೀವು ಸತ್ಯಕ್ಕಾಗಿ ಮತ್ತು ಒಳ್ಳೆಯದಕ್ಕಾಗಿ ಸ್ಥಿರವಾಗಿ ನಿಂತಿರುವಿರಾ ?

4. ಎಬೆದ್ಮೆಲೆಕ್ ತುಂಬಾ ನೆಪಗಳನ್ನು ಕೊಡಬಹುದಾಗಿತ್ತು. ಆದರೆ ಅವನು ಹಾಗೆ ಮಾಡಲಿಲ್ಲ, ಏಕೆ ?

5. ದೇವರನ್ನು ಸೇವಿಸಲು ನಾವು ಬಹಳ ಸಾರಿ ನೆವಗಳನ್ನು ಕೊಡುತ್ತೇವೆ ಅವು ಯಾವುದು ?

6. ಯೆರೇಮಿಯನಿಗೆ ಸಹಾಯಮಾಡಲು ಯಾವ ವಿಷಯ ಎಬೆದ್ಮೆಲೆಕನ್ನು ಉತ್ಸಾಹಪಡಿಸಿತು? ಅವನ ಗಣಗಳನ್ನು ನಿಮ್ಮ ದಿನಚರಿಪುಸ್ತಕದಲ್ಲಿ ಬರೆದಿಡಿ.

7. ಯಾರಿಗಾದರೂ ಸಹಾಯಮಾಡಲು ಇತ್ತೀಚೆಗೆ ಪ್ರಯಾಸಪಟ್ಟಿದ್ದೀರಾ ? ಹಾಗೆ ಮಾಡಲು ನಿಮ್ಮನ್ನು ಏನು ಪ್ರೇರೆಪಿಸಿತು ?

8. ನೀವು ಯೆರೆಮೀಯ ಕಷ್ಟಪಟ್ಟದ್ದನು ನೋಡಿದಿರಿ ? ಅದರ ಪ್ರಯೋಜನ ಏನು ? ದೇವರಿಗೆ ಅದರಿಂದ ಒಂದು ಸಂಗತಿಯನ್ನು ನಡೆಸಲು ಇಷ್ಟವೇ ? ನೀವು ಇತ್ತೀಚೆಗೆ ಅಂಥ ಒಂದು ಸನ್ನಿವೇಶವನ್ನು ಎದುರಿಸಿದ್ದೀರಾ ? ಆದರಿಂದ ನೀವು ಕಲಿತ ಪಾಠವೇನು ?

ಅಬೆದ್ಮೆಲೆಕ್ ಅಂಥ ಜನರನ್ನು ಉಪಯೋಗಿಸಲು ದೇವರು ಇಚ್ಛಿಸುತ್ತಾರೆ. ಅವರು ಈ ಸಮಾಜದಲ್ಲಿ ನಿಷ್ಪ್ರಯೋಜಕರು, ಎಲ್ಲರಿಂದ ತ್ಯಜಿಸಲ್ಪಟ್ಟವರು ಆಗಿರುತ್ತಾರೆ. ಆದರೆ ದೇವರಿಗೆ ಅಂಥವರು ಅಮೂಲ್ಯ ನಿಧಿಯಾಗಿದ್ದಾರೆ. ದೇವರು ಆತನನ್ನು ಒಬ್ಬ ಪ್ರವಾದಿಯನ್ನು ರಕ್ಷಿಸಲು, ದೇವರ ವಾಕ್ಯ ನೆರವೇರುವುದನ್ನು ನೋಡಲು ಉಪಯೋಗಿಸಿದರು.

ನಿಮ್ಮ ಬಗ್ಗೆ ನಿಮಗೆ ಇಂದು ಏನನಿಸುತ್ತದೆ ? ನೀವು ನಿಷ್ಪ್ರಯೋಜಕರು, ತ್ಯಜಿಸಲ್ಪಟ್ಟವರು, ತುಂಬಾ ಚಿಕ್ಕವರು, ಎಂದೆಲ್ಲಾ ಎನಿಸುತ್ತಿದೆಯೇ ? ದೇವರು ನಿಮ್ಮನ್ನು ಬಲವಾಗಿ ಉಪಯೋಗಿಸಬಹುದು ಎಂದು ನಂಬುತ್ತೀರೋ ?

ನಿಮ್ಮ ಸುತ್ತ ಇರುವ ಜನರು ಏನೂ ಮಾಡದಿದ್ದರೂ, ದೇವರನ್ನು ಸೇವಿಸಲು ನಿಮಗೆ ಉತ್ಸಾಹವಿರುವುದೇ ? ಇದೆಯಾದರೆ ನಿಮ್ಮನ್ನು ಉತ್ಸಾಹಗೊಳಿಸುವ ವಿಷಯವಾವುದು ?

ಯೆರೆಮೀಯ 39:15–18 ದೇವರು ಎಬೆದ್ಮೆಲೆಕನ್ನು ಆಶೀರ್ವದಿಸಿದರು. ದೇವರು ಖಂಡಿತ ನಮ್ಮನ್ನು ಮರೆಯುವುದಿಲ್ಲ (ಎಶಾಯ 49:15)

ಅವನ ನಿಷ್ಠಾವಂತ ಸೇವೆಗೆ, ಯೆರೆಮೀಯನ ಮೂಲಕ ದೇವರು ಎಬೆದ್ಮೆಕನಿಗೆ ಕೊಟ್ಟ 5 ವಾಗ್ದಾನಗಳು ಯಾವುವು ?

ಸವಾಲು :
ಇಂದು ಅನೇಕ ಜನರು, ಶಿಷ್ಯರನ್ನು ಸೇರಿಸಿ ಆತ್ಮೀಕ ಕುಣಿಯಲ್ಲಿದ್ದಾರೆ ? ಅವರು ಹತಾಶೆಗೊಂಡಿದ್ದಾರೆ : ಏಕಾಂಗಿಯಾಗಿ, ನಿರಾಶೆಗೊಂಡು ಯಾರಾದರೂ ರಕ್ಷಿಸುವರೋ ಎಂಬ ನಿರೀಕ್ಷೆಯಲ್ಲಿದ್ದಾರೆ. ಈ ವಾರ ಅಂಥಾ ಆತ್ಮಿಕ ಕುಣಿಯಲ್ಲಿ ಬಿದ್ದವರನ್ನು ಸಹಾಯ ಮಾಡಿ ರಕ್ಷಿಸಲು ಸಾಧ್ಯಮಾಡೆಂದು ದೇವರನ್ನು ಪ್ರಾರ್ಥಿಸಿರಿ.

## ಅನ್ನಳು

ದಿನ 16 ಜನವರಿ 16

ಲೂಕ 2:36–38

1. ಅನ್ನಳು 84 ವರ್ಷವಾಗಿದ್ದರೂ ದೇವಾಲಯಕ್ಕೆ ಹೋಗುವುದನ್ನು ಬಿಟ್ಟಿರಲಿಲ್ಲ. ಅವಳು ದೇವರನ್ನು ಆರಾಧಿಸುತ್ತಿದ್ದಳು. ರಾತ್ರಿ ಹಗಲು ಉಪವಾಸ, ಪ್ರಾರ್ಥನೆ ಮಾಡುತ್ತಾ ಕಾಲಕಳೆಯುತ್ತಿದ್ದಳು. ಅಂದರೆ ಅನ್ನಳು ಯಾವಾಗಲೂ ದೇವಾಲಯದಲ್ಲಿದ್ದು ದೇವರಿಗೆ ಮತ್ತು ದೇವರ ಆರಾಧನೆಗೆ ಪ್ರಾಮುಖ್ಯತೆ ಕೊಡುತ್ತಿದ್ದಳು.

ನೀವು ದೇವರಿಗೆ ಮತ್ತು ದೇವರ ಸಭೆಗೆ ಎಷ್ಟು ಸಮಯವನ್ನು ಕೊಡುತ್ತಿದ್ದೀರಾ ?

ನಾನು ಸಾಕಷ್ಟು ಸೇವೆಮಾಡಿದ್ದೇನೆ ಎಂದು ಅನ್ನಿಸುವ ಘಟ್ಟದಲ್ಲಿದ್ದೀರಾ ? ಈಗ ನಾನು ಹಿಂದೆಗೆದು ವಿಶ್ರಾಂತಿ ಪಡೆಯಬೇಕು, ಮುಂದಿನ ಪೀಳಿಗೆ ದೇವರ ಕಾರ್ಯವನ್ನು ಮುಂದುವರಿಸಲಿ ಎಂದು ನಿಮಗೆ ಅನ್ನಿಸುತ್ತದೆಯಾ ?

2. ಅನ್ನಳು ಕ್ರಿಸ್ತನನ್ನು ಕಂಡು ಗುರುತು ಹಿಡಿದಳು ಬೇರೆ ಬೋಧಕರು ತಮ್ಮ ಕೆಲಸದಲ್ಲಿ ತೊಡಿಗಿದ್ದರು. ಅವರು ಕಟ್ಟಳೆ ಮತ್ತು ಸಂಪ್ರದಾಯಗಳನ್ನು ಮಾಡುವುದರಲ್ಲಿ ಬಿಡುವಿಲ್ಲದವರಾಗಿದ್ದರು.

ನೀವು ಕ್ರಿಸ್ತನನ್ನು ಕಂಡುಕೊಳ್ಳದೆ ಹೋಗುವಷ್ಟು ಬಿಡುವಿಲ್ಲದವರಾಗಿದ್ದೀರಾ ? ಅಥವಾ ಆತನ ಕರೆಯನ್ನು ಕೇಳದಷ್ಟು ಸಮಯವಿಲ್ಲದವರಾಗಿದ್ದೀರಾ ? ದೇವರು ನಿಮ್ಮ ಜೊತೆ ಮಾತನಾಡುವುದು ನಿಮಗೆ ಕೇಳಿಸುತ್ತಿದೆಯಾ ?

3. ಅನ್ನಳು ಎಲ್ಲರ ಬಳಿ ಯೇಸುವಿನ ಬಗ್ಗೆ ಮಾತನಾಡಿದಳು. ನೀವು ಯೇಸುವಿನ ಬಗ್ಗೆ ಯಾರ ಬಳಿ ಮಾತನಾಡುತ್ತಿದ್ದೀರಾ ?

ಚಟುವಟಿಕೆ :-

1. ಈ ದಿನ ನೀವು ಭೇಟಿಮಾಡುವ ಪ್ರತಿಯೊಬ್ಬರ ಬಳಿ ಯೇಸುವಿನ ಬಗ್ಗೆ ಮಾತನಾಡಿರಿ.

2. ನಿಮ್ಮ ಎಲ್ಲಾ ಚಿಂತೆ ಹಾಗೂ ನೋವುಗಳನ್ನು ದೇವರಿಗೆ ಪ್ರಾರ್ಥನೆ ಮತ್ತು ಉಪವಾಸಮಾಡಿ ಒಪ್ಪಿಸಿ. ಆದರಿಂದ ನೀವು ಯೇಸುವನ್ನು ಕಂಡುಕೊಳ್ಳದೆ ಹೋಗುವುದಿಲ್ಲ.

## 17 ಯೇಸುವನ್ನು ಅಭಿಷೇಕಿಸಿದ ಮಹಿಳೆ

ಲೂಕ 7:36-50

ಯೇಸು ಯಾವಾಗಲೂ ಮನೆಗಳಲ್ಲೇ ಜನರನ್ನು ಮನಸ್ಸಾಂತರ ಮಾಡಿದರು. ಕುಟುಂಬಸ್ಥರನ್ನು ಬದಲಾಯಿಸಲು ಮನಗಳೇ ಒಳ್ಳೆ ಸ್ಥಳ. ಯೇಸು ಇದ್ದ ಕಾಲದಲ್ಲಿ ಅತಿಥಿ ಸತ್ಕಾರ ಉನ್ನತವಾಗಿತ್ತು. ಆದರೆ ಅದು ಸಮಾನವಾದ ವರ್ಗಗಳಲ್ಲಿ ಮಾತ್ರವೇ ಬಹುವಾಗಿ ಇತ್ತು. ಆದರೆ ಯೇಸು ಶ್ರೀಮಂತ, ಬಡವ ಹಾಗೂ ಪಾಪಿ, ನೀತಿವಂತ ಎಂದು ಭೇದಭಾವ ಮಾಡಲಿಲ್ಲ.

ಈ ವಚನಗಳಲ್ಲಿ ತಿಳಿಸಿರುವ ಫರಿಸಾಯನು ಧಾರ್ಮಿಕ ಹಾಗೂ ಬಹುಶಃ ದೇವಾಲಯದಲ್ಲಿ ನಾಯಕನಾಗಿರಬೇಕು. ಇಲ್ಲಿ ಸೂಚಿಸಿರುವ ಮಹಿಳೆ ತನ್ನ ಜೀವನವನ್ನು ಪಾಪದಲ್ಲಿ ಕಳೆದಿದ್ದಾಳೆ. ಈ ಫರಿಸಾಯನು ತನ್ನ ನೀತಿವಂತ ಜೀವನವನ್ನು ದೃಢವಾಗಿ ಹಿಡಿದಿದ್ದ. ಈಕೆ ಒಂದು ಒಡೆದು ಹೋದ ಪಾತ್ರೆಯಂತಿದ್ದಳು. ಇವರಿಬ್ಬರೂ ಯೇಸುವನ್ನು ಬೇರೆ ಬೇರೆ ರೀತಿಯಲ್ಲಿ ಸಂಧಿಸಿದ್ದಾರೆ. ನಾವು ಯೇಸುವನ್ನು ಯಾವ ರೀತಿಯಲ್ಲಿ ಸಂಧಿಸುತ್ತೇವೆ ? ನಾವು ಫರಿಸಾಯನಂತೆ ಎಂದೆಣಿಸಿದ್ದಾರೆ, ನಮ್ಮ ನೀತಿವಂತ ಜೀವನವನ್ನು ಧೃಢವಾಗಿ ಹಿಡಿಯಲು ಆಶಿಸೋಣ. ಈ ಮಹಿಳೆಯ ಹಾಗೆ ಎಂದು ಎಣಿಸಿದರೆ, ಅದು ಸರಿಯೇ ಎಂದು ನಮ್ಮನ್ನು ನಾವೇ ಪರೀಕ್ಷಿಸಿ ನೋಡೋಣ ಏಕೆಂದರೆ, ಈ ಫರಿಸಾಯನು ದೇವರಿಂದ ಸ್ವೀಕರಿಸಲ್ಪಡದೆ ಹೋಗುವೆನೆಂದು ತಿಳಿದಿರಲಿಲ್ಲ.

ಈ ಹೆಂಗಸಿಗೆ ಯಾವುದೇ ರೀತಿಯ ಪ್ರತಿಫಲ ನಿರೀಕ್ಷಿಸದೆ ಸೇವಿಸಬೇಕು ಎಂದೆನಿಸಿತು. ಅವಳು ಅವಳ ಕಣ್ಣೀರಿನಿಂದ ಯೇಸುವಿನ ಪಾದ ತೊಳೆದು ತಲೆ ಕೂದಲಿನಿಂದ ಒರಸಿದಳು. (ಊಹಿಸಿಕೊಳ್ಳಿ, ಯೇಸು ಇಡೀ ದಿನ ನಡೆದದ್ದರಿಂದ ಅವರ ಕಾಲು ಕೊಳೆಯಾಗಿತ್ತು ಮತ್ತು ಸೀಮೋನನು ಕಾಲು ತೊಳೆಯಲು ನೀರು ಕೊಟ್ಟಿರಲಿಲ್ಲ) ಅಷ್ಟೇ ಅಲ್ಲದೆ ಆಕೆ ಯೇಸುವಿನ ಕಾಲುಗಳಿಗೆ ಮುದ್ದಿಟ್ಟು ಸುಗಂಧ ತೈಲವನ್ನು ಸುರಿದು ಅಧಿಕವಾಗಿ ಸೇವಿಸಿದಳು. ಯೇಸುವಿಗೆ ನಿಮ್ಮ ಪ್ರೀತಿಯನ್ನು ತೋರಿಸಲು ಅವರಿಗೆ ಕೃತಜ್ಞತೆ ಸಲ್ಲಿಸಲು ವಿಶೇಷವಾಗಿ ಇತ್ತೀಚೆಗೆ ಯಾವ ಸೇವೆ ಮಾಡಿದಿರಿ ?

ಫರಿಸಾಯನು ಮಾಡಿದ ಉತ್ತಮ ಕಾರ್ಯವು ಬೇರೆಯವರನ್ನು ತೀರ್ಪು ಮಾಡುವುದಾಗಿತ್ತು. ನಾವೂ ಸಹ ನಾಯಕರಾಗಿ, ಶಿಷ್ಯರಾಗಿ ಅಂತಿಮವಾಗಿ ತೀರ್ಪುಮಾಡುವವರಾಗುತ್ತೇವೆ. ಆದರಲ್ಲಿ ಏನು ತಪ್ಪು ಎಂದರೆ ನಮ್ಮನ್ನು ನಾವೇ ತೀರ್ಪು ಮಾಡುವುದಿಲ್ಲ. ಅದೇ ಫರಿಸಾಯನಾದ ಸೀಮೋನನಿಗೂ ಆಯಿತು. ಅವನು ಯೇಸುವಿನ ಕಾಲಿಗೆ ನೀರು ಕೊಟ್ಟು ಮುದ್ದಿಡಲು ಮರೆತುಹೋದ. ಅವನು ಆ ಮಹಿಳೆಯನ್ನು ಕೀಳಾಗಿ ನೋಡಿದ್ದಲ್ಲ. ಆ ಮಹಿಳೆ ಎಂಥಹವಳೆಂದು ತಿಳಿದುಕೊಳ್ಳುವ ಸಾಮರ್ಥ್ಯ ಯೇಸುವಿಗೆ ಇಲ್ಲವೇ ? ಎಂದು ಪ್ರಶ್ನಿಸಿಕೊಂಡು ಸಂದೇಹಪಟ್ಟನು.

ಯೇಸು ಸೀಮೋನನಿಗೆ ಕಥೆ ಯಾಕೆ ಹೇಳಬೇಕಾಯಿತು ? ಯಾಕೆಂದರೆ ಸೀಮೋನ ಮತ್ತು ದಾವೀದ ಇಬ್ಬರೂ ಬಹಳ ಚೆನ್ನಾಗಿ ತೀರ್ಪು ಮಾಡುವವರಾಗಿದ್ದರು. ಆದರೆ ಅವರಿಗೆ ತಮ್ಮನ್ನು ತಾವೆ ತೀರ್ಪು ಮಾಡಿಕೊಳ್ಳಲು ಆಗಲಿಲ್ಲ. ಆದರೂ ಅವರು ಬೇರೆಯವರಿಗೆ ಮಾಡಿದ ತೀರ್ಪನ್ನಿಟ್ಟು ಅವರನ್ನೇತಿದ್ದಲು ಸಹಾಯವಾಗಿದೆ. ನಮ್ಮನ್ನು ತಿದ್ದಲು ಸಹಾಯವಾಗಿದೆ. ನಮ್ಮನ್ನು ತಿದ್ದಲು ಯೇಸು ಯಾವ ಕಥೆಯನ್ನು ಹೇಳಬಹುದು ?

ಕಥೆ ಯಾವುದರ ಬಗ್ಗೆ ಇತ್ತು ? ಯಾರು ಹೆಚ್ಚಾಗಿ ಪ್ರೀತಿಮಾಡುತ್ತಾರೆ ? ಸಾಲ ಜಾಸ್ತಿ ಇದ್ದವನಾ ? ಅಥವ ಕಡಿಮೆ ಸಾಲ ಇದ್ದವನಾ ? ನಮ್ಮ ಎಷ್ಟು ಪಾಪಗಳು ಕ್ಷಮಿಸಲ್ಪಟ್ಟವೆ ? ನಾವು ಪಾಪ ಕ್ಷಮಾಪಣೆ ಸಿಕ್ಕಿರುವುದು ಶ್ರೇಷ್ಠವೆಂದೆಣಿಸಿ ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿದ್ದೇವಾ ? ಅಥವಾ ಬೇರೆಯವರನ್ನು ಶೀಘ್ರವಾಗಿ ತೀರ್ಪುಮಾಡುತ್ತೇವಾ ?

ಈ ಹೆಂಗಸೂ ಸಹ ಫರಿಸಾಯನನ್ನು ಆತಿಥಿ ಸತ್ಕಾರ ಸರಿಯಾಗಿ ಮಾಡಲಿಲ್ಲವೆಂದು ತೀರ್ಪು ಮಾಡಬಹುದಾಗಿತ್ತು ಆದರೆ ಅವಳು ತನ್ನನ್ನು ಪರೀಕ್ಷಿಸಿಕೊಳ್ಳುವುದರಲ್ಲಿಯೂ ಯೇಸುವಿಗೆ ತನ್ನ ಪ್ರೀತಿಯನ್ನು ತೋರಿಸುವುದರಲ್ಲಿಯೂ ಗಮನ ಹರಿಸಿದಳು.

ಯೇಸುವಿನಲ್ಲಿ ಸುರಕ್ಷಿತವಾಗಿರಲು ನಂಬಿಕೆಯೇ ಆಧಾರ. ಆ ಹೆಂಗಸಿಗೆ ನಂಬಿಕೆ ಇತ್ತು ಅದಕ್ಕಾಗಿಯೇ ಅವಳು ಯೇಸುವಿನಲ್ಲಿ ಸುರಕ್ಷತೆ ಕಂಡಳು. ಆದರೆ ಆ ಫರಿಸಾಯನಿಗೆ ಅವನ ಸ್ಥಾನದಲ್ಲಿ ನಂಬಿಕೆಯಿತ್ತು. ಆದ್ದರಿಂದ ಅವನ ಸುರಕ್ಷೆಯೂ ಅವನ ಸ್ಥಾನದಲ್ಲಿತ್ತು.

ಕೊನೆಗೆ ಆ ಮಹಿಳೆಯ ನಂಬಿಕೆ ಅವಳನ್ನು ರಕ್ಷಿಸಿತು. ಅವಳು ನಮಗೆ, ಯಾವ ರೀತಿ ದೀನ ಭಾವದಿಂದ ಕ್ಷಮೆ ಕೇಳಬೇಕೆಂದು ಕಲಿಸಿಕೊಟ್ಟಿದ್ದಾಳೆ. ಅವಳಿಗೆ ಯೇಸು ತನ್ನ ಸಮಾಧಾನವನ್ನು ನೀಡಿದರು ಅವಳನ್ನು ಕ್ಷಮಿಸಲು ಯೇಸು ಯಾವುದೇ ರೀತಿಯ ನಿಬಂಧನೆ ಹಾಕಲಿಲ್ಲ. ಆಕೆ ಗೊಂದಲದಿಂದ ಬಂದು ಸಮಾಧಾನದಿಂದ ಹೋದಳು.

ಈ ಮಹಿಳೆಯ ಕಥೆ ಸುವಾರ್ತೆಯಲ್ಲಿ ಕಂಡು ಬಂದಿದೆ. ನಿಜವಾಗಿಯೂ ಈಕೆ ಹೊಗಳಿಸಿಕೊಳ್ಳದ ಶ್ರೇಷ್ಠ ವ್ಯಕ್ತಿಯಾಗಿದ್ದಾಳೆ.

# 18. ಹುಟ್ಟ ಕುರುಡನಾದ ವ್ಯಕ್ತಿ

ಯೋಹಾನ 9:1–3
ದಾರಿಯಲ್ಲಿ ಹಾದು ಹೋಗುವಾಗ ಹುಟ್ಟು ಕುರುಡನಾದ ಒಬ್ಬ ವ್ಯಕ್ತಿಯನ್ನು ಯೇಸು ನೋಡಿದರು. ಆತನ ಶಿಷ್ಯರು ಗುರುವೇ ಇವನು ಕುರುಡನಾಗಿ ಹುಟ್ಟಿದ್ದು ಈತನ ಪಾಪದ ಕಾರಣದಿಂದಲೋ ಅಥವಾ ಈತನ ತಂದೆತಾಯಿಯ ಪಾಪದ ಕಾರಣದಿಂದಲೋ ಎಂದು ಕೇಳಿದರು. ಅದಕ್ಕೆ ಯೇಸು ಈ ಮನುಷ್ಯನ ಪಾಪದ ಕಾರಣದಿಂದಾಗಲಿ ಅಥವಾ ಅವನ ತಂದೆ ತಾಯಿಯ ಪಾಪದ ಕಾರಣದಿಂದಾಗಲಿ ಅಲ್ಲ. ಆದರೆ ದೇವರ ಮಹಾ ಕಾರ್ಯವು ಆತನಲ್ಲಿ ತೋರಿಬರಬೇಕೆಂಬುದೇ ಕಾರಣ ಎಂದು ಉತ್ತರ ಕೊಟ್ಟನು.

ಈ ರೀತಿಯ ಮಾತುಕತೆ ನಿಮ್ಮ ಜೀವನದಲ್ಲಿ ಬಂದಿದೆಯೇ ? ಅದರ ಬಗ್ಗೆ ನಿಮ್ಮ ಅನಿಸಿಕೆ ಹೇಗಿದೆ ? ಶಿಷ್ಯರು ಪಾಪದ ಮೇಲೆ ಹಾಗೂ ಕಷ್ಟಗಳಿಂದಾಗುವ ನೋವಿನ ಮೇಲೆ ತಮ್ಮ ಮನಸ್ಸನ್ನಿಟ್ಟರೇ ವಿನಃ ಅವುಗಳ ಮೂಲಕ ದೇವರು ಮಾಡುವ ಕಾರ್ಯಗಳನ್ನು ನೋಡಿ ದೇವರನ್ನು ಅರಿತುಕೊಳ್ಳಲಿಲ್ಲ. ನಾವೂ ಕೂಡ ಅದೇ ರೀತಿಯಾಗಿರುವ ಸಾಧ್ಯತೆ ಇದೆ.

ಈಗಲೂ ದೇವರು ನಿಮ್ಮ ಸನ್ನಿವೇಶ, ಸಂಧರ್ಭಗಳನ್ನು ಉಪಯೋಗಿಸಿ ಮಾಡುವ ಕಾರ್ಯಗಳನ್ನು ನೀವು ಗುರುತಿಸಲಾರದೆ ಇದ್ದೀರಾ ? ಅಂಥಹ ಸಂಧರ್ಭಗಳಲ್ಲಿ ಎಂಥಹ ಯೋಚನೆಗಳು ಬಂದು ನಿಮ್ಮನ್ನು ಕಂಗೆಡಿಸಿವೆ ?

ಈ ರೀತಿಯ ಸಂಧರ್ಭಗಳನ್ನು ನನ್ನ ಜೀವನದಲ್ಲಿ ಯಾಕೆ ದೇವರು ನಡೆಯಲು ಬಿಟ್ಟರು? ? ಈ ಪ್ರಪಂಚದಲ್ಲಿ ಕೆಟ್ಟ ವಿಷಯಗಳು ಇರುವುದು ಏಕೆ ? ಅಪಾರವಾಗಿ ಪ್ರೀತಿಸುವ ದೇವರು ಇಷ್ಟೊಂದು ಮಕ್ಕಳನ್ನು ಹಸಿವಿನಿಂದ ಸಾಯಲು ಬಿಡಬಹುದೇ ? ಎಂಬ ಪ್ರಶ್ನೆಗಳಂತೆ ನಿಮಗೂ ಅನೇಕ ಭಾವನೆಗಳು ಮನಸ್ಸಿನಲ್ಲಿ ಬರುತ್ತದೆಯೇ ? ಧರ್ಮೋಪದೇಶಕಾಂಡ 29:29

ಈ ರಹಸ್ಯವು ನಮ್ಮ ಅಂತರಾಳದಲ್ಲಿ ತುಂಬಿ ನಾವು ನಮ್ಮ ಜೀವನದಲ್ಲಿ ನಡೆದ ಘಟನೆಗೆ ದೇವರೇ ಕಾರಣ ಎಂದೆಣಿಸಿ ಅದರ ಅರ್ಧಭಾಗವನ್ನು ಮಾತ್ರವೇ ನೋಡಿ ಇನ್ನೊಂದು ಕಡೆಯಿಂದ ಪರಿಪೂರ್ಣವಾದ ಕಳಂಕವಿಲ್ಲದ ದೃಶ್ಯವನ್ನು ನೋಡಲು ಮರೆಯುತ್ತೇವೆ.

ಆದರೆ ಎಲ್ಲಾ ಸಂಧರ್ಭಗಳೂ ದೇವರನ್ನು ಪ್ರೀತಿಸುವವರಿಗೆ ಅನುಕೂಲವಾಗಿ ಅದರಿಂದ ಒಳ್ಳೆಯದೇ ಉಂಟಾಗುತ್ತದೆಂಬುದನ್ನು ನಾವು ತಿಳಿದವರಾಗಿದ್ದೇವೆ. ರೋಗದ ಬಗ್ಗೆ ಯೋಚಿಸುವುದಕ್ಕಿಂತ ನಾವು ಅದರ ಪರಿಹಾರವಾದ ಯೇಸುವನ್ನು ನಾವು ಗಮನಿಸಬೇಕು. ಯೇಸು ಅವರ ಶಿಷ್ಯರಿಗೆ ನೀವು ತಪ್ಪಾದದ್ದನ್ನು ಹುಡುಕುತ್ತೀರಿ ಎಂದು ಹೇಳಿದರು. ನಾವು ಬೇರೆಯವರ

ಮೇಲೆ ತಪ್ಪು ಹೊರಿಸುವಂಥದನ್ನು ನಿಲ್ಲಿಸಬೇಕು ಮತ್ತು ದೇವರನ್ನು ಹೊಗಳುವಂತಹದನ್ನೇ ನೋಡಬೇಕು. ಅವರು ದುಃಖದ ಸಮಸ್ಯೆಯಿಂದ ಕುರುಡಾಗಿ ದೇವರ ಮಹಿಮೆಯು ತೋರಿಬರುವುದನ್ನು ಕಾಣಲಿಲ್ಲ. ಅವರು ದೇವರ ಕಾರ್ಯ ನೆರವೇರುವುದನ್ನು ಸುಲಭವಾಗಿ ನೋಡಲಾರದ ಸಂದರ್ಭವಾಗಬಹುದಾಗಿತ್ತು.

ಒಂದು ನಿಮಿಷ ಆದರ ಬಗ್ಗೆ ಯೋಚಿಸಿ. ನೀವೂ ಸಹ ನಿಮ್ಮ ಜೀವನದಲ್ಲೂ ನಿಮ್ಮ ಸುತ್ತಲೂ ಇರುವ ದುಃಖದ ಬಗ್ಗೆ ಇರುವ ಸಮಸ್ಯೆಯನ್ನು ನೋಡುತ್ತಾ ದೇವರ ಮಹಿಮೆಯು ಕಂಡುಬರುವುದನ್ನು ನೋಡಲಾರದೆ ಇದ್ದೀರಾ ? ದೇವರು ಕಷ್ಟದ ಸಮಯದಲ್ಲಿ ಒಳ್ಳೆಯದನ್ನು ನಮಗೆ ಮಾಡುವರು ಎಂಬುದನ್ನು ನಾವು ಅರಿತಾಗಲೇ ಕ್ರೈಸ್ತರಾದ ನಮಗೆ ಅಂಥಹ ಸಮಯಗಳನ್ನು ಎದುರಿಸಲು ಸಾಧ್ಯ. ಯೋಸೇಫನು ಇದಕ್ಕೆ ಉತ್ತಮವಾದ ಉದಾಹರಣೆ. ಆತನ ಸಹೋದರರು ಅವನನ್ನು ಮಾರಿ ಬಿಟ್ಟರು. ನಂತರ ಜೀತದ ಆಳಾದನು, ಸೆರೆಮನೆಯಲ್ಲಿ ಹಾಕಲ್ಪಟ್ಟನು. ಕೊನೆಗೆ ರಾಜನ ಬಲಗೈ ಅಧಿಕಾರಿಯಾದನು (ಆದಿಕಾಂಡ 50:20) ಯೇಸು ತನ್ನ ಅಮಾನುಷವಾದ ಸಾವಿನಿಂದ ಎಲ್ಲರ ಪಾಪಗಳನ್ನು ಹೊತ್ತನು. ಅದನ್ನು ದೇವರ ಮಹಿಮೆಯನ್ನು ತೋರ್ಪಡಿಸುವ ಶ್ರೇಷ್ಠ ಕಾರ್ಯವಾಗಿ ಬದಲಾಯಿಸಿದರು.

ಚಟುವಟಿಕೆ : ನಿಮ್ಮ ಸುತ್ತಲಿರುವ ಕಷ್ಟಗಳನ್ನು ನೀವು ಯಾವ ದೃಷ್ಟಿಯಲ್ಲಿ ಕಾಣುತ್ತೀರಿ ?
ನಿಮ್ಮ ಕಷ್ಟಗಳಲ್ಲಿ ದೇವರು ತನ್ನ ಮಹಿಮೆಯನ್ನು ತೋರಿಸಬೇಕೆಂದು ಪ್ರಾರ್ಥಿಸಿರಿ.

## 19. ಯೇಸುವನ್ನು ವಿಸ್ಮಯಗೊಳಿಸಿದ ರೋಮಾಪುರದ ಶತಾಧಿಪತಿ

ಮತ್ತಾಯ 8:5-13, ಲೂಕ 7:1-10
ನಿಜವಾದ ನಂಬಿಕೆ ಯಾವಾಗಲೂ ಯೇಸುವನ್ನು ವಿಸ್ಮಯಗೊಳಿಸಿದೆ ನಿಜವಾದ ನಂಬಿಕೆಯು ಯೇಸುವಿನಲ್ಲಿರುವ ಅಧಿಕಾರವನ್ನು ಅರ್ಥಮಾಡಿಕೊಂಡಾಗ ಹುಟ್ಟುತ್ತದೆ.

ಇಲ್ಲಿ ಯೇಸುವನ್ನು ಸಂಧಿಸಿದ ಒಬ್ಬ ಶತಾಧಿಪತಿಯ ಕಥೆ ಇದೆ. ಆತನು ಸೇವಕನ ಖಾಯಿಲೆಯನ್ನು ಗುಣಪಡಿಸಬೇಕೆಂದು ಯೇಸುವಿನಲ್ಲಿ ಸಹಾಯ ಕೇಳಿದನು. ಯೇಸು ತಕ್ಷಣ ಸಹಾಯ ಮಾಡಲು ಹೊರಟರು. ಆದರೆ ಯೇಸುವಿಗೆ ಆಶ್ಚರ್ಯವಾಗುವಂತೆ ಜೊತೆಗೆ ಕರಕೊಂಡು ಹೋಗಲು ನಿರಾಕರಿಸಿ ಕೇವಲ ನೀವು ಆಜ್ಞೆ ಮಾಡಿದರೆ ಸಾಕು ನನ್ನ ಸೇವಕ ಗುಣ ಹೊಂದುವನು ಎಂದನು. ಯಾಕೆಂದರೆ, ಈ ಭೂಮಿಯಲ್ಲಿ ತನ್ನಂತಹ ಅಧಿಕಾರಿಗೇ ಇಷ್ಟೊಂದು ಅಧಿ ಕಾರವಿರಬೇಕಾದರೆ, ಸ್ವರ್ಗದಿಂದ ಬಂದಿರುವ ಯೇಸುವಿಗೆ ಎಷ್ಟೊಂದು ಅಧಿಕಾರವಿರಬಹುದು ಎಂಬ ಕಾರಣಕ್ಕಾಗಿಯೇ ಆ ರೀತಿ ಹೇಳಿದನು.

ಈ ಶತಾಧಿಪತಿಯ ನಂಬಿಕೆ ಯೇಸುವಿಗೆ ಆಶ್ಚರ್ಯವನ್ನು ಉಂಟುಮಾಡಿತು (ಲೂಕ 7) ಈ ಶತಾಧಿಪತಿಯ ಬಗ್ಗೆ ಮಾತನಾಡಿದ ಯೆಹೂದ್ಯರಲ್ಲಿ ಇಂತಹ ನಂಬಿಕೆ ಇರಲಿಲ್ಲ.

ಯೇಸು ಇಂತಹ ನಂಬಿಕೆಯನ್ನು ನಾನು ಇಸ್ರಾಯೇಲಿನಲ್ಲಿ ಕಾಣಲಿಲ್ಲವೆಂದು ಆಶ್ಚರ್ಯಚಕಿತನಾದನು. ಈ ಶತಾಧಿಪತಿ ಖಂಡಿತ ಯೇಸುವನ್ನು ವಿಸ್ಮಯಗೊಳಿಸಲು ಸಾಧ್ಯವಿರಲಿಲ್ಲ. ಆತ ಅನ್ಯಜನಾಂಗದವನಾಗಿದ್ದು. ಅನ್ಯಜನರಿಂದ ಬೆಳೆಸಲ್ಪಟ್ಟಿದ್ದ. ಈತ ರೋಮಾಪುರದವನಾಗಿದ್ದು ಪಾಲೇಸ್ತೇನಿನಲ್ಲಿ ಯೆಹೋದ್ಯರನ್ನು ರೋಮಾಪುರದ ಆಡಳಿತಕ್ಕೆ ಒಳಪಡಿಸುವವನಾಗಿದ್ದ. ಈತ ಯುದ್ಧ ವೀರನಾಗಿದ್ದ. ರೋಮಾಪುರದವರ ಕ್ರೂರ ಕೃತ್ಯೆಗಳ ಕಲೆಯಲ್ಲಿ ಬೇರೆಯವರಿಗಿಂತ ಪ್ರವೀಣನಾಗಿ ಶತಾಧಿಪತಿಯ ಅಧಿಕಾರವನ್ನು ಗಳಿಸಿಕೊಂಡಿದ್ದ, ನೀವು ಎದುರು ನೋಡುವ ಸತ್ಯವೇದದ ನಂಬಿಕೆಯ ನಾಯಕರ ಗುಣಗಳು ಇವನಲ್ಲಿ ಇರಲಿಲ್ಲ.

ಯೇಸುವಿನ ಅಧಿಕಾರವನ್ನು ಎಷ್ಟರಮಟ್ಟಿಗೆ ಈತ ಅರ್ಥಮಾಡಿಕೊಂಡಿದ್ದಾನೆಂಬುದೇ ಅವನ ನಂಬಿಕೆಗೆ ಆಧಾರವಾಗಿದೆ. ನಾವು ಯೇಸುವಿನ ಅಧಿಕಾರವನ್ನು ಅರ್ಥಮಾಡಿಕೊಂಡಾಗ ಯೇಸುವಿನ ದೈವತ್ವ ಹಾಗೂ ಸರ್ವಾಧಿಕಾರವನ್ನು ಅರ್ಥಮಾಡಿಕೊಂಡಾಗ ಯೇಸುವಿನ ದೈವತ್ವ ಹಾಗೂ ಸರ್ವಾಧಿ ಕಾರವನ್ನು ಅರ್ಥಮಾಡಿಕೊಳ್ಳುತ್ತೇವೆ. ಮತ್ತು ಆದರಿಂದ ದೇವರ ಮತ್ತು ಯೇಸುವಿನ ಬಗ್ಗೆ ನಮಗಿರುವ ಅರಿವು ಬದಲಾಗುತ್ತದೆ. ನಮ್ಮ ಪ್ರಾರ್ಥನೆಯೂ ಬದಲಾಗುತ್ತದೆ.

ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿ :-

1. ಯೇಸುವಿನ ಅಧಿಕಾರದ ಬಗ್ಗೆ ನೀವು ಏನೆಂದು ತಿಳಿದುಕೊಂಡಿದ್ದೀರಾ ?
ನಿಮ್ಮ ಜೀವನದಲ್ಲಿ ಯಾವ ವಿಷಯಗಳಲ್ಲಿ ಯೇಸುವಿನ ಅಧಿಕಾರದ ಪ್ರಕಾರ ನಡೆಯುತ್ತಿದ್ದೀರಾ ? ಮತ್ತು ಯಾವ ವಿಷಯಗಳಲ್ಲಿ ಯೇಸುವಿನ ಅಧಿಕಾರದ ಪ್ರಕಾರ ನಡೆಯುತ್ತಿಲ್ಲ ?

2. ಪ್ರತಿದಿನ ನಿಮ್ಮ ಸತ್ಯವೇದದ ಅಧ್ಯಯನ ಹೇಗಿದೆ ?
ದೇವರ ವಾಕ್ಯಕ್ಕೆ ವಿಧೇಯರಾಗಿ ನಡೆಯುತ್ತೀರೆಂದು ನಿಮ್ಮ ಜೀವನ ತೋರಿಸುತ್ತಿದೆಯೇ ? ಹಾಗಿದ್ದರೆ ಯಾವ ರೀತಿಯಲ್ಲಿ ?

ಚಟುವಟಿಕೆ :

1. ನಿಮಗೆ ಅಧಿಕಾರವಿರುವಂತಹ ಕುಟುಂಬ, ಸಂಬಂಧಿಕರು, ಸಭೆ, ಸಭೆಯ ಸೇವಾಕಾರ್ಯ.... ಇತ್ಯಾದಿಗಳ ಪಟ್ಟಿಯನ್ನು ಬರೆಯಿರಿ., ಈ ಒಂದೊಂದು ಅಂಶಗಳ ಮೇಲೆ ನಿಮಗಿರುವ ಅಧಿಕಾರವನ್ನು ದಯವಿಟ್ಟು ವಿವರವಾಗಿ ಬರೆಯಿರಿ

2. ನಿಮ್ಮ ಜೀವನದಲ್ಲಿ ಬರುವ ಪ್ರತಿಯೊಂದು ಸನ್ನಿವೇಶಗಳನ್ನು ಸರಿಪಡಿಸಲು, ನಿಭಾಯಿಸಲು ಯೇಸುವಿಗೆ ಅಷ್ಟೊಂದು ಅಧಿಕಾರ ಹೇಗೆ ಇದೆ ಎಂಬುದಕ್ಕೆ ಕಾರಣ ಕೊಡಿ.

3. ಮತ್ತು ಯೇಸುವಿನ ಅಧಿಕಾರದಿಂದ ನಿಮ್ಮ ಜೀವನದಲ್ಲಿ ನೀವು ಆಸೆ ಪಟ್ಟ ಹಾಗೆ ಯಾವ ಯಾವ ವಿಷಯಗಳಲ್ಲಿ ಗುಣಪಡಿಸಲು, ನಿಭಾಯಿಸಲು ಆಗಲಿಲ್ಲ ಎಂಬುದಕ್ಕೆ ಕಾರಣ ತಿಳಿಸಿ.

# 20. ಸಿರಿಯಾದ ಸೀಮೋನ

ಮತ್ತಾಯ 27:32

ಮಾರ್ಕ 15:21-22 ಮತ್ತು ಲೂಕ 23:26

ಯೇಸು ಇಡೀ ರಾತ್ರಿ ಹಗಲು ಎಚ್ಚರವಾಗಿದ್ದರು, ಅವರನ್ನು ಬೇಡಿಹಾಕಿಸಿ ಗೆತ್ಸೆಮನೆ ತೋಟದಿಂದ ಅನ್ನನ ಬಳಿಗೂ, ಅಲ್ಲಿಂದ ಕೆಫಾಸನನ್ನು ಭೇಟಿಮಾಡಲು ಮತ್ತೆ ಪಿಲಾತನನ್ನು ಸಂಧಿಸಲು ಕಾಲ್ನಡಿಗೆಯಲ್ಲೇ ಕರೆದುಕೊಂಡು ಹೋದರು.

ಹೆರೋದನನ್ನು ಸಂಧಿಸಿ ಮತ್ತೆ ರಾಜ್ಯಪಾಲನ ಬಳಿಗೆ ಕರೆತಂದರು ಸೈನಿಕರು ಹೊಡೆದು ಛಡಿ ಏಟುಕೊಟ್ಟರು. ಯೇಸುವಿಗೆ ರಕ್ತಸ್ರಾವವಾಗಿ ತುಂಬಾ ಆಯಾಸವಾಗಿತ್ತು. ಶಿಲುಬೆಯ ಕಂಬವನ್ನು ಹೊತ್ತುಕೊಂಡು ಹೋಗುವಂತೆ ಮಾಡಿದರು., ಅದು 30 ಅಥವಾ 40 ಪೌಂಡು ಭಾರವಾಗಿತ್ತು.

ಇಂತಹ ಸಂದರ್ಭದಲ್ಲಿ ಯೇಸು ಮರದ ತುಂಡನ್ನು ಹೊರಲು ನಿಶ್ಯಕ್ತರಾಗಿದ್ದರು. ಆ ಸಮಯದಲ್ಲಿ ದಾರಿಯಲ್ಲಿ ಹೋಗುತ್ತಿದ್ದ ಸಿರಿಯಾ ಎಂಬ ಊರಿನಿಂದ ಬಂದಿದ್ದ ಒಬ್ಬ ಮನುಷ್ಯನಾದ ಸೀಮೋನನನ್ನು ಬಲವಂತವಾಗಿ ಹಿಡಿದು ಶಿಲುಬೆಯ ಕಂಬವನ್ನು ಹೊರಿಸಿದರು. ಆತ ಅಲೆಕ್ಸಾಂದ್ರ ಮತ್ತು ರೂಪೂಸರ ತಂದೆ (ಮಾರ್ಕ 15:21) ಸಿರಿಯಾ ಎಂಬ ಊರು ಉತ್ತರ ಆಫ್ರಿಕಾ ದೇಶದ ಈಗಿರುವ ಟ್ರಿಪೊಲಿ, ಲಿಬಿಯಾ ಬಳಿ ಇತ್ತು. ಪಸ್ಕ ಹಬ್ಬಕ್ಕಾಗಿ ಅವನು ಅನೇಕ ವರ್ಷ ಉಳಿತಾಯ ಮಾಡಿ ಯಾತ್ರೆಗಾಗಿ ಬಂದಿದ್ದ. ಇದು ಅವನ ಜೀವನದಲ್ಲೂ, ಆ ವರ್ಷದಲ್ಲೂ ಮುಖ್ಯವಾದ ಘಟನೆಯಾಗಿತ್ತು. ಅವನು ತನ್ನ ಮಕ್ಕಳನ್ನು ತನ್ನ ಜೊತೆಯಲ್ಲಿ ಜೀವನದಲ್ಲಿ ಒಮ್ಮೆ ನಡೆಯುವ ಈ ಘಟನೆಗಾಗಿ ಕರೆ ತಂದಿದ್ದನು.

ಈ ಸೇವೆ ಮಾಡಲು ಬಲವಂತ ಮಾಡಿದಾಗ ಸೀಮೋನನ ತಕ್ಷಣದ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವಿಲ್ಲ.

ಅವನನ್ನು ಮಾತ್ರ ಕರೆದಾಗ ಆಶ್ಚರ್ಯ

(ಸುತ್ತಲೂ ಅಷ್ಟೊಂದು ಜನ ಇದ್ದಾಗ..

ನನ್ನನ್ನು ಮಾತ್ರ ಯಾಕೆ ?)

ತಾನು ಮಾಡಿದ್ದ ಯೋಜನೆಯಲ್ಲಿ ಆಕಸ್ಮಿಕವಾಗಿ

ಈ ರೀತಿಯಾಯಿತು ಎಂಬ ಕಿರಿಕಿರಿ

(ನಾನು ಇದನ್ನು ಮಾಡಲು ತಯಾರಿಲ್ಲ)

ರೋಮಾಪುರದ ಅಧಿಕಾರಿಗಳ ಮತ್ತು ಯೆಹೋದ್ಯದ ದಾರ್ಮಿಕ ಅಧಿಕಾರಿಗಳ ದೃಷ್ಟಿಯಲ್ಲಿ ಅಪರಾಧಿ ಎಂದು ಆರೋಪಿಸಲ್ಪಟ್ಟವರೊಂದಿಗೆ ಸೇರಲು ನಿರಾಕರಣೆ

ಅಪರಾಧಿಗಳಿಗೆ ಮಾತ್ರ ವಿಧಿಸಲಾಗುವ ಶಿಲುಬೆಯನ್ನು ಹೊತ್ತುಕೊಂಡು ಎಲ್ಲರಗಮನ ತನ್ನ ಮೇಲೆ ಬಿದ್ದದ್ದರಿಂದ ನಾಚಿಕೆ.

ಸೀಮೋನನ ಮತ್ತು ನಮ್ಮ ಅನುಭವ ಬೇರೆ ಬೇರೆ ಇರಬಹುದು ಆದರೆ ಅದಕ್ಕೆ ಮಾಡುವ ನಮ್ಮ ಪ್ರತಿಕ್ರಿಯೆ ಒಂದೇ ಆಗಿದೆ. ಇದರಿಂದ ಅನಿವಾರ್ಯವಾಗಿ ಉಂಟಾಗುವ ಶಿಲುಬೆ (ಸನ್ನಿವೇಶ)ಗಳನ್ನು ನಾವು ಹೇಗೆ ನಿಭಾಯಿಸುತ್ತೇವೆಂಬುದರ ಬಗ್ಗೆ ನಾವು ಯೋಚಿಸಬೇಕು ಶಿಲುಬೆ ಸೀಮೋನನಿಗೆ ಅನಿರೀಕ್ಷಿತವಾಗಿತ್ತು. ಅನೇಕ ಬಾರಿ ನಮಗೂ ಶಿಲುಬೆ ಅನಿರೀಕ್ಷಿತವಾಗಿದೆ.

ಸೀಮೋನನಿಗೆ ಹೇಗೆ ನಿರಾಕರಿಸಲು ಸಾಧ್ಯವಾಗಲಿಲ್ಲವೋ ಹಾಗೆಯೇ ನಮಗೂ ಶಿಲುಬೆಯನ್ನು ನಿರಾಕರಿಸಲು ಆಗುವುದಿಲ್ಲ. ನಾವು ಸೀಮೋನನು ಯೇಸುವನ್ನು ಎದುರಿಸಿದಾಗ ಅವನಿಗೆ ಅನ್ನಿಸಿರಬಹುದಾದ ಪ್ರಶ್ನೆಗಳಿಗೆ ನಾವು ಆಶ್ಚರ್ಯದಿಂದ ಸರಿಯಾದ ಉತ್ತರ ಹೊಂದಲಿಲ್ಲ. ಆದರೆ ಅಂಥದ್ದೇ ಪ್ರಶ್ನೆಗಳನ್ನು ನಮ್ಮನ್ನು ನಾವೇ ಪರೀಕ್ಷಿಸಲು ಉಪಯೋಗಿಸಬಹುದು.

ನಾವು ಶಿಲುಬೆಯನ್ನು ಹೊರುವಾಗ ಶಿಲುಬೆ ಇಲ್ಲದಿದ್ದರೆ ಪುನರುಥಾನವಿಲ್ಲವೆಂಬುದನ್ನು ಅರ್ಥಮಾಡಿಕೊಂಡಿದ್ದೇವಾ ? (ಆ ಸಮಯದಲ್ಲಿ ಸೀಮೋನ ಯೇಸುವಿಗೆ ಸಹಾಯ ಮಾಡಿದ ಅಷ್ಟೆ)

ನಮಗೆ ನಮ್ಮ ಕುಟುಂಬ ಸದಸ್ಯರು, ಸ್ನೇಹಿತರು ಮುಂತಾದವರಿಂದ ನಮ್ಮ ಕಷ್ಟಗಳಿಗೆ ಸಹಾಯ ದೊರೆಕಿದೆಯಾ ? ಅಥವಾ ಅವರಿಂದ ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಅಡಚಣೆಯಾಗುತ್ತಿದೆಯಾ ? ಏನೇ ಇರಲಿ ನಾವು ನಮ್ಮ ಶಿಲುಬೆಯನ್ನು ಹೊರುವುದರಲ್ಲೂ, ಧೀರ್ಘಶಾಂತಿಯಿಂದ ಉದಾಹರಣೆಯಾಗಿದ್ದೇವಾ ?

ನಾವು ಪರಿಪೂರ್ಣರಾಗುವಂತೆ ನಮ್ಮ ಕಷ್ಟಗಳಲ್ಲಿ ಪರಿಶುದ್ಧ ಆತ್ಮರ ಸಹಾಯ ಪಡೆಯಲು ನಾವು ಬಯಸುತ್ತೇವಾ ? ಪೌಲನಂತೆ ನಾವೂ ಕಷ್ಟಗಳು ಬರುತ್ತೇವೆಂದು ತಿಳಿದು ಪವಿತ್ರಾತ್ಮನ ಮುಖಾಂತರ ಸದಾ ಪ್ರಾರ್ಥಿಸುತ್ತೇವಾ ? ಪೌಲನು ಕೊಲೊಸ್ಸಿರಿಗೆ ಬರೆದ ಪತ್ರ 1:24 ರಲ್ಲಿ ಈ ರೀತಿಯಾಗಿ ಹೇಳಿದ್ದಾರೆ, ನಾನು ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ. ನಾನು ಸಭೆಗೆ ಸೇವಕನಾದೆನು. ನಾವು ಉತ್ಸುಕತೆಯಿಂದ ಕಷ್ಟಸನ್ನಿವೇಶಗಳಲ್ಲಿ ಪ್ರಯಾಸ ಪಟ್ಟದ್ದರಿಂದ ನಮಗೆ ಸಿಕ್ಕ ಆಶೀರ್ವಾದಗಳಬಗ್ಗೆ ಹೇಳುತ್ತೇವಾ ಅಥವಾ ಈ ಅನುಭವವನ್ನು ಬದಿಗೊತ್ತಿ ಮುಂದೆ ಹೋಗುತ್ತೇವಾ ? ನಾವು ಸೀನೋನನಂತೆ ಆ ಸನ್ನಿವೇಶವು ನಮ್ಮನ್ನು ನಾವೇ ಬದಲಾಯಿಸಿಕೊಳ್ಳಲು ಬಿಡಬೇಕು. ಆ ಅನುಭವದಿಂದ ಕ್ರಿಸ್ತನೊಂದಿಗೆ ಆತ್ಮೀಯ ಸಂಬಂಧ ಬೆಳೆಸಬೇಕು. ಇದನ್ನು ನಮ್ಮ ಕುಟುಂಬದವರೊಂದಿಗೆ (ಅದರಲ್ಲೂ ವಿಶೇಷವಾಗಿ ಮಕ್ಕಳೊಂದಿಗೆ),

ಸ್ನೇಹಿತರೊಂದಿಗೆ, ನಾವು ಭೇಟಿಮಾಡುವ ಪ್ರತಿಯೊಬ್ಬರಿಗೂ ಸಾಕ್ಷಿಯಾಗಿ ನಮ್ಮ ಅನುಭವಗಳನ್ನು ಹಂಚಿಕೊಳ್ಳಬಹುದು.

ಯೇಸುವನ್ನು ಹಿಂಬಾಲಿಸುವುದು, ಜೀವನದಲ್ಲಿ ಮುಂದುವರಿಯುವುದು (ಲೂಕ 9:23) ಆಗ ಯೇಸು ಅವರಿಗೆ ಹೀಗೆ ಹೇಳಿದನು : ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ.

ಇನ್ನೊಮ್ಮೆ ಗಮನಿಸಿ ಸಿರಿಯದ ಸೀಮೋನನ ಬಗ್ಗೆ ಲೂಕ ಪುಸ್ತಕದಲ್ಲಿ ಏನು ಹೇಳಿದ್ದಾರೆಂದು : ಶಿಲುಬೆಯ ಕಂಬವನ್ನು ಆತನ ಮೇಲೆ ಹೊರೆಸಿ ಅವರು ಅದನ್ನು ಹೊತ್ತುಕೊಂಡು ಯೇಸುವಿನ ಹಿಂದೆ ಹೋಗುವಂತೆ ಮಾಡಿದರು (23:26) ಆದಷ್ಟು ನಾವು ಭಾರವು ತೆಗೆಯಲ್ಪಡಬೇಕೆಂದು ಆಶಿಸುತ್ತೇವೆ (ಮತ್ತೆ ಪ್ರಾರ್ಥಿಸಲೂ ಬಹುದು). ದೇವರನ್ನು ಭಾರತೆಗೆಯಲು ಪ್ರಾರ್ಥಿಸುವುದರಲ್ಲಿ ತಪ್ಪಿಲ್ಲ. ದೇವರು ನಿಮ್ಮ ನೋವನ್ನು ಕಡಿಮೆಮಾಡಿದರೆ ತಕ್ಷಣ ಅದನ್ನು ಅರಿತು ನಮ್ಮನ್ನು ಗುಣ ಪಡಿಸಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಬೇಕು. ಆದರೆ ದೇವರು ನಮ್ಮ ನೋವನ್ನು ತೆಗೆಯದಿದ್ದರೆ ನಾವು ಈ ರೀತಿಯಾಗಿ ಅರ್ಥಮಾಡಿಕೊಳ್ಳಬೇಕು. ಈ ಸಂಧರ್ಭವನ್ನು ಉಪಯೋಗಿಸಿ ದೇವರು ನಾವು ನಂಬಿಕೆಯಲ್ಲಿ ವೃದ್ಧಿಯಾಗಲು ಅಥವಾ ನೀರಿಕ್ಷಣೆಯಲ್ಲಿ ವೃದ್ಧಿಯಾಗಲು ಅಥವಾ ಪ್ರೀತಿಸುವುದರಲ್ಲಿ ಬೆಳೆಯಲು ನಮಗೆ ಸಹಾಯ ಮಾಡುತ್ತಿದ್ದಾರೆಂದು ಅರ್ಥಮಾಡಿಕೊಳ್ಳಬೇಕು. ಅಥವಾ ಸಂಪೂರ್ಣವಾಗಿ ಅವರ ಚಿತ್ತಕ್ಕೆ ನಾವು ಶರಣಾಗತರಾಗಬೇಕೆಂದೂ ಇರಬಹುದು.

ಸೀಮೋನನ ವಿಷಯದಲ್ಲಿ ಯೇಸುವು ಈ ಸನ್ನಿವೇಶವನ್ನು ಉಪಯೋಗಿಸಿ ತನ್ನದೇ ಆದ ರೀತಿಯಲ್ಲಿ ಶಿಲುಬೆಯಿಂದ ಅವನನ್ನು ತನ್ನ ಕಡೆಗೆ ಸೆಳೆದಿದ್ದಾರೆ. ಇಲ್ಲದಿದ್ದರೆ ಸೀಮೋನನಿಗೆ ಈ ಅವಕಾಶ ಸಿಕ್ಕುತ್ತಿರಲಿಲ್ಲ. ಇದರಿಂದ ಕ್ರೈಸ್ತ ಧರ್ಮವನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಯಿತು. ಇಲ್ಲದಿದ್ದರೆ ಆತನು ಕ್ರೈಸ್ತ ಧರ್ಮದಲ್ಲಿ ಅಷ್ಟೊಂದು ಭಾಗಿಯಾಗಿಯೂ ಇರುತ್ತಿರಲಿಲ್ಲ. ಯೇಸುವಿನೊಂದಿಗೆ ದಾರಿಯಲ್ಲಿ ನಡೆಯದಿದ್ದರೆ ಸುವಾರ್ತೆಯ ಬಗ್ಗೆ ಆತ ಅಷ್ಟೊಂದು ಗಮನವೂ ಕೊಡುತ್ತಿರಲಿಲ್ಲ. ಇದರ ಫಲಿತಾಂಶವಾಗಿ ಸೀಮೋನನ ಮಕ್ಕಳೂ ಕ್ರೈಸ್ತರಾಗಿ ಕಾರ್ಯಗತರಾಗಿರುತ್ತಲೂ ಇರಲಿಲ್ಲ (ಯಾರಿಗೆ ಗೊತ್ತು ಅವರು ಎಷ್ಟು ಜನರ ಜೀವನ ಬದಲಾಯಿಸಿದ್ದಾರೆ ?)

ನಿಮ್ಮ ಜೀವನದಲ್ಲಿ ದೇವರು ನಿಮಗೆ ಕೊಟ್ಟಿರುವ ಶಿಲುಬೆಗಳಿಗೆ ನೀವು ಕೃತಜ್ಞತರಾಗಿದ್ದೀರಾ? ಇದರಿಂದ ನಿಮ್ಮ ಜೀವನ ನಿರಂತರವಾಗಿ ಬದಲಾವಣೆಯಾಗುವುದು ಎಂದು ತಿಳಿದು ಒಳ್ಳೆಯ ಮನೋಭಾವನೆಯಿಂದ ತಾಳ್ಮೆಯೊಂದಿಗೆ ಹೊರುತ್ತಿದ್ದೀರಾ ?

# 21. ಶಿಲುಬೆಯ ಮೇಲಿದ್ದ ಒಬ್ಬ ಅಪರಾಧಿ

ಲೂಕ 23:26-43

ಅವನೊಬ್ಬ ಹೆಸರಿಲ್ಲದ ಪಾತ್ರವಾಗಿದ್ದನು. ಒಬ್ಬ ಅಪರಾಧಿಯಾಗಿದ್ದನು, ಆದರೆ ನಮ್ಮ ಹೃದಯವನ್ನು ಆಳವಾಗಿ ಯೋಚಿಸುವಂತೆ ಮಾಡುತ್ತಾನೆ.

ಆ ಮೂವರನ್ನು ಜನರ ಮಧ್ಯದಲ್ಲಿ ಮೆರವಣಿಗೆ ಮಾಡಿ, ಬೆನ್ನ ಮೇಲೆ ಶಿಲುಬೆಯನ್ನು ಹೊತ್ತು ಅವರ ಅಪರಾಧಗಳನ್ನು ಪ್ರದರ್ಶಿಸುವುದರ ಮೂಲಕ, ಅವರಂತೆ ಜೀವಿಸುವವರಿಗೆ ಆಗುವ ಶಿಕ್ಷೆಯನ್ನು ಕುರಿತು ಜನರಿಗೆ ಎಚ್ಚರಿಸುತ್ತಿದ್ದಾರೆ.

ಅವರು ಕ್ರೂಜೆಯ ಮೇಲೆ ತೂಗುಹಾಕಲ್ಪಟ್ಟಿದ್ದರು. ಈ ಅಪರಾಧಿಯ ಗಮನ, ಯೇಸುವೆಂಬ ಮನುಷ್ಯನ ಮೇಲೆ ಹಾಯಿತು, ಅವನು ಕುರುಡರನ್ನು ವಾಸಿಮಾಡಿದ್ದನು, ಕುಷ್ಠರೋಗವನ್ನು ಸ್ವಸ್ಥಮಾಡಿದ್ದನು, ಕುಂಟರಿಗೆ ಕಾಲು ನೆಟ್ಟಗೆ ಮಾಡಿದ್ದನು, ಬಿರುಗಾಳಿಯನ್ನು ಶಾಂತಗೊಳಿಸಿದ್ಧನು, ಹಾಗೂ ಸತ್ತವರನ್ನೂ ಸಹ ಎಬ್ಬಿಸುವಂತಹ ಮನುಷ್ಯನಾಗಿದ್ದನು. ಆದರೆ ಅವನ ಹಾಗೆಯೇ ಅಸಹಾಯಕನಾಗಿ ಉಸಿರಾಡಲು ಕಷ್ಟಪಡುತ್ತಾ ಇದ್ದ ಆ ಮನುಷ್ಯನನ್ನು ಕ್ರೂಜೆಯ ಮೇಲೆ ತೂಗುಹಾಕಲ್ಪಟ್ಟಿತು !

ಜನರ ಗುಂಪು ಅವನನ್ನು ಅಪಹಾಸ್ಯಮಾಡಿ, ನೀನು ನಿಜವಾದ ದೇವರೇ ಆಗಿದ್ದಲ್ಲಿ ಎಲೀಯನ್ನು ಕರೆದು, ಈ ಶಿಲುಬೆಯಿಂದ ನಿನ್ನನ್ನು ಕೆಳಗಿಳಿಸಲು ಅಪ್ಪಣೆಮಾಡು ಎಂದು ಸವಾಲೊಡ್ಡುವುದನ್ನು ಆದನು ಕೇಳಿಸಿಕೊಂಡನು ಅವನೂ ಸಹ ಆ ಮನುಷ್ಯನ ಮೇಲೆ ಕೋಪಿಸಿಕೊಂಡು ತಿರಸ್ಕಾರಮಾಡಿದನು.

ಯೇಸುವು, ಅವನನ್ನು ಮತ್ತು ಅವನ ಸ್ನೇಹಿತನನ್ನೂ ಭಯಂಕರವಾದ ಶಿಲುಬೆಯ ಮರಣದಿಂದ ತಪ್ಪಿಸಬಹುದಾದ ಮಹಾತ್ಕಾರ್ಯ ಮಾಡಬಹುದಾಗಿತ್ತು. ಅವನು ತನ್ನ ಯಾತನೆಗಳ ಮೇಲೆ ಮಿಂಚನ್ನು ತರಬಹುದಾಗಿತ್ತು. ಅಥವಾ ಭೂಕಂಪಗಳನ್ನು ಬರಮಾಡಿ ಅವರನ್ನು ಬಿಡಿಸಬಹುದಾಗಿತ್ತೇ ? ತನ್ನ ಶಕ್ತಿಗೆಳನ್ನು ಅವನು ಕಳೆದುಕೊಂಡಿರಬಹುದೇ ? ಆದರೇ ಸಾಧ್ಯವಾಗಿರುವುದೇನೆಂದರೆ ಯೆಹೋದ್ಯರ ಅರಸನು ಮರಣವನ್ನು ನಿಜವಾಗಿಯೂ ಆಯ್ಕೆಮಾಡಿಕೊಳ್ಳುವ ಸಾಧ್ಯತೆ ಇರಬಹುದು. ಈ ಮರಣ ಅವನ ಹೃದಯವನ್ನು ಕಳವಳಗೊಳಿಸಿತು.

ತಂದೆಯೇ ಅವರನ್ನು ಕ್ಷಮಿಸು ಅವರು ಏನು ಮಾಡುತ್ತೀರವರೆಂದು ಅರಿಯರು : ಎಂದು ಅವನು ಹೇಳುವುದನ್ನು ಕೇಳಿಕೊಂಡನು.

ಅವನನ್ನು ಭಾಧೆಪಡಿಸಿದ ಮತ್ತು ಮರಣದಂಡನೆ ವಿಧಿಸುವವರಿಗೆ ಕ್ಷಮಿಸಿ ಮತ್ತು ಅವರಿಗಾಗಿ ಪ್ರಾರ್ಥಿಸುವ ಸಾಮರ್ಥ್ಯ ಹೊಂದಿದ್ದಾನೆ ಎಂಬುದು ಅವನಿಗೆ ಮನವರಿಕೆಯಾಯಿತು. ಅವನು ದೇವರಾಗಿದ್ದಾನೆ. ಅವನ ಮುಖವು ವಿಕಾರವಾಗಿ ಜಜ್ಜಲ್ಪಟ್ಟಿತು ಮತ್ತು ರಕ್ತದಿಂದ ತುಂಬಿತ್ತು. ಅವನ ಕಣ್ಣುಗಳು ನೋವಿನಿಂದ ಕೂಡಿದ್ದರೂ ಕರುಣೆಯಿಂದ ತುಂಬಿದ್ದವು. ಆ ಅಪರಾಧಿಯ ಮನಸ್ಸು ಕರಗಿತು, ಪಶ್ಚಾತ್ತಾಪದಿಂದ ಕೂಡಿತು. ತನ್ನನ್ನು ಕಿರುಕುಳ ಕೊಡುವವರನ್ನು ಪ್ರೀತಿಸುವ ಈ ಮುಗ್ಧ ಮನುಷ್ಯನ ಗುಣ ಅವನಿಗೆ ನಂಬಿಕೆಯುಂಟು ಮಾಡಿತು. ತಾನು ಮಾಡಿದ ಪಾಪಗಳು, ಸ್ವಾರ್ಥತೆ, ದೇವರು ಮತ್ತು ಮನುಷ್ಯರಿಗೆ ಗೌರವ ತೋರಿಸದೆ ಇರುವುದು ನೀಗದಂತಹ ಆಶಾಪಾಶಗಳು, ಅವನ ಅನೇಕ ಕಾರ್ಯಗಳ, ಪ್ರವಾಹಗಳಿಂದ ಅವನ ಮನಸ್ಸು ತುಂಬಿತು.

ಆತನ ಮುಖ ಅವನ ದುಷ್ಕೃತ್ಯಗಳಿಂದ ನೊಂದ ನೋವುಗೊಂಡಿರುವ ಮುಖಗಳನ್ನು, ಅತ್ತ ಕಂಗಳನ್ನು ಮುರಿದ ಹೃದಯಗಳನ್ನು ನೆನಪುಮಾಡಿತು. ಈ ಮನುಷ್ಯನು ಮುರಿದ ಹೃದಯಗಳನ್ನು ನೆನಪುಮಾಡಿತು. ಈ ಮನುಷ್ಯನು ಮುರಿದ ಹೃದಯಗಳನ್ನು ಸ್ವಸ್ಥಪಡಿಸುವಂತನಾಗಿದ್ದರೂ ತನ್ನ ಶರೀರವನ್ನು ಶಿಲುಬೆಯ ಮೇಲೆ ಮುರಿಯುವ ಆಯ್ಕೆಮಾಡಿಕೊಳ್ಳುತ್ತಾನೆ.

ಈ ಅಪರಾಧಿಯು, ಯಾವ ರೀತಿಯಲ್ಲಿ ಯೇಸುವು ಕ್ಷಮಿಸಿದನು, ಕರುಣೆತೋರಿಸಿದನು, ಪಾಪಿಯಾದ ಮಹಿಳೆಯನ್ನು ಬದಲಾವಣೆಮಾಡಿದ್ದು, ವ್ಯಭಿಚಾರ ಸ್ತ್ರೀ, ಜಕ್ಕಾಯ, ಸುಂಕದರವನ್ನೆಲ್ಲ ನೆನಪಿಸಿಕೊಂಡನು. ಅವನು ಯೇಸುವಿನಿಂದ ಎರಡನೇ ಅವಕಾಶ ಬಯಸಿದನು. ಅವನ ಕಣ್ಣೀರು ಪಶ್ಚಾತ್ತಾಪದಿಂದ ಕೂಡಿತ್ತು, ತನ್ನ ಜೀವನವನ್ನು ಅಪವ್ಯಯ ಮಾಡಿದ್ದೇನೆಂದುಕೊಂಡನು, ಮರಣ ಮತ್ತು ನಿರಂತರವಾಗಿ ಉರಿಯುವ ನರಕದ ಭಯದಲ್ಲಿ ಅವನಿದ್ದನು. ಅದೇ ಸಮಯದಲ್ಲಿ ಇನ್ನೊಬ್ಬ ಅಪರಾಧಿ ಯೇಸುವನ್ನು ಅವಮಾನಪಡಿಸಿದನು. ತಕ್ಷಣವೇ, ದೇವರನ್ನು ಭಯಪಡದೇ ಇರುವ ಅವನನ್ನು ಇವನು ಖಂಡಿಸುತ್ತಾನೆ.

ನಿನ್ನ ರಾಜ್ಯದಲ್ಲಿ ನನ್ನನ್ನು ನೆನಪಿಸಿಕೋ ಎಂದು ಅವನು ದೀನನಾಗಿ ಯೇಸುವಿನಲ್ಲಿ ಬೇಡಿಕೊಳ್ಳುತ್ತಾನೆ. ಇಂತಹ ಪದಗಳು ಬದಲಾವಣೆ ಹೊಂದಿದ ಅವನ ಹೃದಯವನ್ನು ತೋರ್ಪಡಿಸುತ್ತದೆ.

ಈಗ ಅವನು ಸಂತೋಷದಿಂದ ಅಳಲು ಪ್ರಾರಂಭಿಸಿ, ಯೇಸುವಿನೊಂದಿಗೆ ಪರಲೋಕದಲ್ಲಿರುವ ವಾಗ್ದಾನವನ್ನು ಪಡೆದು ಕೃತಜ್ಞತೆಯುಳ್ಳವನಾಗಿದ್ದಾನೆ. ಅವನು ಕ್ಷಮೆಯನ್ನು ಮತ್ತು ದೇವರ ಮಹಿಮೆಯನ್ನು ಅನುಭವಿಸಿದ್ದಾನೆ.

ನಮಗೆ ಗೊತ್ತಿರುವಂತೆ ಈ ಅಪರಾಧಿಯೂ ಸಹ ಯೇಸುವನ್ನು ನೋಡಿದ ಕೂಡಲೇ ದೂಷಿಸುವವರಲ್ಲಿ ಒಬ್ಬವನಾಗಿದ್ದನು (ಮ 27:39-44, ಮಾರ್ಕ 15:32)

ಅವನ ಸ್ವಾರ್ಥತೆಯ ಬಯಕೆಯೇನೆಂದರೆ ಜಗತ್ತಿನ ರಕ್ಷಣೆಯ ಬಗ್ಗೆ ಅರ್ಥಮಾಡಿಕೊಳ್ಳದೇ ಅಥವಾ ಕಾಳಜಿ ವಹಿಸದೇ ಹೇಗೆ ಆ ಸಂಧರ್ಭವನ್ನು ತನ್ನ ಅನುಕೂಲಕ್ಕಾಗಿ ಉಪಯೋಗಿಸಿಕೊಂಡನೆಂಬುದು.

ನಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗದೇ ಹೋದರೆ ಅಥವಾ ನಾವು ಅಂದುಕೊಂಡ ರೀತಿಯಲ್ಲಿ ನಡಯದೇ ಹೋದರೆ ನಾವು ದೇವರನ್ನು ದೂಷಿಸುದತ್ತೇವಾ? ನಾವು ದೇವರಿಗೆ ದೂಷಿಸುವುದು, ಗುಣಗುಟ್ಟುವ್ವುದು, ಪ್ರಶ್ನಿಸುವುದು ಮಾಡುತ್ತೇವಾ ?

ಆದರೆ ಈ ಅಪರಾಧಿಯಲ್ಲಿರುವ ಅದ್ಬುತವಾದ ವಿಷಯವೆಂದರೆ ಶಿಲುಬೆ ಮೇಲೆ ಅವನು ಮಾನಸ್ಸಾಂತರ ಹೊಂದಿದರು.

ನಾವು ಶಿಲುಬೆಗಾಗಿ ದೃಢಸಂಕಲ್ಪ ಹೊಂದಿದ್ದೇವಾ ? ಶಿಲುಬೆಯು ನಮ್ಮ ಜೀವನದ ಕೇಂದ್ರ ಬಿಂದು ಆಗಿದೆಯೇ ? ಅಥವಾ ಬರೀ ಭಾನುವಾರದ ಕರ್ತನ ಭೋಜನದಂದು ನೀಮಿತವಾಗಿದೆಯೇ ?

2 ಕೊರಿಂಥೆ 5:14–15ರಲ್ಲಿ ಹೇಳುವ ಪ್ರಕಾರ, ನಾವು ದಿನಾಲು ಯೇಸುಕ್ರಿಸ್ತನಿಗಾಗಿ ನಮ್ಮನ್ನು ನಾವು ತಿರಸ್ಕರಿಸಿ, ನಮ್ಮ ಶಕ್ತಿ, ಸಮಯವನ್ನು ತ್ಯಾಗಮಾಡುತ್ತಿದೇವ್ವೇ ?

ಆ ಅಪರಾಧಿಯು ತನ್ನ ಪಾಪಗಳ ಜವಾಬ್ದಾರಿಯನ್ನು ತೆಗೆದುಕೊಂಡನು ಮತ್ತು ನ್ಯಾಯತೀರ್ಪನ್ನು ಒಪ್ಪಿಕೊಂಡನು. ನಾವು ನಮ್ಮ ಪಾಪಗಳ, ತಪ್ಪುಗಳ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವಾ ? ಅಥವಾ ನಮ್ಮ ಪಾಪಗಳನ್ನು ಒಪ್ಪಿಕೊಳ್ಳದೇ ಇನ್ನೊಬ್ಬರನ್ನು ದೂಷಿಸಿ ನಮ್ಮನ್ನು ನಾವು ನಿರ್ದೋಷಿಗಳೆಂದು ಸಾಬಿತುಪಡಿಸಿಕೊಳ್ಳುತ್ತೇವಾ ?

ನಾನು ಅನೇಕ ಸಮಯದಲ್ಲಿ ನನ್ನ ಪಾಪಗಳನ್ನು ಸ್ವೀಕರಿಸಲು ತಿರಸ್ಕರಿಸಿದ್ದೇನೆ ನನ್ನ ಗಂಡನೊಂದಿಗೆ ಅಥವಾ ಮಕ್ಕಳೊಂದಿಗೆ ಕ್ಷಮಾಪಣೆ ಕೇಳದೇ ವಾದವಿವಾದ ಮಾಡಿ ನನ್ನನ್ನು ನಾನು ರಕ್ಷಿಸಿಕೊಂಡಿದ್ದೇನೆ.

ಈ ಅಪರಾಧಿಯ ಇನ್ನೊಂದು ಅದ್ಬುತವಾದ ವಿಷಯವೆಂದರೆ ಅವನು ಧೈರ್ಯವಾಗಿ ಯೇಸುವಿನ ಬಗ್ಗೆ ಸತ್ಯವನ್ನು ಮಾತಾಡಿದನು. ಮತ್ತು ದೇವರ ಭಯವಿಲ್ಲದ ತನ್ನ ಸ್ನೇಹಿತನನ್ನು ಖಂಡಿಸಿದನು. ಅವನು ನೋವು, ಸಾವು, ಅವಮಾನಗಳಲ್ಲಿ ಇದ್ದರೂ ಮಾತಾಡಿದನು. ನಾವು ಸತ್ಯವನ್ನು ಹೇಳುತ್ತೇವಾ ? ನಮ್ಮ ನಂಬಿಕೆಯನ್ನು ಧೈರ್ಯವಾಗಿ ಹಂಚಿಕೊಳ್ಳುತ್ತೇವೆ ? ಅಥವಾ ತಿರಸ್ಕಾರ ಹೊಂದುವುದಕ್ಕೆ ಮತ್ತು ವ್ಯತ್ಯಾಸವಾಗಿರುವುದಕ್ಕೆ ಹೆದರುತ್ತೇವಾ ? ಆಯಾಸ, ಅನಾರೋಗ್ಯ

ಅನಾನುಕೂಲತೆಗಳು ನಮ್ಮ ವಿಶ್ವಾಸ ಹಂಚಿಕೊಳ್ಳಲು ತಡೆಯಾಗಿದೆಯೇ ? ದೇವರ ವಾಕ್ಯ ಮತ್ತು ನಂಬಿಕೆಯನ್ನು ಹಂಚಿಕೊಳ್ಳಲು ನಮ್ಮನ್ನು ಯಾವ ವಿಷಯವೂ ತಡೆಯಲಾರದು ಎಂದು ನಮಗೆ ಮನವರಿಕೆಯಾಗಿದೆಯೇ ?

ತನ್ನ ಜೀವನದ ಕೊನೆಯ ಕ್ಷಣಗಳಲ್ಲಿ ಈ ಅಪರಾಧಿ ಪಶ್ಚಾತ್ತಾಪ ಮತ್ತು ದೀನ ಹೃದಯವನ್ನು ತೋರ್ಪಡಿಸಿ, ಯೇಸುವಿನ ಕೃಪೆಯನ್ನು ಸ್ವೀಕರಿಸಿದನು. ನಾವು ಕೃಪೆಯನ್ನು ಸ್ವೀಕರಿಸಲು ತಡೆಯೊಡ್ಡುತ್ತಿದ್ದೇವೆಯೇ ? ಪಾಪರಾಧ, ಅವಮಾನ, ಹೆದರಿಕೆ, ನಮ್ಮನ್ನು ನಾವು ಕ್ಷಮಿಸದೇ ಇರುವುದು ಇಂತಹ ವಿಷಯಗಳಲ್ಲಿ ನಾವು ಜೀವಿಸುತ್ತಿದ್ದೆವೆಯೇ ? ಕ್ಷಾಮಾಪಣೆಗಳಿಸಲು ಸಾಕಾಗುವಷ್ಟು ಒಳ್ಳೆಯ ಕಾರ್ಯಗಳನ್ನು ಮಾಡು. ಎನ್ನು ಬಲವಂತದಲ್ಲಿದ್ದೇವೆಯ ಯೋಚಿಸುತ್ತೀರಾ ? ನಮಗೆ ಸಿಕ್ಕ ಕೃಪೆಯನ್ನು ಇನ್ನೊಬ್ಬರಿಗೆ ಉದಾರವಾಗಿ ಕೊಡುವವರಾಗಿದ್ದೀರಾ ?

ಅನ್ವಯಗಳು :

1. ದೇವರ ಮೇಲೆ ನಿಮಗೇನಾದರೂ ಬೇಸರ ಅಥವಾ ಅಸಮಾಧಾನಗಳಿದ್ದರೆ ಬರೆಯಿರಿ. ವಾಕ್ಯಗಳ ಮೂಲಕ ಧ್ಯಾನಿಸಿರಿ, ಪ್ರಾರ್ಥಿಸಿ ಸಹಾಯಪಡೆದುಕೊಳ್ಳಿರಿ.

1. ಶಿಲುಬೆಗೊಸ್ಕರ ನಿಮ್ಮ ದಿನನಿತ್ಯದ ಜೀವನದಲ್ಲಿ ಯೇಸುವಿನಂತೆ ಹೇಗೆ ಜೀವಿಸಬಹುದೆಂದು ಬರೆಯಿರಿ. ಜವಾಬ್ದಾರಿ ತೆಗೆದುಕೊಳ್ಳದ ನಿಮ್ಮ ಪಾಪಗಳನ್ನು ಗುರುತಿಸಿ, ಅರಿಕೆಮಾಡಿರಿ ಬೇಕಾಗಿರುವ ವ್ಯಕ್ತಿಯಲ್ಲಿ ಕ್ಷಮಾಪಣೆ ಬೇಡಿಕೊಳ್ಳಿರಿ.

3. ನಿಮ್ಮ ವಿಶ್ವಾಸವನ್ನು ಹಂಚಿಕೊಳ್ಳಲು ಹಿಂಜರಿಯುತ್ತಿದ್ದ ವ್ಯಕ್ತಿಯ ಮುಂದೆ ಧೈರ್ಯದಿಂದ ಈ ದಿನ ಹಂಚಿಕೊಳ್ಳಿರಿ. ದೇವರ ವಾಕ್ಯದ ಸತ್ಯವನ್ನು ವ್ಯತ್ಯಾಸವಾಗಿ ಬೇರೊಬ್ಬರ ಮುಂದೆ ಹಂಚಿಕೊಳ್ಳಿರಿ.

4. ಒಂದುವೇಳೆ ನೀವು ದೇವರ ಕೃಪೆಯನ್ನು ಹೊಂದದೆ, ಪಾಪರಾಧದಲ್ಲಿದ್ದರೆ, ಅರಿಕೆ ಮಾಡಿ ಸಹಾಯ ಪಡೆಯಲು ನಿರ್ಧರಿಸಿ. ಯಾರಿಗಾದರೂ ಕ್ಷಮಿಸಲು ನಿಮಗೆ ಕಷ್ಟವಾಗುತ್ತಿದ್ದರೆ ಸಹಾಯ ತೆಗೆದುಕೊಂಡು ನಿಮ್ಮ ಸಂಭಂಧವನ್ನು ಸಂಪರ್ಸಿಸಿಕೊಳ್ಳಿರಿ.

## 22. ಐಥಿಯೊಪ್ಯದ ಕಂಚುಕಿ

ದೇವರ ಭೋಧನೆಗಳನ್ನು ಸ್ಪಷ್ಟವಾಗಿ ಕೇಳಿಸಿಕೊಂಡು ತಕ್ಷಣವಾಗಿ ವಿಧೇಯನಾಗಿರುವ ಒಬ್ಬ ವ್ಯಕ್ತಿಯ ಉದಾಹರಣೆಯನ್ನು ಈ ದಿನ ನೋಡೋಣ. ಯೇಸು ಕ್ರಿಸ್ತನ ಭೋಧನೆಗಳನ್ನು ಅನುಸರಿಸಿ ಫಿಲಿಪ್ಪನು ಯೆರೋಸಲೇಮನ್ನು ಬಿಟ್ಟು ಸಮಾರ್ಯದ ಸೀಮೆಗೆ ದೇವರ ವಾಕ್ಯವನ್ನು ಸಾರಲು ಹೋದನು. ಫಿಲಿಪ್ಪನ ಮೂಲಕ ದೇವರ ಬಲ ಕಾರ್ಯಮಾಡುವುದನ್ನು ಜನರ ಗುಂಪೆಲ್ಲ

ಗಮನಿಸಿದರು. ಮತ್ತು ಅವರು ಶುಭವಾರ್ತೆಯನ್ನು ಕೇಳಿ ಯೇಸುವಿನಲ್ಲಿ ನಂಬಿಕೆ ಇಟ್ಟರು.

ಯೇಸುಕ್ರಿಸ್ತನ ಸೂಚನೆಗಳ ಮೇರೆಗೆ ನಡೆದದರಿಂದ ಫಿಲಿಪ್ಪನ ಮೂಲಕ ಸಮಾರ್ಯದ ಅನೇಕ ಜನರು ಬದಲಾವಣೆ ಹೊಂದಿದರು.

ಸಮಾರ್ಯದ ಸೀಮೆಯಲ್ಲಿರುವಾಗ ಕರ್ತನ ದೂತನು ಫಿಲಿಪ್ಪನಿಗೆ ಏನೆಂದು ಸೂಚನೆ ನೀಡಿದನು ? (ದಕ್ಷಿಣದ ಕಡೆಗೆ ಯೆರೋಸಲೇಮಿನಿಂದ ಗಾಜಕ್ಕೆ ಹೋಗುವ ದಾರಿಯಲ್ಲಿ ಹೋಗು, ಅದು ಅಡವಿ ಎಂದು ಹೇಳಿದನು)

ಫಿಲಿಪ್ಪನು ದೂತನ ಸೂಚನೆಯನ್ನು ಪಡೆದು ಅದಕ್ಕೆ ವಿಧೇಯನಾಗಲು ಹಿಂಜರಿಯಲಿಲ್ಲ. ಅವನು ತಕ್ಷಮವೇ ಕರ್ತನ ಸಂದೇಶವನ್ನು ಪಾಲಿಸಿದನು.

ಅವನು ದೇವರೊಂದಿಗೆ ಪ್ರಶ್ನಿಸಲಿಲ್ಲ ಅಥವಾ ಚರ್ಚಿಸಲಿಲ್ಲ. ದೇವರ ಕೆಲಸವನ್ನು ಆಮೇಲೆ ಮಾಡುತ್ತೇನೆಂದು ಹೇಳಿ ಮುಂದೂಡಲಿಲ್ಲ. ಆದರೆ ದೇವರು ಹೇಳಿದ ಸ್ಥಳಕ್ಕೆ ತಕ್ಷಣವೇ ಹೋದನು.

ದೇವರು ನೀವು ಏನು ಮಾಡಬೇಕೆಂದು ಹೇಳುವಾಗ ನಿಮ್ಮ ಪ್ರತಿಕ್ರಿಯೇ ಹೇಗಿದೆ ? ನೀವು ತಕ್ಷಣವೇ ವಿಧೇಯರಾಗುತ್ತೀರಾ ಅಥವಾ ನೆಪವನ್ನು ಹೇಳಿಕೊಂಡು, ದೇವರ ಸೂಚನೆಗಳಿಗೆ ವಿಧೆಯರಾಗಲು ಹೆಚ್ಚು ಸಮಯ ತೆಗೆದುಕೊಳ್ಳುತ್ತೀರಾ ?

ನವುಗೆ ಎಷ್ಟೇ ವಯಸ್ಸಾಗಿರಲಿ, ಪ್ರಪಂಚವನ್ನು ಸೃಷ್ಟಿಸಿದ ದೇವರ ನವ್ಮೊಟ್ಟಿಗೆ ಮಾತಾಡುತ್ತಿದ್ದಾನೆಂದು ಹೇಗೆ ತಿಳಿಯುವುದು ? ನಮಗೆ ತಿಳಿಯುವುದು ಏಕೆಂದರೆ ಕರ್ತನು ನಮಗೆ ಹೇಳುವುದು ಸತ್ಯವೇದದ ಭೋದನೆಗೆ ಒಪ್ಪಂದವಾಗಿದೆ. ಅವನು ಅಡವಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಕುದುರೆಯ ಒಂದು ರಥವು ಅವನ ಕಡೆಗೆ ಬರುವುದನ್ನು ಕಂಡನು.

ಐಥಿಯೊಪ್ಯದಿಂದ ಹೊರಟಿರುವ ಒಬ್ಬ ಮನುಷ್ಯನು ಆ ರಥದಲ್ಲಿದ್ದನು ಅವನು ಕಂಬಯೂ ಐಥಿಯೊಪ್ಯದವರ ರಾಣಿಯಾಗಿದ್ದ ಕಂದಾತೆಯ ಕೈಕೆಳಗೆ ದೊಡ್ಡ ಅಧಿಕಾರಿಯೂ ಆಕೆಯ ಎಲ್ಲಾ ಖಜಾನೆಯ ಮೇಲ್ವಿಚಾರಕನೂ ಆಗಿದ್ದನು. ಅವನು ದೇವರಾಧನೆಗೋಸ್ಕರ ಐಥಿಯಾಪ್ಯದಿಂದ ಯೆರೊಸಲೇಮಿಗೆ ಪ್ರಯಾಣಿಸಿದನು. ಅವನು ಯೇಸುವಿನ ವಿಶ್ವಾಸಿ ಇನ್ನೂ ಆಗಿರಲಿಲ್ಲ. ಆದರೆ ಅವನು ದೇವರನ್ನು ಹುಡುಕುವ ಮನುಷ್ಯನಾಗಿದ್ದನು ಮತ್ತು ದೇವರಿಗೆ ಹಿತವಾಗಿರುವುದನ್ನು ಮಾಡಬಯಸುವವನಾಗಿದ್ದನು.

ದೇವರ ವಾಕ್ಯ ಓದುತ್ತಿರುವ ಮನುಷ್ಯನನ್ನು ಫಿಲಿಪ್ಪನು ಕೇಳಿಸಿಕೊಂಡಾಗ ಸರಿಯಾಗಿರುವುದನ್ನು ತಿಳಿದುಕೊಂಡು ಅದನ್ನು ಕೇಳುವ ಬುದ್ದಿಯನ್ನು ಹೊಂದಿದವನಾಗಿದ್ದನು. ನಾವು ದೇವರ

ಸೂಚನೆಗಳಿಗೆಯಾವಾಗ ಅಧೀನರಾಗಿರುತ್ತೇವೆ ? ಸಂದರ್ಭಕ್ಕೆ ಅನುಗುಣವಾಗಿ ಮಾತಾಡುವ ಅವಕಾಶ ಅವನು ನಮಗೆ ಕೊಡುತ್ತಾನೆ.

ಐಥಿಯೋಪ್ಯದ ಕಂಚುಕಿಯು ಯೇಶಾಯ ಪ್ರವಾದನೆಯ 59 ಅಧ್ಯಾಯವನ್ನು ಓದುತ್ತಿರುತ್ತಾನೆ. ಫಿಲಿಪ್ಪನು ಈ ಅಧ್ಯಾಯದ ವಚನಗಳ ಸಹಾಯದಿಂದ ಯೇಸುಕ್ರಿಸ್ತನ ಶುಭವಾರ್ತೆಯನ್ನು ಹೇಳಲು ಪ್ರಾರಂಭಿಸಿದನು.

ಫಿಲಿಪ್ಪನು ಈ ವಚನಗಳನ್ನು ಕಂಚುಕಿಗೆ ವಿವರಿಸಿದನು. ಅವನಿಗೀಗ ಅರ್ಥವಾಯಿತು ಅವನು ದೀಕ್ಷಾಸ್ನಾನ ಮಾಡಿಸಿಕೊಂಡನು. ಐಥಿಯೊಪ್ಯದ ಕಂಚುಕಿಯ ಜೀವನ ಸಂಪೂರ್ಣವಾಗಿ ಬದಲಾವಣೆ ಹೊಂದಿತು ಯಾಕೆಂದರೆ ಅವನು ಕರ್ತನಾದ ಯೇಸು ಕ್ರಿಸ್ತನ ಮೇಲೆ ನಂಬಿಕೆ ಇಟ್ಟನು.

ಅವನು ನಂಬಿಕೆಯ ನಿಮಿತ್ತ ಎಷ್ಟು ಜನರ ಜೀವನ ಬದಲಾವಣೆ ಹೊಂದಿತೆಂಬುದನ್ನು ಯೋಚಿಸಿರಿ.

ಅನ್ವಯ :

- ಪರಿಶುದ್ಧಾತ್ಮನ ಕರೆಯನ್ನು ಕೇಳಿರಿ
- ಪರಿಶುದ್ಧಾತ್ಮವನ್ನು ಹಿಂಬಾಲಿಸಿರಿ, ಇನ್ನೊಬ್ಬರ ಜೀವನ ಬದಲಾಯಿಸಲು ಮುಂದಾಗಿರಿ.
- ದೇವರಿಗೆ ಅಧೀನರಾಗಿರಲು, ಯಾವ ವಿಷಯಗಳು ನಿಮ್ಮ ಜೀವನದಲ್ಲಿ ಅಡ್ಡಿ ಮಾಡುತ್ತಿವೆ ಎಂಬುದನ್ನು ಬರೆಯಿರಿ.

## 23. ದೊರ್ಕಳು / ತಬೀಥಾ

ನಿಮ್ಮನ್ನು ನೀವು ಇನ್ನೊಬ್ಬರಿಗೆ ಪ್ರೀತಿಮಾಡುವುದರ ಮೂಲಕ ನಿಮ್ಮ ಜೀವನದ ಅರ್ಥವನ್ನು ತಿಳಿಯಿರಿ. ಯೇಸುಕ್ರಿಸ್ತನ ಜೀವನ ನಮಗೆ ತಿಳಿದಿದೆ. ಅವನ ಸ್ನೇಹಿತರೆಲ್ಲ ಜೀವನದಿಂದ ಕೂಡ ನಾವು ಕಲಿಯುತ್ತೇವೆ. ಒಂದೆಲ್ಲಾ ಒಂದು ದಿವಸ ನಾವೆಲ್ಲರೂ ಸಾಯುತ್ತೇವೆಂದು ಪ್ರಪಂಚದ ಎಲ್ಲಾ ಜನರಿಗೆ ಗೊತ್ತಿದೆ ನಿಮಗೂ ತಿಳಿದಿದೆ. ಆದರೆ ದುಃಖಕರವಾದ ಸಂಗತಿ ಎಂದರೆ ಅದನ್ನು ಯಾರೂ ನಂಬುವುದಿಲ್ಲ. ಒಂದಲ್ಲಾ ಒಂದು ದಿನ ಸಾಯುತ್ತೆನೆಂದು ನಿಮಗೆ ತಿಳಿದಿದ್ದರೆ ಮತ್ತು ಅದಕ್ಕೋಸ್ಕರ ತಯಾರಿಯಾಗಿದ್ದರೆ, ಜೀವಂತವಿರುವಾಗಲೇ ನಿಮ್ಮ ಜೀವನದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳುತ್ತೀರಿ. ಇದೇ ತಬಿಥಾಳ ಕಥೆ, ಅವರ ಹೆಸರಿನ ಅರ್ಥ ಗ್ರೀಕ್ ಭಾಷೆಯಲ್ಲಿ ಜಿಂಕೆ ಎಂದರ್ಥ ಅವಳ ಜೀವನ ಯೇಸು ಕ್ರಿಸ್ತನ ಜೀವಿತದ ಬೆಲೆಯನ್ನು ಕಲಿಸಿಕೊಡುತ್ತದೆ.

ಅಪೊಸ್ತರ ಕೃತ್ಯಗಳು 9:36-42

ತಬಿಥಾಳ ಜೀವನ ಮತ್ತು ಅವಳು ಮಾಡಿದ ಒಳ್ಳೆಕಾರ್ಯಗಳ ಬಗ್ಗೆ ಮಾತಾಡುತ್ತದೆ ಅವಳು

ಯಾವಾಗಲೂ ಇನ್ನೊಬ್ಬರಿಗೆ ಸಹಾಯ ಮಾಡುತ್ತಿದ್ದಳು. ಕೆಲವೊಂದು ಸಲ ನಾವು ಈ ವಾಕ್ಯವನ್ನು ಓದಿ ಒಳ್ಳೆಯದೆಂದು ಭಾವಿಸಿ ಮತ್ತೊಂದು ವಚನದ ಕಡೆಗೆ ಹೋಗುತ್ತೇವೆ ನನ್ನ ಯೋಚನೆಯ ಪ್ರಕಾರ ಅವಳು ಯಾವಾಗಲೂ ಒಳ್ಳೆಯದನ್ನು ಮಾಡಿದಳು. ಕೆಲವೊಂದು ಸಲ ಅಲ್ಲ ಯಾವಾಗಲೂ ಎಂದು ಬರೆದಿದೆ. ಒಂದು ವೇಳೆ ನೀವು ತಾಯಂದಿರಿದ್ದರೆ ನಿಮ್ಮ ಮಕ್ಕಳೊಂದಿಗೆ ಯಾವಾಗಲೂ ಮನೆಯಲ್ಲಿ ತಾಳ್ಮೆಯಿಂದಿರಬಹುದಾ ?ಅದು ಸಾಧ್ಯವಿಲ್ಲ. ನಿಮಗೆ ಮದುವೆಯಾಗಿದ್ದರೆ ನಿಮ್ಮ ಗಂಡನಿಗೆ ಯಾವಾಗಲಾ ಒಳ್ಳೆಯವರಾಗಿ, ಯಾವಾಗಲೂ ಗೌರವಿಸು, ಯಾವಾಗಲೂ ಪ್ರೀತಿಸುತ್ತೀರಾ ? ಅದು ಹೇಗೆ ಸಾಧ್ಯ ? ನಿಮ್ಮ ಅಕ್ಕಪಕ್ಕದವರೊಂದಿಗೆ ಯಾವಾಗಲೂ ಒಳ್ಳೆಯವರಾಗಿದ್ದೀರಾ, ಮನೆಮಾಲಿಕರೊಂದಿಗೆ, ನಿಮ್ಮ ಮನೆ ಬಾಡಿಗೆಯವರೊಂದಿಗೆ ಯಾವಾಗಲೂ ಒಳ್ಳೆಯವರಾಗಿದ್ದೀರಾ ? ಹೇಗೆ ಇರಲು ಸಾಧ್ಯ ? ನೀವು ಅತ್ತೆ ಅಥವಾ ಸೊಸೆ ಆಗಿದ್ದಲ್ಲಿ ಒಬ್ಬರಿಗೊಬ್ಬರು ಯಾವಾಗಲೂ ಒಳ್ಳೆಯವರಾಗಿದ್ದೀರಾ ? ಇದು ಅಸಾಧ್ಯವಾಗಿ ಕಾಣಿಸುತ್ತದೆ ಆದರೆ ಈ ಮಹಿಳೆ ಯಾವಾಗಲೂ ಒಳ್ಳೆದನ್ನು ಮಾಡಿದಳು
ಇದು ನನಗೆ ಯೊಚಿಸುವಂತೆ ಮಾಡಿತು ಅವಳಿಂದ ಕಲಿತ ಮೊದಲ ವಿಷಯವೆಂದರೆ

1. ಅವಳು ಒಂದು ಕುಟುಂಬವನ್ನು ಸ್ಥಾಪಿಸಿದಳು : ಅವಳ ಸ್ವಂತ ಕುಟುಂಬದ ಬಗ್ಗೆ ಸರಿಯಾಗಿ ತಿಳಿದಿಲ್ಲ ಆದರೂ ಸಹ ತನ್ನ ಸುತ್ತಮುತ್ತಲೂ ಪ್ರೀತಿವಾತ್ಸಲ್ಯ ತೋರುವವರ ಗುಂಪನ್ನು ಅವಳು ಕಟ್ಟಿಕೊಂಡಿದ್ದಳು. ತಬಿಥಾಳಿಗೆ ಕುಟುಂಬದ ಅವಶ್ಯಕತೆ ಇದೆ ಎಂದು ಅವಳಿಗೆ ತಿಳಿದಿತ್ತು. ಗಂಡುಮಕ್ಕಳು ಹೊಂದಿರುವುದು ಮಾತ್ರ ಕುಟುಂಬವಲ್ಲ, ಕುಟುಂಬವೆಂದರೆ ಅನುಭವವಾಗಿದೆ ತಿಬಿಥಾಳು ತನ್ನ ಜೀವನದಲ್ಲಿ ಎಲ್ಲರೊಟ್ಟಿಗೆ ಹೊಂದಿಕೊಳ್ಳುತ್ತಿದ್ದಳು. ಯೊಪ್ಪದ ಕ್ರೈಸ್ತರಲ್ಲಿ ಅವಳು ಗೌರವವುಳ್ಳ ಮಹಿಳೆಯಾಗಿದ್ದಳು.

ಎಫೆಸದವರಿಗೆ 5:21-33 ರಲ್ಲಿಯೂ ಸಹ ಹೀಗೆಯೇ ಹೇಳುತ್ತದೆ. ಇನ್ನೊಬ್ಬರಿಗೆ ಪ್ರೀತಿಸಿ ಮತ್ತು ಗೌರವಿಸದಿದ್ದರೆ ನೀವು ಬಹಳ ಕಷ್ಟದಲ್ಲಿ ಇರಬೇಕಾಗುತ್ತದೆ. ಮದುವೆಯ ಜೀವನದಲ್ಲಿಯೂ ಸಹ ಸಾಮಾನ್ಯವಾದ ಘನತೆ ಮತ್ತು ದೃಢ ನಿಶ್ಚಯ ಪ್ರಾಮುಖ್ಯವಾಗಿದೆ. ನಿಮ್ಮ ಪ್ರಕಾರ ಅತಿ ದೊಡ್ಡದಾದ ಬೆಲೆ ಎಂದರೆ ಯಾವುದು ? ಅತೀ ಮಹತ್ವದ ಬೆಲೆ ನಿಮ್ಮ ಮದುವೆಯಲ್ಲಿರುವ ನಿಮ್ಮ ನಂಬಿಕೆ, ನಿಮ್ಮ ಮದುವೆಯಲ್ಲಿ ನಿಮಗೆ ನಂಬಿಕೆಯಿದೆಯಾ ? ನಮ್ಮ ಕುಟುಂಬ, ನಮ್ಮ ಮಕ್ಕಳು ಮತ್ತು ನಮ್ಮ ಗಂಡ । ಹೆಂಡತಿಯನ್ನು ಬೆಲೆಕೊಡುತ್ತೇವೆಯೇ ? ನೀವು ಸತ್ತಮೇಲೆಯೂ ಸಹ ನಿಮೊಟ್ಟಿಗೆ ಇರಲು ಬಯಸುವವರು ಮತ್ತು ನಿಮ್ಮ ಪಕ್ಕದಲ್ಲಿ ಯಾರು ಇರುವರು ? ಎಲ್ಲರೂ ತಬೀಥಾಳನ್ನು ನೆನಪಿಸಿಕೊಂಡು ವಿಷಾಧ ವ್ಯಕ್ತಪಡಿಸಿಕೊಳ್ಳುತ್ತಿದ್ದಾರೆ. ಅವಳು ಸತ್ತು ಹೋಗಿದ್ದಳು. ಆದರೆ ಸಹೋದರಿಯರು ಅವಳಿಗೆ ಸುಮ್ಮನೆ ಹೋಗಿಬಿಡಲು ಆಗಲಿಲ್ಲ ಅವರೆಲ್ಲ ಜೀವಂತವಾಗಿ ಅವಳನ್ನು ಹಿಂಪಡೆಯಲು ಬಯಸಿದರು. ನಾವು ಸತ್ತ ಮೇಲೆ ಎಷ್ಟು ಜನ ನಮ್ಮನ್ನು ಜೀವಂತವಾಗಿ ಹಿಂಪಡೆಯಲು ಬಯಸುತ್ತಾರೆ ? ನೀವು ಸತ್ತರೆ ನಿಮ್ಮ ಪ್ರೀಯರು ನಿಮಗಾಗಿ ವಿಷಾದ ವ್ಯಕ್ತಪಡಿಸುತ್ತಾರೆ ? ನಾವು ಈ ಸಮಯದಲ್ಲಿ ನಿಜವಾಗಿಯೂ ಯೋಚಿಸಬೇಕಾಗಿದೆ. ನಾವು ಅಂತಹ ನೆನಪುಗಳನ್ನು ಸೃಷ್ಟಿಸುತ್ತಿದ್ದೆವಾಗಿ ಇದೇ ರೀತಿಯಾಗಿ ತಬಿಥಾಳ ಜೀವನವಾಗಿತ್ತು.

2) ತನ್ನ ಶಕ್ತಿಯನ್ನೆಲ್ಲಾ ಜನರಲ್ಲಿ ಲಯಮಾಡಿದಳು :
ಜನರಿಗಾಗಿ ಅವಳು ಎಷ್ಟರ ಮಟ್ಟಿಗೆ ಸಮರ್ಪಿಸಿಕೊಂಡಳೆಂದು ನೀವು ನೋಡಿದ್ದೀರಾ ? ಪೇತ್ರನು ಒಬ್ಬ ಅದ್ಭುತವಾದ ಅಪೊಸ್ತಲನಾಗಿದ್ದನು. ಅವನು ಯೆರೊಸಲೇಮಿನಲ್ಲಿದ್ದನು. ಆದರೆ ಈ ಮಹಿಳೆ ಸಭೆಯವರಿಗೆ ಮಹತ್ವವುಳ್ಳವಳಾಗಿದ್ದಳು ಆದ್ದರಿಂದ ಪೇತ್ರನು ಯೆರೋಸಲೇಮಿನಿಂದ ಯೊಪ್ಪಕ್ಕೆ ಬರಲೇ ಬೇಕಾಯಿತು.

ತಮ್ಮ ಸಭೆಯಲ್ಲಿದ್ದ ಒಬ್ಬ ಅದ್ಭುತವಾದ ಕ್ರೈಸ್ತಳನ್ನು ಪೇತ್ರನು ನೋಡಲಿ ಎಂದು ಅವರೆಲ್ಲರೂ ಬಯಸಿದರು. ಅವಳು ಮಿತಿಯಿಲ್ಲದ ಪ್ರೀತಿಗೆ ಬೆಲೆಕೊಟ್ಟಳು. ಕ್ರೈಸ್ತಳಾಗಿ ಅದೊಂದೇ ವಿಷಯವನ್ನು ಅವಳು ನಂಬಿರಬಹುದು. 1ನೇ ಶತಮಾನದ ಸಭೆಗಳಿದ್ದ ಸಮಯವನ್ನು ಯೋಚನೆ ಮಾಡಿ ನೋಡಿ ಅನೇಕರು ಕ್ರೈಸ್ತರಾಗಿರುದರಿಂದ ಕೊಲ್ಲಲ್ಪಟ್ಟರು ಅವರ ಆಸ್ತಿ ಅಂತಸ್ತು ಕಸಿದುಕೊಳ್ಳಲಾಗುತ್ತಿತ್ತು. ಅನೇಕರು ರೋಮಾಪುರದ ಸೆರೆಮನೆಯಲ್ಲಿ ಬಂಧಿತರಾದರು. ಕ್ರೈಸ್ತರಾಗಿರುವುದು ಒಂದು ಅಪಾಯದ ಸಂಗತಿಯಾಗಿತ್ತು. ಇಂಥದೆಲ್ಲದರ ಮಧ್ಯದಲ್ಲಿ ಅವಳು ನಾನು ಇನ್ನೊಬ್ಬರಿಗಾಗಿ ಜೀವಿಸಬೇಕು ಎಂದಿದ್ದಳು.

ಪ್ರೀತಿ ಬಹಳ ವ್ಯತ್ಯಾಸಕರವಾಗಿದೆ. ಅದರಲ್ಲಿ ಸಂದೇಹವೇ ಇಲ್ಲ ಇನ್ನೊಬ್ಬರ ಪರಿಸ್ಥಿತಿ ನಮ್ಮದೆಂದು ಭಾವಿಸಿ ಕಾಳಜಿ ವಹಿಸುವುದೇ ಪ್ರೀತಿ.

ಯೊಹಾನನು ಬರೆದ ಸುವಾರ್ತೆಯಲ್ಲಿ ಯೇಸು ಏನು ಹೇಳಿದನು ? (15:4-13) ನಿಮ್ಮಲ್ಲಿರುವುದು ಇನ್ನೊಬ್ಬರಿಗೆ ಕೊಡಿರಿ, ಇದು ಹಣದ ಬಗ್ಗೆ ಅಲ್ಲ ಆದರೆ ಸಮಯವಾಗಿದೆ. ಅಂದರೆ ಕಾಳಜಿ ತೋರಿಸುವುದು. ಅಂದರೆ ನಿಮ್ಮ ಹಂಚಿಕೊಳ್ಳುವ ಸಾಮರ್ಥ್ಯ. ಇನ್ನೊಬ್ಬರನ್ನು ಮನೋರಂಜಿಸುವುದು ನಮ್ಮ ಜೀವಿತವನ್ನು ಒಂದು ಒಳ್ಳೆಯ ಉದ್ದೇಶ ಮತ್ತು ಅರ್ಥವಿರುವುದಕ್ಕೆ ಸಮರ್ಪಿಸಬೇಕು. ತಬಿಥಾಳು ತನಗೊಸ್ಕರ ಇನ್ನೂ ಏನನ್ನು ಇಟ್ಟುಕೊಳ್ಳಲಿಲ್ಲ ಅವಳು ಕೊಡುತ್ತಾನೇ ಇದ್ದಳು. ಅವಳಲ್ಲಿ ಇನ್ನೊಬ್ಬರೊಟ್ಟಿಗೆ ಹಂಚಿಕೊಳ್ಳುವ ತೆರೆದ ಹೃದಯವಿತ್ತು. ಕೆಲವೊಂದು ಸಲ ನಾವು ಯೋಚಿಸುತ್ತೇವೆ ನಾನೇಕೆ ಇನ್ನೊಬ್ಬರ ತೊಂದರೆಗಳನ್ನು ಕೇಳಬೇಕು ನನಗೆ ನನ್ನದೇ ಆದ ಅನೇಕ ತೊಂದರೆಗಳಿವೆ ಎಂದು, ಆದರೆ ಅಥಕ್ಕೆ ಬೆಲೆ ಇದೆ. ಅವರ ತೊಂದರೆಗಳಲ್ಲಿ ಅವರನ್ನು ಮುಗುಳ್ನಗಿಸುವುದು, ಅವರ ಕಷ್ಟಗಳನ್ನು ಕೇಳಿಸಿಕೊಳ್ಳುವುದು, ಎಲ್ಲಾದಕ್ಕೂ ಬೆಲೆ ಇದೆ. ಅವರಲ್ಲಿ ನಿರೀಕ್ಷೆ ಇಲ್ಲದಿದ್ದಾಗ ನೀವು ಸತ್ಯವೇದ ತೆಗೆದು ಸ್ವಲ್ಪ ವಿಷಯಗಳನ್ನೂ ಭೋದಿಸಿದರೆ ಸಾಕು - ಅವರಿಗೆ ಅರ್ಥ ಮೂಡಿಸುತ್ತದೆ.

3) ಇನ್ನೊಬ್ಬರು ಬದುಕಬೇಕೆಂಬ ಅವಶ್ಯಕತೆ ಅವಳದಾಗಿತ್ತು :
ತಾನು ಪ್ರೀತಿ ಮಾಡಿದ ಜನಗಳ ಸಮುದಾಯ ಕಟ್ಟಿದರೂ ಸಹ ಅವಳಿಗೆ ಜನರ ಅವಶ್ಯಕತೆ ಇತ್ತು. ತನ್ನ ಜೀವನದಲ್ಲಿ ಯಾವುದೇ ರೀತಿಯ ಪಶ್ಚತಾಪ ಅವಳಿಗಿರಲಿಲ್ಲ. ಅವಳ ಜೀವನದಲ್ಲಿ ಸ್ವಾರ್ಥ ಇರಲಿಲ್ಲ.

ಅದಕ್ಕಾಗಿಯೇ ಅವಳು ಸತ್ತಾಗ ಜನರು ವಿಷಾದ ವ್ಯಕ್ತಪಡಿಸಿದರು. ಒಂದುವೇಳೆ ಅವಳು ಕಹಿತನವುಳ್ಳವಳಾಗಿದ್ದರೆ, ರೇಗುವವಳಾಗಿದ್ದರೆ, ಕೋಪವುಳ್ಳವಳಾಗಿದ್ದರೆ ಜನರು ಅವಳನ್ನು ಹಿಂತಿರುಗಿ ಪಡೆಯಲು ಬಯಸುತಿದ್ದಾರೆ ? ಆಸಕ್ತಿಯುಳ್ಳ ವಿಷಯವೆಂದರೆ, ನಾವು ಸತ್ತ ಮೇಲೆ ನಮ್ಮ ಬಗ್ಗೆ ಜನರು ಏನು ಯೋಚಿಸುತ್ತಾರೆಂಬುದನ್ನು ತಿಳಿದುಕೊಳ್ಳುವುದು. ನನ್ನ ಬಗ್ಗೆ ಜನರು ಏನು ಯೋಚಿಸುತ್ತಾರೆಂಬುದನ್ನು ನನ್ನ ಕಣ್ಣು ಒಂದು ನಿಮಿಷ ತೆಗೆದು ನೋಡಿ ಮತ್ತು ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಬಯಸುತ್ತೇನೆ. ಅದು ನಮ್ಮ ಜೀವನದ ಬಗ್ಗೆ ಬಹಳ ವಿಷಯಗಳನ್ನು ತೋರ್ಪಡಿಸುತ್ತದೆ. ಕೆಲವೊಮ್ಮೆ ನಮ್ಮ ಜೀವನದಲ್ಲಿ ಜನರು ಬೇಡವಾಗಿರುತ್ತಾರೆ. ನಾವು ರೋಷಗೊಳ್ಳುತ್ತೇವೆ ಮತ್ತು ಕ್ಷಮಿಸದವರಾಗಿರುತ್ತೇವೆ. ಕೆಲವೊಮ್ಮೆ ನಾವು ಇನ್ನೊಬ್ಬರನ್ನು ಕ್ಷಮಿಸುವುದಿಲ್ಲ ಯಾಕೆಂದರೆ ನಾವು ನಮ್ಮನ್ನು ನಾವು ಕ್ಷಮಿಸಿಕೊಳ್ಳಲು ಆಗುವುದಿಲ್ಲ. ಯಾವ ವಿಷಯಗಳಲ್ಲಿ ನಮ್ಮನ್ನು ನಾವು ಕ್ಷಮಿಸಿಕೊಳ್ಳಬೇಕಾಗಿದೆ ? ನಮ್ಮ ಜೀವನದಲ್ಲಿ ಮಾಡದೇ ಇರುವ ಕೆಲವು ವಿಷಯಗಳಿಗಾಗಿ ಮತ್ತು ಚೆನ್ನಾಗಿ ಮಾಡದೇ ಇರುವ ವಿಷಯಗಳಿಗಾಗಿ ನಮ್ಮನ್ನು ಕ್ಷಮಿಸಿಕೊಳ್ಳಬೇಕಾಗಿದೆ.

ಸಾವು ಜೀವನವನ್ನು ಮುಕ್ತಾಯಗೊಳಿಸುತ್ತದೆ ಆದರೆ ಸಂಭಂಧಗಳನ್ನೆಲ್ಲ. ಇವತ್ತು ತಬಿಥಾಳಿಂದ ಉತ್ತೇಜನೆಗೊಂಡಿದ್ದೇನೆ. ನಿಮ್ಮ ಸಮಯವನ್ನು ಚಿಂತೆಯಲ್ಲಿ ಮತ್ತು ಅನುಮಾನದಲ್ಲಿ ವ್ಯರ್ಥಮಾಡಿದ್ದೇವೆಂದು ನಿಮಗೆ ಮನವರಿಕೆಯಾಗಿದೆಯಾ ? ಸಾವು ಹರಡುವ ರೀತಿಯಲ್ಲಿ ಜನರು ವರ್ತಿಸುತ್ತಾರೆ. ಆದರೆ ಸಾವು ಸ್ವಾಭಾವಿಕವಾಗಿ ಆಗುತ್ತದೆ. ನಾವು ಮಾಡಬೇಕಾಗಿರುವ ಕೆಲಸವೇನೆಂದರೆ ಜೀವನ ನಮ್ಮಲ್ಲಿರುವ ತನಕ ಅವರಲ್ಲಿ ಶಾಂತಿಯನ್ನು ತುಂಬುವುದು ಮತ್ತು ಒಳ್ಳೆಯ ನೆನಪುಗಳನ್ನು ಕಟ್ಟುವುದು. ಯೇಸುವಿನಿಂದ ಉತ್ತೇಜನಕೊಂಡ ಪ್ರೀತಿಯಿಂದ ಅನೇಕ ಜನರ ಹೃದಯಗಳನ್ನು ಮುಟ್ಟಿ, ಆರೈಕೆಮಾಡಿದ ಮೇಲೆ ಈ ಜಗತ್ತನ್ನು ಬಿಡಿರಿ.

ಸವಾಲು :

ನಿಮ್ಮ ಕುಟುಂಬವನ್ನು ಇವತ್ತು ಪ್ರೊತ್ಸಾಹಿಸಿ.

ಈ ವಾರದಲ್ಲಿ ಸ್ವಲ್ಪ ಸಮಯವನ್ನು ತೆಗೆದುಕೊಂಡು

1) ನಿಮ್ಮ ಒಬ್ಬ ಸಹ ಪಾಠಿಯನ್ನು

2) ಒಬ್ಬ ಅಕ್ಕಪಕ್ಕದವನನ್ನು। ಳನ್ನು

3) ಸಂಭಂಧಿಯನ್ನು

4) ಒಬ್ಬ ಸ್ನೇಹಿತನನ್ನು

5) ಒಬ್ಬ ಅಪರಿಚಿತನನ್ನು ಪ್ರೋತ್ಸಾಹಿಸಿರಿ.

# ದಿನ 24 ಫಿಲಪ್ಪಿಯ ಸೆರೆಮನೆ ಕಾವಲುಗಾರ

ಅ.ಕೃ 16:16–40

ಪೌಲನು ಗಾರುಡಗಾತಿಯಾದ ಒಬ್ಬ ದೆವ್ವ ಹಿಡಿದ ದಾಸಿಯನ್ನು ಸಹಾಯಮಾಡಿ ದೆವ್ವದಿಂದ ಬಿಡಿಸಿದನು. ಇದರಿಂದ ಅವಳ ಯಜಮಾನನು ಪಟ್ಟಣದಲ್ಲಿ ಗಲಭೆಯನ್ನು ಹುಟ್ಟಿಸಿ ಪೌಲಸೀಲನನ್ನು ಬಹಳ ಪೆಟ್ಟು ಹೊಡಿಸಿ ಸೆರೆಮನೆಯೊಳಗೆ ಹಾಕಿಸಿದನು.

ಫಿಲಿಪ್ಪಿಯ ಒಬ್ಬ ಸೆರೆಮನೆ ಕಾವಲುಗಾರನಿಗೆ ಪೌಲಸೀಲರನ್ನು ಕಾಯಲು ನೇಮಿಸಿದರು. ಗಾಯಗಳಿಂದ ತುಂಬಿದ ಮತ್ತು ರಕ್ತದಿಂದ ನೆನೆದಿರುವ ಇವರನ್ನು ಅವನು ಒಳ ಸೆರೆಮನೆಯಲ್ಲಿ ಇರಿಸಿದನು. ಅವರನ್ನು ಸರಪಳಿಯಿಂದ ಕಟ್ಟಿದರು. ಪೌಲಸೀಲರು ದೇವರಿಗೆ ಕೀರ್ತನೆ ಮತ್ತು ಸ್ತೊತ್ರಗಾನಗಳನ್ನು ಹಾಡುತ್ತಿದ್ದರು, ಸೆರೆಮನೆಯ ಕಾವಲುಗಾರನು ಅವುಗಳನ್ನು ಕೇಳಿಸಿಕೊಳ್ಳುತ್ತಿದ್ದನು. ಭೋಧನೆ ಮತ್ತು ಆರಾಧನೆ ಮಾಡಲು ಎಂತಹ ಒಳ್ಳೆ ಸಮಯ ಮತ್ತು ಸ್ಥಳ ಆದಾಗಿತ್ತು.

- ಪೌಲಸೀಲರ ಶೋಧನೆಯನ್ನು ನೀವು ಹೇಗೆ ನೋಡುತ್ತೀರಿ ?
- ತನ್ನ ಜನರು ಇಂತಹ ಶೋಧನೆಗೆ ಒಳಗಾಗುವಂತೆ ದೇವರು ಏಕೆ ಮಾಡಿದನು.
- ದೇವರ ಕಾರ್ಯಮಾಡುವಾಗ ನೀವು ಶೋಧನೆಗೊಳಗಾದ ಸಮಯವನ್ನು ಯೋಚಿಸಿ ಮತ್ತು ಧ್ಯಾನಿಸಿರಿ.
- ಗಾಯಗೊಂಡ ಸೋತುಹೋಗಿರುವ, ನಿದ್ದೆ ಇಲ್ಲದ ಮತ್ತು ಬಹಳ ಅಸುರಕ್ಷಿತ ಸರಪಳಿಯಿಂದ ಬಂಧಿತವಾಗಿರುವ ಸಮಯದಲ್ಲಿಯೂ ಪೌಲ ಸೀಲರು ಕೀರ್ತನೆ ಹಾಡುವುದನ್ನು ಮತ್ತು ಪ್ರಾರ್ಥಿಸುವುದನ್ನು ನೋಡಿ ನಿಮಗೇನು ಅನಿಸುತ್ತದೆ ?
- ನಿಮ್ಮ ನೋವು ಮತ್ತು ಕಷ್ಟಗಳಲ್ಲಿಯೂ ಸಹ ಪ್ರಾರ್ಥನೆ ಮತ್ತು ಆರಾಧನೆ ಮಾಡುತ್ತೀರಾ ?
- ಯಾವುದಕ್ಕೊಸ್ಕರ ಪೌಲ ಸೀಲನು ಪ್ರಾರ್ಥನೆ ಮಾಡುತ್ತಿದ್ದರು ? ತಮ್ಮ ಸ್ವಾತಂತ್ರಕೋಸ್ಕರ ಪ್ರಾರ್ಥಿಸಿದ್ದಾರಾ ? ಹಾಗಿದ್ದಲ್ಲಿ ದೇವರು ಸರಪಳಿಯನ್ನು ಮುರಿದು ಸೆರೆಮನೆಯ ಬಾಗಿಲನ್ನು ತೆರೆದಾಗ ಅವರು ಯಾಕೆ ಹೋಗಲಿಲ್ಲ? ಮಹಾ ಪರಾತ್ಮರನಾದ ದೇವರು ಹೋಗಲು ಬಿಟ್ಟರೂ ಸಹ ಅವರು ಯಾಕೆ ಹೋಗಲಿಲ್ಲ ?
- ದೇವರು ಆ ದಿನ ಮಹಾತ್ಕಾರ್ಯವನ್ನು ಮಾಡಿದನು. ಆ ಮಹಾತ್ಕಾರ್ಯ ಯಾವುದು ? ಭೂಕಂಪವಾಗಿತ್ತಾ ? ಅದು ಅನ್ಯನಾಗಿದ್ದ ಸೆರೆಮನೆ ಕಾವಲುಗಾರನ ಕುಟುಂಬ ರಕ್ಷಣೆಹೊಂದುವ ಮಹಾತ್ಕಾರ್ಯವಾಗಿತ್ತು.

ಪೌಲಸೀಲರು ದೇವರ ಮಹತ್ಕಾರ್ಯವನ್ನು ಹೇಗೆ ಉಪಯೋಗಿಸಿಕೊಂಡರು ?

ಫಿಲಿಪ್ಪಯ ಕಾವಲುಗಾರನು ಕೇಳಿದ ಪ್ರಶ್ನೆಯೇನು ? (ವ. 29) ?

♦ ಪೌಲಸೀಲರ ಹತ್ತಿರ ಈ ಪ್ರಶ್ನೆಗೆ ಉತ್ತರವಿದೆ ಎಂದು ಕಾವಲುಗಾರನಿಗೆ ಹೇಗೆ ತಿಳಿದಿತ್ತು ?
1 ಪೌಲಸೀಲರು ಫಿಲಿಪ್ಪಿಯವರಿಗೆ ಏನನ್ನು ಭೋಧಿಸುತ್ತಿದ್ದರೆಂದು ತಿಳಿಯುವುದಕ್ಕೆ ವಚನ 17ರನ್ನು ಓದಿರಿ)

♦ ಪೌಲನ ಉತ್ತರ ಏನಾಗಿತ್ತು ?

♦ ದೇವರ ವಾಕ್ಯವನ್ನು ಕೇಳಿದ ಮೇಲೆ ಅವನು ಏನು ಮಾಡಿದನು ?

♦ ಅವನು ಏಕೆ ಅದನ್ನು ಮಾಡಿದನು ?

♦ ಅವನು ಮನಸ್ಸಾಂತರ ಹೊಂದಿದ ನಂತರದ ಭೇಟಿ (ಪೌಲಸೀಲರಿಗೆ) ಎಷ್ಟು ವ್ಯತ್ಯಾಸವಾಗಿತ್ತು.

♦ ಅವನು ಮತ್ತು ಅವನ ಕುಟುಂಬ ಆ ರಾತ್ರಿಯೇ ದೀಕ್ಷಾಸ್ನಾನ ಏಕೆ ಮಾಡಿಸಿಕೊಂಡರು ? ಒಳ್ಳೆಯ ಸಮಯ ಮತ್ತು ಸ್ಥಳಕ್ಕಾಗಿ ಅವರು ಏಕೆ ಕಾಯಲಿಲ್ಲ ? (ಭಾನುವಾರಂದು ಇಡೀ ಫಿಲಿಪ್ಪಿಯ ಸಭೆ ಒಟ್ಟಾಗಿ ಕೂಡುತ್ತಿದ್ದರು ಆದರೂ ಸಹ ಅವರು ಕಾಯಲಿಲ್ಲ)
ದೀಕ್ಷಾಸ್ನಾನ ಹೊಂದಲು ಸರಿಯಾದ ಸಮಯ ಯಾವುದು ?

♦ ಪೌಲಸೀಲರು ಆ ರಾತ್ರಿ ಯಾವುದಕ್ಕೋಸ್ಕರ ಪ್ರಾರ್ಥಿಸುತ್ತಿದ್ದರೆಂದು, ನೀವೇನು ಯೋಚಿಸುತ್ತೀರೀ ?

♦ ನಾವು ಜನರಿಗೆ ಹೇಗೆ ಸಾಕ್ಷಿಯಾಗಿ ಮತ್ತು ಭೊದನೆ ಮಾಡುತ್ತೇವೆ ? ನಾವು ರಕ್ಷಣೆಗೆ ಸಾಕ್ಷಿಯಾಗಿದ್ದೇವಾ ?

♦ ನಾವು ಯಾರಿಗಾಗಿ ಸಾಕ್ಷಿಯಾಗಿದ್ದೇವೆ ಮತ್ತು ಈ ದಿನ ಯಾರಿಗಾಗಿ ಪ್ರಾರ್ಥಿಸುತ್ತಿದ್ದೇವೆ ?

## ಅನ್ವಯ:

♦ ನೀವು ಯಾರಿಗಾಗಿ ಪ್ರಾರ್ಥಿಸುತ್ತಿದ್ದೀರೋ ಅಥವಾ ರಕ್ಷಣೆಗಾಗಿ ಅವರನ್ನು ಸಂಧಿಸಲು ಇಚ್ಛಿಸುತ್ತೀರೋ ಅವರ ಹೆಸರುಗಳನ್ನು ಬರೆಯಿರಿ

♦ ಅವರಿಗೆ ತಲುಪಲು ಅವಕಾಶ, ಧೈರ್ಯ ಮತ್ತು ಮಹಾತ್ಕಾರ್ಯಗಳನ್ನು ಕೊಡಬೇಕೆಂದು ದೇವರಲ್ಲಿ ಪ್ರಾರ್ಥಿಸಿರಿ.

# 25. ಅಪೊಲ್ಲೊಸನು

ಅಪೊಲ್ಲೊಸನು ಒಬ್ಬ ಭೋಧಕನು, ಧರ್ಮ ಸಮರ್ಥಕನು ನಾಯಕನು ಮತ್ತು ಅಪೋಸ್ತಲನಾದ ಪೌಲನ ಸ್ನೇಹಿತನಾಗಿದ್ದನು. ಅವನು ಐಗುಪ್ತದ ಅಲೆಕ್ಸಾಂಧ್ರಿಯದವನಾಗಿದ್ದನು. ಅದು ರೋಮಾಪುರದ ಎರಡನೇ ಅತಿಮುಖ್ಯ ಪಟ್ಟಣ ಮತ್ತು ಯಹೋದ್ಯರ ಜನಸಂಖ್ಯೆಯು ವೇಗವಾಗಿ ವೃದ್ಧಿಯಾಗುವ ಮಹಾ ನಗರವಾಗಿತ್ತು. ಅಪೊಲ್ಲೊಸನು ಪಂಡಿತನು, ವಾಕ್ಚಾತುರ್ಯವುಳ್ಳವನು. ಶಾಸ್ತ್ರಗಳಲ್ಲಿ ಪ್ರವೀಣನು ಆಗಿದ್ದನು ಮತ್ತು ಯೇಸುಕ್ರಿಸ್ತನ ಜೀವನ ಆತನ

ಶಿಲುಬೆಯ ಮರಣ ಮತ್ತು ಪುನರುತ್ಥಾನವನ್ನು ತಿಳಿದುಕೊಂಡ ಮೇಲೆ ಆತನು ಕರ್ತನ ಮಾರ್ಗದ ವಿಷಯದಲ್ಲಿ ಸಂಪೂರ್ಣ ಪರಣಿತಿಯನ್ನು ಹೊಂದಿದವನಾಗಿ, ಯೇಸುವಿನ ಬಗ್ಗೆ ಹಂಚಿಕೊಳ್ಳಲಾರಂಭಿಸಿದನು. ಅವನು ಶಾಸ್ತ್ರಗಳಲ್ಲಿ ಪ್ರವೀಣನೂ ಕರ್ತನ ಮಾರ್ಗದಲ್ಲಿ ಉಪದೇಶ ಹೊಂದಿದವನಾಗಿದ್ದನು. ಆಸಕ್ತ ಮನಸ್ಸುಳ್ಳವನಾಗಿದ್ದು ಯೇಸುವಿನ ಸಂಗತಿಗಳನ್ನು ಸೂಕ್ಷ್ಮವಾಗಿ ಹೇಳಿ ಉಪದೇಶಿಸಿದನು. ಉತ್ಸಾಹವುಳ್ಳ ಆತ್ಮವುಳ್ಳವನಾಗಿದ್ದನು. ಮತ್ತು ಅವನು ಸಭಾಮಂದಿರದಲ್ಲಿ ಧೈರ್ಯದಿಂದ ಭೋದಿಸುತ್ತಿದ್ದನು. ಅಲೆಕ್ಸಾಂದ್ರಿಯದಲ್ಲಿದ್ದ ಅವನ ಮನೆಯಿಂದ ದೂರ ದೇಶವಾಗಿರುವ ಎಫೆಸದಲ್ಲಿ ಅವನು ಯೇಸುವಿನ ಬಗ್ಗೆ ಭೋದಿಸುತ್ತಿದ್ದನು. ಅವನು ಕಲಿತ ನಿಪೂರ್ಣ ವ್ಯಕ್ತಿಯಾದರೂ ಸಹ, ದೀಕ್ಷಾಸ್ನಾನದ ಬಗ್ಗೆ ಅವರು ಸಂಪೂರ್ಣವಾಗಿ ಅರ್ಥಮಾಡಿಕೊಂಡಿರಲಿಲ್ಲ. ಸತ್ಯವೇದವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಅವನಿಗೆ ಇನ್ನೊಬ್ಬರ ಸಹಾಯ ಬೇಕಾಗಿತ್ತು. ಅಕ್ವಿಲ್ಲ ಮತ್ತು ಪುಸ್ಕಿಲ್ಲಳು ಅವನು ಸಭಾ ಮಂದಿರದಲ್ಲಿ ಮಾತಾಡುವುದನ್ನು ನೋಡಿದರು ಮತ್ತು ಅವನಿಗೆ ಮನೆಗೆ ಕರೆದುಕೊಂಡು ಹೋಗಿ ದೇವರ ಮಾರ್ಗವನ್ನು ಅವನಿಗೆ ಇನ್ನೂ ಸೂಕ್ಷ್ಮವಾಗಿ ವಿವರಿಸಿದರು.

ಸಮೂಹದಲ್ಲಿ ಅವನನ್ನು ತಿದ್ದದೆ ಅಥವಾ ಎಲ್ಲರ ಮುಂದೆ ಅವನ ಭೋಧನೆಗೆ ಸವಾಲೊಡ್ಡದೇ ಅವರು ಅವನನ್ನು ಒಳ್ಳೆಯ ರೀತಿಯಿಂದ, ಪ್ರೀತಿ ಅನ್ಯೂನ್ಯತೆಯಿಂದ ಅವನನ್ನು ಪ್ರೋತ್ಸಾಹಿಸಿದರು.

ಅವರು ಅಪೊಲ್ಲೊ ಸನಿಗೆ ದೇವರ ವಾಕ್ಯವನ್ನು ಸೂಕ್ಷವಾಗಿ ವಿವರಿಸಿದರು ಈ ದಂಪತಿ ಆ ಭೋಧಕನನ್ನು ಮನೆಗೆ ಕರೆದುಕೊಂಡು ಹೋಗಿ ಟೀಕಿಸಲಿಲ್ಲ. ಅವರು ತನ್ನ ಅಕ್ಕಪಕ್ಕದ ಮನೆಗೆ ಹೋಗಿ ಅಪೊಲ್ಲೊಸನು ಹೇಗೆ ತಪ್ಪಾಗಿ ಅರ್ಥೈಸಿಕೊಂಡಿದ್ದಾನೆ ಎಂದು ಗಾಳಿಮಾತಾಡಲಿಲ್ಲ. ಆದರೆ ಅವರು ನೇರವಾಗಿ ಅವನ ಹತ್ತಿರ ಹೋಗಿ ಸಮಯವನ್ನು ಕಳೆದರು, ಪ್ರೀತಿಯಿಂದ ಅವನನ್ನು ಭೇಟಿಯಾಗಿ, ಸುವಾರ್ತಸೇವೆಗೆ ಉತ್ತಮವಾದ ಸ್ನೇಹಿತ ಮತ್ತು ಸಹಪಾಠಿಯನ್ನು ಕಂಡುಕೊಂಡರು. ಅಪೊಲ್ಲೊಸನು ಅಕ್ವಿಲ್ಲ ಮತ್ತು ಪ್ರಿಸ್ಕಿಲ್ಲಳಿಂದ ಕಲಿತುಕೊಂಡನು ಮತ್ತು ಅವನು ಇನ್ನೂ ಹೆಚ್ಚಾದ ಉತ್ಸಾಹ ಮತ್ತು ಸೂಕ್ಷತೆಯಿಂದ ಭೋದಿಸಲಾರಂಭಿಸಿದನು.

ಉತ್ತಮ ಸೇವೆಗಾಗಿ ಬಲ ಮತ್ತು ಪ್ರೊತ್ಸಾಹಗೊಳ್ಳುವ ರೀತಿಯಲ್ಲಿ ಅವನು ತಿಕ್ಷಣ ಪಡೆದುಕೊಂಡನು.

ನಮ್ಮ ಸಭೆಗಳಲ್ಲಿ ನಾವು ಪ್ರೀತಿ ಅನ್ಯೂನ್ಯತೆಯುಳ್ಳ ಮಾರ್ಗದರ್ಶನ ನೀಡುವ ಆಯ್ಕೆ ಮಾಡಿಕೊಂಡರೆ ಹೇಗಿರುತ್ತದೆ ?

ಜನರ ಜೀವನದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡು ಜೊತೆಯಾಗಿರುವಂತಹ ಆಯ್ಕೆಯನ್ನು ಮಾಡಿಕೊಳ್ಳಿರಿ.

- ಅಪೊಲ್ಲೊಸನಿಂದ ಕಲಿಯಬಹುದಾದ ಉತ್ತಮವಾದ ಗುಣಗಳು ಯಾವುವು ?
- ನಿಮ್ಮಿಂದ ತಪ್ಪಾದಾಗ, ಇನ್ನೊಬ್ಬರಿಂದ ತಿದ್ದುಪಡಿಗೆ ಪಡೆಯಲು ದೀನಭಾವವುಳ್ಳವರಾಗಿದ್ದೀರಾ ?
- ನಿಮ್ಮ ತಪ್ಪಿಗೆ ಸಿಗುವ ತಿದ್ದುಪಡಿಗೆ ದೀನ ಹೃದಯವುಳ್ಳವರಾಗಿದ್ದೀರಾ ?
- ನೀವು ಧೈರ್ಯವಂತರಾಗಿ ಅಪೊಲ್ಲೊಸನ ಹಾಗೆ ಸುವಾರ್ತೆಯನ್ನು ಸಾರುತ್ತೀರಾ ?
- ಅಪಾಯದಲ್ಲಿ ಅಪೊಲ್ಲೊಸನು ಹೇಗೆ ಸಹಾಯವುಳ್ಳವನಾಗಿದ್ದನು (ವ 27, 28)
- ನಿಮ್ಮ ಕುಟುಂಬ ಸಭೆಯಲ್ಲಿ ನೀವು ಉತ್ತಮವಾದ ಸಹಾಯ ಮಾಡುವವರಾಗಿದ್ದೀರಾ

ಇನ್ನೂ ಹೆಚ್ಚಾಗಿ ಹೇಗೆ ನಿಮ್ಮ ಕುಟುಂಬ ಸಭೆಗೆ ಸಹಾಯ ಮಾಡಬಹುದೆಂದು ಇತರರೊಂದಿಗೆ ಮಾತಾಡಿರಿ.

ಪ್ರಾರ್ಥನೆ :

ತಂದೆಯಾದ ದೇವರೆ, ನಾವು ಒಬ್ಬರಿಗೊಬ್ಬರು ಕರುಣೆಯುಳ್ಳವರಾಗಿರಲು ಸಹಾಯಮಾಡಿರಿ ಇದರಿಂದ ನಾವೆಲ್ಲರೂ ಪ್ರೀತಿಯಿಂದ ಸತ್ಯಮಾಡುವವರಾಗಿರಬೇಕು. ಪ್ರೋತ್ಸಾಹ ನೀಡುವುದರ ಮೂಲಕ ಒಬ್ಬರಿಗೊಬ್ಬರು ತಿದ್ದಿಕೊಳ್ಳಬೇಕು. ನಾವೆಲ್ಲರು ಒಬ್ಬರಿಗೊಬ್ಬರು ಸಮರ್ಥಿಸಿಕೊಂಡು ಕಾಳಜಿ ಪ್ರೀತಿಯಿಂದ ತಿದ್ದಿಕೊಳ್ಳಲು ಸಹಾಯ ಮಾಡು. ದೀನಭಾವದಿಂದಿದ್ದು ತಿದ್ದುವಿಕೆಯನ್ನು ಸ್ವೀಕರಿಸಿಕೊಳ್ಳುವಂತೆ ಸಹಾಯಮಾಡಿರಿ ಮತ್ತು ನನ್ನ ಕುಟುಂಬ ಸಭೆಯವರಿಗೆಲ್ಲ ನಾನೊಬ್ಬ ಅದ್ಭುತ ಸಹಾಯಕನಾಗಿರುವಂತೆ ನನಗೆ ದಯವಿಟ್ಟು ಮಾರ್ಗದರ್ಶನ ಕೊಡಿರಿ ಆಮೆನ್.

## 26. ತುಖಿಕನು – ಒಬ್ಬ ಪ್ರೀಯ ಸಹೋದರ

ಹೊಸ ಒಡಂಬಡಿಕೆಯಲ್ಲಿ ತುಖಿಕನು ಪೌಲನ ಸಂಗಡಿಗರಲ್ಲಿ ಒಬ್ಬನಾಗಿದ್ದನು. ಅವನ ಹೆಸರು 8, 5 ಸಲ ಬರೆಯಲಾಗಿದೆ (ಅ. ಕನ 20:4 : ಕೊಲೊಸ್ಸೆ 4:7 : ಎಫೆಸ 6:21, 2 ತಿಮೊಥಿ 4:12, ತೀತನಿಗೆ 3:12)

ಮೂರನೆಯ ಸುವಾರ್ತೆ ಪ್ರಯಾಣದಲ್ಲಿ ತುಖಿಕನು ಪೌಲನೊಂದಿಗೆ ಸೇರಿಕೊಂಡನು (ಅ. ಕೃ. 18:23 – ಅ. ಕೃ 20:4) ಇವನ ಜೊತೆಗೆ ಇನ್ನೂ ಆರು ಜನ ಗಂಡಸರು (ಅ.ಕೃ 20:4) ಇದ್ದರು ಅವರು ಯಾರೆಂದರೆ ಸೋಪತ್ರನೂ, ಅರಿಸ್ತಾರ್ಕನೂ, ಸೆಕುಂದನು, ಗಾಯನು, ತಿನೋಥೆಯನು ಮತ್ತು ತ್ರೊಫಿಮನೂ. ತುಖಿಕನು ಸಭೆಯವರಿಗೆ ಪ್ರೋತ್ಸಾಹಿಸುತ್ತಾ ಬಲಪಡಿಸುತ್ತಾ ಪೌಲನ ಜೊತೆ ಯೆರೋಸಲೇಮಿನವರೆಗೂ ಪ್ರಯಾಣಮಾಡಿದನು. ತುಖಿಕನಿಗೆ ಇದೊಂದು ಅತಿ ದೊಡ್ಡ ಒಪ್ಪಂದವಾಗಿತ್ತು. ಅವನು ಈ ಅಪಾಯಕಾರಿ ಸುವಾರ್ತೆ ಪ್ರಯಾಣಕ್ಕೆ ಹೋಗಲು

ನಿರ್ಧಾರಮಾಡಿ ಅವನು ತನ್ನ ಕುಟುಂಬ, ಜನ ಮತ್ತು ಪಟ್ಟಣವನ್ನು ಬಿಟ್ಟು ದೂರ ಸುವಾರ್ತೆ ಸಾರಲು ಇಚ್ಛೈಸಿದನು.

ಜೀವನದ ಈ ಸಮಯದಲ್ಲಿ ದೇವರ ಜೊತೆಗಿರುವ ನಿಮ್ಮ ಒಪ್ಪಂದ ಹೇಗಿದೆ ?
ತುಖಕನ ಪರಿಸ್ಥಿತಿಯಲ್ಲಿ ನಿಮ್ಮನ್ನು ನೀವು ಇಟ್ಟುಕೊಂಡು ನೋಡಿರಿ. ಪೌಲನ ಜೊತೆಗೆ ಹೋಗುವುದು ಅಪಾಯಕಾರಿ ಎಂದು ಗೊತ್ತಿದ್ದರೂ ? ನಾನು ಹೋಗುತ್ತಿದ್ದೇನಾ ? ದೇವರ ರಾಜ್ಯವನ್ನು ಕಟ್ಟಲು ನಾನು ಯಾವ ಸುವಾರ್ತಾ ಪ್ರಯಾಣಗಳನ್ನು ಬೆಳೆಸಿದೆನು ? ನಾನು ಸಭೆಯ ಮುಖ್ಯ ನಾಯಕನಾಗಿಲ್ಲದಿದ್ದರೂ ಬೇರೆ ಪಟ್ಟ ಣಗಳಿಗೆ ಹೋಗಿ ದೇವರ ಸಭೆಯನ್ನು ಕಟ್ಟಲು ಮತ್ತು ಸೇವೆ ಮಾಡಲು ಮುಂದಾಗಿದ್ದೇನೆಯೇ ? ಈ ಸಮಯದಲ್ಲಿ ನಾನು ಸುವಾರ್ತಾ ಪ್ರಯಾಣಕ್ಕೆ ಹೋಗಲು ಸಿದ್ದನಾಗಿದ್ದೇನೆಯೇ ? ದೇವರು ಎಲ್ಲಿಗೆ ನನ್ನನ್ನು ಕರೆಯುತ್ತಿದ್ದಾನೆ ?

ಅಪೊಸ್ತಲನಾದ ಪೌಲ ಮತ್ತು ವೈದ್ಯನಾಗಿರುವ ಲೂಕನಂತಹ ಅದ್ಭುತ ವ್ಯಕ್ತಿಗಳೊಂದಿಗೆ ಸಹಪಾಠಿಯಾಗಿರಲು ತುಖಿಕನಿಗೆ ಬಹಳ ಉತ್ಸಾಹದ ಸಂಗತಿಯಾಗಿರಬಹುದಿತ್ತು. ಒಬ್ಬರಿಗೊಬ್ಬರು ಈ ಸಹೋದರರು ಹೇಗೆ ಪರಿಣಾಮಕಾರಿಯಾಗಿದ್ದಾರೆಂಬುದು ಯೋಚಿಸಿರಿ.

ನಾನು ಎಂತಹ ಜನಗಳ ಸಹವಾಸ ಮಾಡುತ್ತಿದ್ದೇನೆ ? ಅವರು ನನ್ನ ಮೇಲೆ ಹೇಗೆ ಪರಿಣಾಮ ಬೀರುತ್ತಿದ್ದಾರೆ ?
ಎಫೆಸ 6:21-22 ಮತ್ತು ಕೊಲೊಸ್ಸೆ 4:7-9ರನ್ನು ಓದಿರಿ.

ಪೌಲನು ಇನ್ನೊಬ್ಬ ಸಹೋದರನ ಜೊತೆಗೆ ಸೆರೆಮನೆಯಲ್ಲಿದ್ದಾನೆ. ಸೆರೆಮನೆಯಲ್ಲಿದ್ದ ಪೌಲನು ಮತ್ತು ಅವನ ಸಂಗಡಿಗರ ಬಗ್ಗೆ ಹೇಳಲು ಮತ್ತು ಅವರನ್ನು ಪ್ರೋತ್ಸಾಹಿಸಬೇಕೆಂಬ ಸಂದೇಶವನ್ನು ತಲುಪಿಸಲು ತುಖಿಕನಿಗೆ ಸಂದೇಶಕಾರನಾಗಿ ಬೇರೆ ಸಭೆಗಳಿಗೆ ಕಳುಹಿಸಲಾಯಿತು. ಅವನು ನಂಬಲಾರ್ಹ ಮತ್ತು ಭರವಸೆಯ ವ್ಯಕ್ತಿಯಾಗಿದ್ದನು.

ತುತಿತನ ಹೆಸರು ಇಲ್ಲಿ ಗೋಚರವಾಗಿರುವುದು ತೋರಿಸುತ್ತದೇನೆಂದರೆ ಹಿಂದಿನ ಸಭೆಗಳ ಸಮಯದಲ್ಲಿ ಅವನೊಬ್ಬ ಭಕ್ತಿಯುಳ್ಳ ವ್ಯಕ್ತಿಯರಲೊಬ್ಬನಾಗಿದ್ದನು ಎಂದು ನಾನು ಹೇಗೆ ಸೇವೆಮಾಡುತ್ತಿದ್ದೇನೆ ? ನನಗೆ ಏನು ತಡೆಯಾಗಿದೆ ? ಆ ತಡೆ ಯಾರಾದರು ವ್ಯಕ್ತಿಯಾ ಅಥವಾ ನಾನು ಈ ತಡೆಯಾಗಿದ್ದೇನಾ ?

ಹಲವಾರು ಸಣ್ಣಪುಟ್ಟ ವಿಷಯಗಳಲ್ಲಿ ನಾವು ಸೇವೆ ಮಾಡಬಹುದು. ಮತ್ತೊಬ್ಬರೊಂದಿಗೆ ಪ್ರಾರ್ಥಿಸುವುದು, ಇನ್ನೊಬ್ಬರಿಗೆ ಭೇಟಿಯಾಗುವುದು, ಪ್ರೋತ್ಸಾಹಿಸುವುದು, ಕಾಯಿಲೆಯಲ್ಲಿರುವವರಿಗೆ ಸೇವೆ ಮಾಡುವುದು, ದುಃಖದಲ್ಲಿರುವವರಿಗೆ ಸಮಾಧಾನ ಪಡಿಸುವುದು ಊಟ ತಯಾರಿಸುವುದು, ಇತರರಿಗೆ ಮನೆಗೆ ಆಹ್ವಾನಿಸುವುದು, ಸಭೆಯಲ್ಲಿ ಕೂಡುವ ಸ್ಥಳಗಳನ್ನು ತೋರಿಸುವುದು, ಸಭೆಯ ತಯಾರಿಯಲ್ಲಿ ಸಹಾಯಮಾಡುವುದು, ಅಲಂಕರಿಸುವುದು ಇತ್ಯಾದಿ. ಈ ದಿನದಿಂದಲೇ ಸೇವೆ ಮಾಡಲು ಶುರುಮಾಡಿರಿ.

ಇನ್ನೊಂದು ಪಟ್ಟಣಕ್ಕೆ ಅಥವಾ ಸ್ಥಳಕ್ಕೆ ಸುವಾರ್ತಾ ಪ್ರಯಾಣಕ್ಕೆ ಹೋಗಿರಿ (ಒಂದುವಾರ, ಒಂದು ತಿಂಗಳು, ಒಂದು ವರ್ಷ – ನೀವೇ ಆರಿಸಿಕೊಳ್ಳಿರಿ) ಇನ್ನೊಬ್ಬರಿಗೆ ಆಹ್ವಾನಮಾಡಲು ಮತ್ತು ಇತರ ಸಹೋದರ ಸಹೋದರಿಯರನ್ನು ಬಲಪಡಿಸಿರಿ.

## 27. ತೀತನು

ಪರಿಚಯ : ತೀತನು ಒಬ್ಬ ಅನ್ಯನಾಗಿದ್ದನು (ಗ್ರೀಕನು). ಪೌಲನು ಮಾನಸಾಂತರ ಪಡಿಸಿದವರಲ್ಲಿ ಒಬ್ಬನಾಗಿದ್ದನು ಮತ್ತು ಪೌಲನ ಸುವಾರ್ತೆ ಸೇವೆಯಲ್ಲಿ ಅತಿ ಮುಖ್ಯ ಸಹಾಯಕವಾಗಿದ್ದನು. ಕಷ್ಟಕರವಾದ ಕೆಲಸಗಳಿಗೆ ಮತ್ತು ಆತ್ಮಿಕ ಆಧಾರಕ್ಕೆ, ಪೌಲನು ಭರವಸೆ ಇಟ್ಟ ಅತೀ ಮುಖ್ಯ ಮನುಷ್ಯರಲ್ಲಿ ಆತನು, ತಿಮೊಥೆಯನು ಮತ್ತು ಇನ್ನೂ ಕೆಲವರಾಗಿದ್ದರು.

ಮುಖ್ಯವಾದ ಘಟನೆಗಳು : ಪೂರ್ವ ಬದಲಾವಣೆ

- ಗಲಾತ್ಯ 2:1–3, ಪೌಲನಿಗೆ ಜೊತೆಗಾರನಾಗಿ ಯೆರೊಸಲೇಮಿನಲ್ಲಿ ಅನ್ಯರ ಮೇಲಿರುವ ದೇವರ ಕೃಪೆಗೆ ಉದಾಹರಣೆಯಾದನು.
- 2. ಕೊರಿಂಥೆ 8:16–18

ತನ್ನ ಪತ್ರಿಕೆಗಳನ್ನು ಕೊರಿಂಥ ಸಭೆಗೆ ರವಾನೆ ಮಾಡಲು ಪೌಲನು ಆರಿಸಿಕೊಂಡ ಸ್ವಂತ ಪ್ರತಿನಿಧಿಯಾಗಿದ್ದನು.

- ತೀತನಿಗೆ 1:4–5 ಸಭೆಯನ್ನು ಕಟ್ಟಲು ಮತ್ತು ಮಾರ್ಗದರ್ಶನ ನೀಡಲು ಕ್ರೇತ ದ್ವೀಪದಲ್ಲಿ ತೀತನನ್ನು ಬಿಟ್ಟರು.
- 2 ತಿಮೋಥಿ 4:10 ದಲ್ಮಾತ್ಯದಲ್ಲಿ ಸೇವೆ ಮಾಡುವುದನ್ನು ತೋರಿಸುತ್ತದೆ.

### ಯೋಚಿಸಬೇಕಾದ ಪ್ರಶ್ನೆಗಳು :

1. ಮಾನಸಾಂತರ ಹೊಂದಿದ ಬೇರೆ ಅನ್ಯರನ್ನು ಬಿಟ್ಟು, ತೀತನಿಗೆ ಮಾತ್ರ ಪೌಲನು ಯೆರೊಸಲೇಮಿನಲ್ಲಿ ಜೊತೆಗಾರನಾಗಿ ಏಕೆ ಆರಿಸಿಕೊಂಡನು.
2. ಕೊರಿಂಥ ಸಭೆಗೆ ಪೌಲನು ಸವಾಲುಗಳನ್ನು ನೀಡುವುದನ್ನು ಪರಿಗಣಿಸಿದರೆ (ಪತ್ರಿಕೆಗಳ

ಮೂಲಕ) ಪತ್ರಿಕೆಗಳನ್ನು ರವಾನಿಸಲು ಮತ್ತು ಪ್ರತಿಕ್ರಿಯೆಯನ್ನು ಹಿಂತಿರುಗಿಸಲು ಪೌಲನು ತೀತನನ್ನೇಕೆ ಭರವಸೆಯಿಂದ ಆರಿಸಿಕೊಂಡನು ?

3. ಕ್ರೇತದಲ್ಲಿ ಇರಿಸಲು ಪೌಲನು, ತೀತನಿಗೆ ಏಕ ನಂಬಿದನು ?

4. ಪೌಲನು ಮತ್ತು ತೀತನ ಮಧ್ಯದಲ್ಲಿರುವ ಸಂಭಂಧವನ್ನು ಹೇಗೆ ವಿವರಿಸುತ್ತೀರಿ ?

5. ಸಾಮರ್ಥ್ಯವುಳ್ಳ ಮುಖ್ಯನಾಯಕನಾಗಲು ಕಾರಣವಾದ ತೀತನಲ್ಲಿರುವ ಅತ್ಯದ್ಭುತವಾದ ಗುಣಗಳನ್ನು ಬರೆಯಿರಿ.

ಅನ್ವಯ : ಆತ್ಮೀಕವಾಗಿ ಸತ್ತುಹೋಗಿರುವ ಪ್ರಪಂಚಕ್ಕೆ ದೇವರ ಬದಲಾವಣೆಯನ್ನು ಗೋಚರಪಡಿಸಲು ನಾವು ಹೇಗೆ ಉದಾಹರಣೆಯಾಗಿರಬಹುದು ?
ತೀತನಲ್ಲಿರುವ ಗುಣಗಳನ್ನು ಅನುಸರಿಸಲು ಇಚ್ಛಿಸುತ್ತೀರಾ ?
ಸುವಾರ್ತೆ ಸೇವೆಗೆ ಹೇಗೆ ನಾವು ಸಾಧನವಾಗಿರಬಹುದು ?

## 28. ಸೀಲನು – ಪ್ರತಿಯೊಂದು ಬಿರುಗಾಳಿಯಿಂದ ಬಲವಾಗಿ ಬೆಳೆದನು

ಅಪೊಸ್ತರ ಕೃತ್ಯಗಳು 14:22 ರಲ್ಲಿ ನಾವು ಸೀಲನನ್ನು ಭೇಟಿಯಾಗುತ್ತೇವೆ. ಅವನು ಯೇಸುಕ್ರಿಸ್ತನ ಒಬ್ಬ ಉತ್ಸಾಹಭರಿತ ನಾಯಕನಾಗಿದ್ದನು. ಸಭೆಯು ಅನುಮಾನವೆಂಬ ಬಿರುಗಾಳಿಯಲ್ಲಿ ಇತ್ತು (ತಪ್ಪಾದ ಭೋಧನೆ) ಯೆಹೂದ್ಯ ಕ್ರೈಸ್ತರಿಂದ ಹರಡಿದ ಅನುಮಾನವೆಂಬ ಬಿರುಗಾಳಿಯಲ್ಲಿ ಸಭೆ ಇತ್ತು (ತಪ್ಪಾದ ಭೋದನೆ) ಅವರು ಅನ್ಯ ಜನರು ರಕ್ಷಣೆ ಹೊಂದಲು ಸುನ್ನತಿ ಮಾಡಿಸಿಕೊಳ್ಳಬೇಕೆಂದು ಬಲವಂತಮಾಡುತ್ತಿದ್ದರು.

ಪೌಲ ಮತ್ತು ಬಾರ್ನಬಸರ ಜೊತೆಗೆ ಸಭೆಯ ಅಭಿಪ್ರಾಯವನ್ನು ಅಂತಿಯೊಕ್ಯ ಸಭೆಗೆ ವರ್ಗಾಯಿಸಲು ಸೀಲನನ್ನೂ ಸಹ ಆರಿಸಿಕೊಳ್ಳಲಾಯಿತು.

ಮತ್ತು ವಚನ 30–32 ಹೇಳುವ ಪ್ರಕಾರ ಅಂತಿಯೊಕ್ಯದ ಸಹೋದರ ಸಹೋದರಿಯರನ್ನು ಪ್ರೋತ್ಸಾಹಿಸಿ ಬಲಪಡಿಸಲು ದೇವರು ಅವರನ್ನು ಅದ್ಭುತವಾದ ಪ್ರವಾದಿಯ ಹಾಗೆ ಉಪಯೋಗಿಸಿಕೊಂಡರು. (ಮೊದಲನೇ) ಹಿರಿಯ ಸಭೆಯಲ್ಲಿ ಸೀಲನು ಜನಪ್ರಿಯವಾದಮುಖ್ಯ ನಾಯಕರಲ್ಲಿ ಅವನಾಗಿರಲಿಲ್ಲ. ಇಲ್ಲಿಯವರೆಗೂ ಅವನೊಬ್ಬ ಹಾಡದೇ ಇದ್ದ ದೇವರ ಸೇವಕನಾಗಿರಬಹುದು. ಆದರೆ ನಾವು ಇಲ್ಲಿ ನೋಡುತ್ತೇವೆನೆಂದರೆ ಅವನು ಕೆಳಸ್ಥಾನದಲ್ಲಿದ್ದರೂ. ದೇವರ ಸೇವೆ ಮಾಡಲು ಇಚ್ಛಿಸುತ್ತಾನೆ ಮತ್ತು ದೇವರ ಕಾರ್ಯವನ್ನು ಯಶಸ್ವಿಗೊಳಿಸುವಲ್ಲಿ ಪೌಲಬಾರ್ನಬರೊಂದಿಗೆ ಸಹಯೋಗಿ ಯಾಗಿದ್ದನು. ಸೀಲನ ಹೃದಯವನ್ನು ನೀವು ನೋಡಿದ್ದೀರಾ? ಸ್ಥಾನಮಾನದ ಬಗ್ಗೆ ಕಾಳಜಿ ವಹಿಸದೆ, ಮನುಷ್ಯರ ಮೇಲೆ ಗುರಿಯಿಡದೇ ದೇವರನ್ನು ಗುರಿಯಾಗಿಟ್ಟುಕೊಂಡನು. ದೇವರ ರಾಜ್ಯವು ಅವನ ಜೀವನದಲ್ಲಿ ಮೊದಲನೆಯ ಸ್ಥಾನವನ್ನು

ಹೊಂದಿತ್ತು (ಮತ್ತಾಯ 6:33) ಅವನು ತನ್ನ ಮೂಲಕ ಒಳ್ಳೆಯದನ್ನು ಕೊಡುತ್ತಿರುವುದನ್ನು ನೋಡುತ್ತೀರಾ ಅಥವಾ ಬೇರೆಯವರ ಜೊತೆ ಸುಮ್ಮನೆ ಹರಟೆಹೊಡೆಯುವುದು ನೋಡುತ್ತೀರಾ? ಇದರ ಬಗ್ಗೆ ಯೋಚಿಸಿರಿ. ನೀವು ನಿಮ್ಮ ಸಭೆಯ ಸಹೋದರ ಸಹೋದರಿಯರನ್ನು ಹೇಗೆ ಪ್ರೋತ್ಸಾಹಿಸಿ ಬಲಪಡಿಸುತ್ತೀರೀ ? ಸೀಲನ ಹಾಗೆ ನಮ್ಮ ಜೀವನದಲ್ಲಿ ಮತ್ತು ಇತರರ ಜೀವನದಲ್ಲಿ ಬರುವ ಬಿರುಗಾಳಿಯಲ್ಲಿ ದೃಢವಾಗಿ ನಾವು ನಿಂತುಕೊಳ್ಳುತ್ತೇವಾ ? ಈ ಕಥೆ ಇಲ್ಲಿಯೇ ಮುಗಿಯುವುದಿಲ್ಲ. ಪೌಲನ ಎರಡನೆ ಸುವಾರ್ತೆ ಯಾತ್ರೆಗೆ ಅವನಿಗೆ ಸಹಪಾಠಿಯಾಗಲು ಸೀಲನನ್ನು ಆಯ್ಕೆಮಾಡಿಕೊಳ್ಳಲಾಗಿತ್ತು. ಅಪೊಸ್ತರ ಕೃತ್ಯಗಳು 15:40ರಲ್ಲಿ ಸೀಲನು ದೇವರ ವಾಕ್ಯ ಬೋದನೆಯಲ್ಲಿ ಪೌಲನ ಹಾಗೆಯೇ ದೃಢವಾಗಿದ್ದನು.

ಅ. ಕೃ. 16:22-34

ಫಿಲಿಪ್ಪ ಪಟ್ಟಣದಲ್ಲಿ ಮತ್ತೊಂದು ಶೋಧನೆಯ ಬಿರುಗಾಳಿಯ ಕುರಿತಾಗಿ ನಾವು ಇಲ್ಲಿ ಓದುತ್ತೇವೆ. ಇಲ್ಲಿ ಅಪೊಸ್ತರನ್ನು ಹೊಡೆದು ಗಾಯಗೊಳಿಸಿ ಸೆರೆಮನೆಯಲ್ಲಿ ಹಾಕಿದರು. ದೇವರನ್ನು ದೂಷಿಸಿದ ಪೌಲಸೀಲ ಕೀರ್ತನೆ ಹಾಡುವುದು ಮತ್ತು ಪ್ರಾರ್ಥಿಸುವುದನ್ನು ನಾವು ಇಲ್ಲಿ ನೋಡುತ್ತೇವೆ (ಅ.ಕೃ. 17:4-5)

ಅವರು ಬೇರೆಯ ದೇಶಕ್ಕೆ ಓಡಿಹೋದರು, ಆದರೂ ಅಲ್ಲಿಯೂ ಸಹ ವಿರೋಧಿಗಳನ್ನು ಎದುರುಗೊಂಡರು (ಅ.ಕೃ. 17:10-14) ಕೊರಿಂಥೆಯಲ್ಲಿಯೂ ಸಹ ಯೆಹೊದ್ಯರ ದೂಷಣೆಗೆ ಒಳಗಾದರು (ಅ.ಕೃ. 18:5-8) ಈ ಎಲ್ಲಾ ಬಿರುಗಾಳಿಯಲ್ಲಿಯೂ, ಯೇಸುವನ್ನು ದೊಡ್ಡದಾಗಿ ಮತ್ತು ಅವನ ಕಾರ್ಯ ಈ ಬಿರುಗಾಳಿಗಿಂತಲೂ ಅದ್ಭುತವಾಗಿದೆ ಎಂದು ಸೀಲನು ನೋಡುತ್ತಾನೆ.

ಪ್ರತಿಯೊಂದು ಬಿರುಗಾಳಿಯಲ್ಲಿಯೂ, ದೈಹಿಕ ನೋವು ರಕ್ತ ಮತ್ತು ವ್ಯಥೆಯಲ್ಲಿ ಇರದೆ, ಅನೇಕ ಆತ್ಮಗಳನ್ನು ಪಡೆದುಕೊಂಡ ಜಯದಲ್ಲಿ ಸಂತೋಷಪಡುವವನಾಗಿದ್ದನು.

ನಮ್ಮ ಜೀವನದಲ್ಲಿ ಬರುವ ಶೋಧನೆ ಮತ್ತು ಬಿರುಗಾಳಿಗಳಿಗೆ ನಮ್ಮ ಪ್ರತಿಕ್ರಿಯೆ ಹೇಗಿರುತ್ತದೆ? ನಾವು ದೂಷಣೆಯ ಆಟವನ್ನಾಡುತ್ತೇವಾ ?

ವಚನಗಳಲ್ಲಿ ಸೀಲನ ಬಗ್ಗೆ ಹೆಚ್ಚಾಗಿ ಬರೆದಿಲ್ಲ ಆದರೆ ಬಂದು ವಚನದ ಹೊರತು ಯಾವುದೆಂದರೆ ! ಪೇತ್ರ 5:12ರಲ್ಲಿ ಹೇಳುವ ಪ್ರಕಾರ ಪೇತ್ರನು ಅವನನ್ನು ನಂಬಿಗಸ್ಥ ಸಹೋದರನೆಂದು ಕರೆಯುತ್ತಾನೆ.

ಗಮನಿಸಬೇಕಾದ ವಿಷಯವೆಂದರೆ ದೇವರು ತಿಳಿಯದ ಮತ್ತು ಹಾಡದೇ ಇರುವ ಸೀಲನಂತಹ ವ್ಯಕ್ತಿಗಳನ್ನು ತನ್ನ ಮಹಿಮೆಗಾಗಿ ಉಪಯೋಗಿಸಿಕೊಳ್ಳುತ್ತಾರೆನೆ. ಅವನು ನನ್ನನ್ನು ಮತ್ತು ನಿಮ್ಮನ್ನು ಅನೇಕ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಇಚ್ಛಿಸುತ್ತಾನೆ. ನೀವು ಆತನ ಇಚ್ಛೆಯ ಮೇರೆಗೆ ನಿಮ್ಮನ್ನು

ನೀವು ಒಪ್ಪಿಸಿಕೊಳ್ಳುವುದಕ್ಕೆ ಬಯಸುತ್ತೀರಾ ?

ದೇವರು ನಮ್ಮ ಸಾಮರ್ಥ್ಯಕ್ಕಿಂತ ನಮ್ಮ ಲಭ್ಯತೆಯನ್ನು ಇಚ್ಛಿಸುತ್ತಾರೆ. ಸೀಲನು ದೇವರ ಉಪಯೋಗಕ್ಕಾಗಿ ಪ್ರತಿ ಸಮಯದಲ್ಲಿಯೂ ಸಂಧರ್ಭದಲ್ಲಿಯಾ ದೊರಕುವವನಾದ್ದನು. ಅವನು ಯಾವ ಸ್ಥಾನಮಾನಗಳಲ್ಲಿದ್ದು ಸೇವೆ ಮಾಡುತ್ತಿದ್ದೆನೆಂದು ಅವನು ಪರಿಗಣಿಸಲಿಲ್ಲ ಆದರ ಪ್ರತಿಸಲ ಅವನು ತನ್ನ ಒಳ್ಳೆಯದನ್ನು ಕೊಟ್ಟನು ಮತ್ತು ಒಂದು ಒಳ್ಳೆಯ ನಂಬಿಗಸ್ಥ ಸೇವಕ ಎಂದು ಕರೆಯಲ್ಪಟ್ಟನು.

ಅನ್ವಯ :
ನಿಮ್ಮ ಜೀವನದಲ್ಲಿ ನೀವು ಅನುಭವಿಸಿರುವ । ಅನುಭವಿಸುತ್ತಿರುವ ಕೆಟ್ಟದ್ದಾದ ಬಿರುಗಾಳಿಗಳಿಂದ ದೇವರ ಸಮೀಪಕ್ಕೆ ಹೋಗಬೇಕೆಂದು ದೇವರಲ್ಲಿ ಪ್ರಾರ್ಥಿಸಿರಿ, ಧನ್ಯವಾದಗಳನ್ನು ಹೇಳಿರಿ.

ದೇವರ ಕಾರ್ಯಕ್ಕಾಗಿ ನಿಮ್ಮನ್ನು ಉಪಯೋಗಿಸಿಕೊಳ್ಳುವಂತೆ ನಿಮಗೆ ನೀವು ಬಿಡುವು ಮಾಡಿಕೊಳ್ಳುವ ನಿರ್ಧಾರವನ್ನು ಮಾಡಿರಿ.

ನಿಮ್ಮ ಕುಟುಂಬ ಸಭೆಗೆ ಬರುವ ಹೊಸ ಸ್ನೇಹಿತರೊಟ್ಟಿಗೆ ಕುಳಿತು ಸತ್ಯವೇದವನ್ನು ಕಲಿಯಿರಿ ಅಥವಾ ಅದರ ಭಾಗಿಯಾಗಲು ನಿರ್ಧರಿಸಿರಿ.

ಯಾರಾದರೂ ಒಬ್ಬರಿಗೆ ಈ ದಿನ ಪ್ರೋತ್ಸಾಹಿಸಿರಿ ಮತ್ತು ಒಲಗೊಳಿಸಿರಿ. ದೇವರು ನಿಮ್ಮನ್ನು ಒಳ್ಳೆಯ ಮತ್ತು ನಂಬಿಗಸ್ಥ ಸೇವಕ । ಸೇವಕಿ ಎಂದು ಹೇಳುವಂತೆ ಮಾಡಿರಿ.

## 29. ವೈದ್ಯನಾದ ಲೂಕನು

ಇತಿಹಾಸ :
ಯೆಹೋದ್ಯನಂತೂ ಆಗಿರಲಿಲ್ಲ ಆದರೆ. ಗ್ರೀಕ್ ಸಂಪ್ರದಾಯದಲ್ಲಿ ಬೆಳೆದವನಾಗಿದ್ದನು. ಸತ್ಯವೇದದ ಪುಸ್ತಕಗಳಲ್ಲಿ ಇರಲು ಅವಕಾಶಹೊಂದಿದ ಏಕೈಕ ಗ್ರೀಕ್ ಮಾನಸಾಂತರ ಹೊಂದಿದ ವ್ಯಕ್ತಿ ಆ ಕಾಲದಲ್ಲಿ ಅವನೊಬ್ಬ ವೈದ್ಯನಾಗಿದ್ದನು ಮತ್ತು ಶಿಷ್ಯನೂ ಹಾಗೂ ಪೌಲನ ಸುವಾರ್ತಾ ಯಾತ್ರೆಯ ಸಂಗಾತಿಯೂ ಆಗಿದ್ದನು. ಲೂಕನು ಬರೆದ ಸುವಾರ್ತೆಯ ಬರಹಗಾರನಾಗಿದ್ದ ಅವನು ಒಟ್ಟು 35 ಸಾಮ್ಯಗಳನ್ನು ಬರೆದಿಟ್ಟನು ಅದರಲ್ಲಿ 19 ಸಾಮ್ಯಗಳು ಮಾತ್ರ ಲೂಕನ ಸುವಾರ್ತೆಯಲ್ಲಿ ಮೂಡಿಬಂದಿವೆ. ಲೂಕನು ದೇವರು ಮಾಡಿದ ಆರು ಮಹತ್ಕಾರ್ಯಗಳ ಬಗ್ಗೆ ಬರೆಯುತ್ತಾನೆ. ಅವುಗಳು ನಾವು ಎಲ್ಲಿಯೂ ನೋಡದಂತಹ ಮಹತ್ಕಾರ್ಯಗಳು. ಒಂದುವೇಳೆ ಪರಿಶುದ್ಧಾತ್ಮನು

ಅವನನ್ನು ಪ್ರೇರೆಪಿಸದಿದ್ದರೆ ನಮಗೆ, ಕರುಣೆಯುಳ್ಳ ಸಮಾರ್ಯದ ಮನುಷ್ಯ. ಶ್ರೀಮಂತ ಮೂರ್ಖನ, ಪೋಲಿಹೋದ ಮಗನು ಶ್ರೀಮಂತನು ಮತ್ತು ಲಾಜರನು ಇವುಗಳ ಬಗ್ಗೆ ಗೊತ್ತಾಗುತ್ತಿರಲಿಲ್ಲ.

ಅಪೋಸ್ತಲರ ಕೃತ್ಯಗಳ ಪುಸ್ತಕವು ಸುವಾರ್ತೆ ಪುಸ್ತಕಗಳ ಮತ್ತು ಪತ್ರಿಕೆ ಪುಸ್ತಕಗಳ ಮಧ್ಯ ಮುಖ್ಯವಾದ ಜೊಡಣೆಯಾಗಿದೆ. ಅಪೋಸ್ತಲರ ಕೃತ್ಯ, ಪುಸ್ತಕವಿಲ್ಲದೆ. ಹೊಸ ಒಡಂಬಡಿಕೆಯಲ್ಲಿರುವ ಸಭೆಗಳು (ರೋಮ, ಕೊರಿಂಥೆ, ಗಲಾತ್ಯ) ಹೇಗೆ ಬಂದವೆಂಬುದು ನಮಗೆ ತಿಳಿಯುತ್ತಿರಲಿಲ್ಲ. ಅ. ಕೃ. ಪುಸ್ತಕದಲ್ಲಿ ಮೂರು ಸಲ ನಾವು ಎನ್ನುವ ಭಾಗಗಳಿವೆ (ಅ.ಕೃ. 16:10–40, ಅ.ಕೃ. 20:5–21, ಅ.ಕೃ.27:1–28) ಈ ಭಾಗಗಳಲ್ಲಿ ಲೂಕನು ತನ್ನನ್ನು ತಾನು ಬರವಣಗೆಯಲ್ಲಿ ತೊಡಗಿಸಿಕೊಳ್ಳುತ್ತಾನೆ ಯಾಕೆಂದರೆ ಅವನು ಪೌಲನ ಸುವಾರ್ತ ಪ್ರಯಾಣದಲ್ಲೆಲ್ಲಾ ಜೊತೆಗಾರನಾಗಿದ್ದನು.

ದೃಢಸಂಕಲ್ಪಗಳು :

1. ದೇವರ ಸುವಾರ್ತೆಯನ್ನು ಹಬ್ಬಿಸಲು ಲೂಕನು ತನ್ನ ವೈದ್ಯಕೀಯ ತರಬೇತಿಯನ್ನು ಮತ್ತು ಸಾಮರ್ಥ್ಯವನ್ನು ಸುವಾರ್ತ ಸಾಧನವಾಗಿ ಉಪಯೋಗಿಸಿಕೊಂಡನು. ಅವನು ಈ ಸಾಮರ್ಥ್ಯವನ್ನು ತನ್ನ ಸ್ವಂತ ಭಾಗ್ಯಕ್ಕಾಗಿ ಉಪಯೋಗಿಸಬಹುದಾಗಿತ್ತು ಆದರೆ ಅವನ ಸುವಾರ್ತೆ ಸೇವೆಗಾಗಿ ಬಳಸುವ ಹೃದಯವನ್ನು ಹೊಂದಿದ್ದನು.

2. ಲೂಕನು ತನ್ನ ಮೇಲೆ ಜನರ ಗಮನ ಸೆಳೆಯಲು ಮಾಡಲಿಲ್ಲ ಆದರೆ ದೇವರ ಮಹಿಮೆಗಾಗಿ ಮತ್ತು ಪರಿಶುದ್ಧಾತ್ಮನ ಕೆಲಸಕ್ಕಾಗಿ ಮಾಡಿದನು.

3. ಲೂಕನು ತನ್ನ ಸ್ನೇಹಿತನಾದ ಪೌಲನಿಗೆ ಪ್ರಾಮಾಣಿಕತ್ವದ ಸಿದ್ಧಾಂತವನ್ನು ತೋರ್ಪಡಿಸದವನು ಪೌಲನ ಕಟ್ಟಗಳಿಗೆಯಲ್ಲಿ ಎಲ್ಲರೂ ಬಿಟ್ಟು ಹೋದ ಸಂಧರ್ಭದಲ್ಲಿ ಲೂಕನು ಅವನ ಹತ್ತಿರ ಉಳಿದನು (2 ತಿಮೋಥಿ 4:11) ಇಂತಹ ಸಮಯದಲ್ಲಿ (2 ಕೊರಿಂಥಿ 11:23–27) ಪೌಲನು ದೇವರಿಗೆ ಎಷ್ಟು ಸಲ ಧನ್ಯವಾದಗಳನ್ನು ಹೇಳಿರಬೇಕು, ಇಂತಹ ಪ್ರಾಮಾಣಿಕ ಸ್ನೇಹಿತನಾದ ಲೂಕನ ಜೊತೆ ಕೆಲಸಮಾಡುವ ಭಾಗ್ಯಕ್ಕಾಗಿ.

4. ಲೂಕನು ಪೌಲನ ಸಭೆಯಲ್ಲಿ ಉತ್ಸಾಹವಾಗಿ ಸಹ – ಕೆಲಸಗಾರನಾಗಿ ಭಾಗವಹಿಸಿದನು (ಕೊಲಸ್ಸೆ 4:14, ಫಿಲಮೋನ 24) ಮತ್ತು ತನ್ನ ಬರಹದ ಸಾಮರ್ಥ್ಯದ ಮೂಲಕ ಅನೇಕರ ಮನಸ್ಸನ್ನು ಮುಟ್ಟಿ ಅವರ ಜೀವನದಲ್ಲಿ ಮಹತ್ವದ ಪರಿಣಾಮವನ್ನು ಬೀರಿದನು. ಅನೇಕ ಜೀವಿತಗಳನ್ನು ಬದಲಾಯಿಸುವುದಿಲ್ಲದೆ ಲೂಕನು ಬರೆದ ಸುವಾರ್ತೆ ಮತ್ತು ಅ.ಕೃ. ಯೇಸುಕ್ರಿಸ್ತನ ದೇಹವನ್ನು ಇಡೀ ಲೋಕದಲ್ಲಿ ಕಟ್ಟಲು ಸಹಾಯವಾಯಿತು.

5. ಲೂಕನು ದೇವರ ನಾಯಕತ್ವಕ್ಕೆ ಅಧೀನನಾಗಿದ್ದನು. ದೇವರು ಕಳುಹಿಸದಲ್ಲೆಲ್ಲಾ ಹೋಗಲು ಅವನು ಬದ್ಧನಾಗಿದ್ದನು ಒಪ್ಪಂದಮಾಡಿಕೊಂಡಿದ್ದನು.

ಅನ್ವಯ :

1. ದೇವರು ನಮಗೆ ಆಶೀರ್ವದಿಸಿದ ಸಾಮರ್ಥ್ಯಗಳು ಮತ್ತು ವರಗಳ ಬಗ್ಗೆ ನಾವು ಅರಿತವರಾಗಿದ್ದೇವೆಯೇ ?

2. ಅವುಗಳನ್ನು ಪಟ್ಟಿಮಾಡಿ ದೇವರ ಮಹಿಮೆಗಾಗಿ ಮತ್ತು ಅವನ ಸಭೆಗಾಗಿ ಉಪಯೋಗಿಸೋಣ.

3. ಲೂಕನ ಉಪಸ್ಥಿತಿ ಪೌಲನಿಗೆ ಅದ್ಭುತ ಪ್ರೋತ್ಸಾಹವಾಗಿತ್ತು ನಮ್ಮ ಆತ್ಮಿಕ ಮಾರ್ಗದರ್ಶಕರ ಜೊತೆಗೆ ಸಹಪಾಠಿಯಾಗಿ ದೇವರ ನಾಮಕ್ಕೆ ಮಹಿಮೆ ತರುವಂತಹ ಕೆಲಸಮಾಡಲು ನಿರ್ಧಾರ ಮಾಡೋಣ.

## 30 ಓನೇಸಿಮನ – ಒಬ್ಬ ಪ್ರಯೋಜಕನು

ಫಿಲೆಮೋನನಿಗೆ 10:11

ಓಡಿಹೋದ ಓನೆಸಿಮನನೆಂಬ (ಅಂದರೆ ಪ್ರಯೋಜಕ) ದಾಸನನ್ನು ಕ್ಷಮಿಸಿ ಸೇರಿಸಿಕೊಳ್ಳಬೇಕೆಂದು ವಿಜ್ಞಾಪನೆ ಮಾಡಲು ಪೌಲನು ಫಿಲೋಮೋನನಿಗೆ ಈ ಪತ್ರಿಕೆಯನ್ನು ಬರೆಯುತ್ತಾನೆ. ಇದರಲ್ಲಿ ಹೇಳುವಂತೆ ರೋಮ ಸಮ್ರಾಜ್ಯದ ಕಾಲದಲ್ಲಿ ಸುಮಾರು 60 ಮಿಲಿಯನ್ ದಾಸರಿದ್ದರು. ಮತ್ತು ತನ್ನ ಯಜಮಾನನಿಂದ ಓಡಿಹೋದವರನ್ನು ಹೀನಾಯವಾಗಿ ಕುರಣೆ ಇಲ್ಲದೆ ಸಂದಾನಮಾಡುತ್ತಿದ್ದರು ಅಂದರೆ ಅವರ ಹಣೆಯ ಮೇಲೆ ಬಿಸಿ ಕಬ್ಬಿಣದಿಂದ ಗುರುತುಹಾಕುವುದು ಅಥವಾ ಅದಕ್ಕಿಂತಲೂ ಹೀನಾಯವಾಗಿ, ಶಿಲುಬೆಯ ಮರಣವನ್ನು ವಿಧಿಸುವುದು. ಓನೇಸಿಮನು ಸೆರೆಮನೆಯಲ್ಲಿದ್ದ ಪೌಲನನ್ನು ಈ ಭೇಟಿಯಾಗುವ ಭಾಗ್ಯವನ್ನು ಕಂಡುಕೊಂಡನು ಮತ್ತು ಇದು ಅವನ ಜೀವನ ಬದಲಾಯಿಸಿತು. ಯೇಸು ಕ್ರಿಸ್ತನ ಶಿಷ್ಯನಾಗಿ ಅವನೊಬ್ಬ ಪ್ರಯೋಜನಕಾರಿಯಾದನು ಅವನ ಹೆಸರಿನಂತೆ (ವಚನ 11)

ನಿಷ್ಪ್ರಯೋಜಕರವಾದ ಹಳೇ ಸಂಗತಿಗಳು :

ದೇವರು ಇಸ್ರಾಯೇಲ್ಯರಿಗೆ ನಿಮ್ಮ ದಾಸರನ್ನು ಒಳ್ಳೆ ರೀತಿಯಲ್ಲಿ ನಡೆದುಕೊಳ್ಳಿರಿ ಮತ್ತು ಒಳ್ಳೆಯವರನ್ನು ಗೌರವದಿಂದ ನೋಡಿಕೊಳ್ಳಿರಿ ಎಂದು ಆಜ್ಞೆಮಾಡಿದನು. ಆದರೆ ಓನೇಸಿಮನಿಗೆ. ಅವನ ಖ್ಯಾತಿ ಕೆಟ್ಟದಾಗಿತ್ತು. ಅವನು ಕಳ್ಳನು (ವಚನ 18–19 ಹೇಳುವಂತೆ) ಸೋಮಾರಿಯು (ವ 11) ಮತ್ತು ಇದೆಲ್ಲದರ ಮೇಲೆ ತನ್ನ ಯಜಮಾನನಿಗೆ ಮೋಸಗೊಳಿಸಿ ಓಡಿಹೋಗಿದ್ದನು. ಫಿಲೊಮೊನನು ದಾಸನಿಗೆ ಹೆಚ್ಚಾದ ಶಿಕ್ಷೆಯನ್ನು ಕೊಡಲು ಯೋಚಿಸಹುದಾಗಿತ್ತು. ಆದರೆ ಓನೆಸೀಮನಿಗೆ ಯೇಸುವಿನ ಹೆಸರಿನಲ್ಲಿ ತನ್ನ ಜೀವನವನ್ನು ಬದಲಾಯಿಸಿಕೊಳ್ಳುವ ಅವಕಾಶ ಸಿಕ್ಕಾಗ ಅವನು ಆ ಅವಕಾಶವನ್ನು ಬಾಚಿಕೊಂಡನು.

ನಾವು ಎಷ್ಟು ಸಲ ಹಳೇ ಸಂಗತಿಗಳನ್ನು ನೆನಪಿಗೆ ತಂದುಕೊಂಡು ಅದರಲ್ಲಿಯೇ ಜೀವಿಸುತ್ತೇವೆ (ಯೇಶಾಯ 43:18)

ನಿಮ್ಮ ನಿಷ್ಪ್ರಯೋಜಕ ಹಳೇ ಸಂಗತಿಗಳನ್ನು ಅಮೂಲ್ಯವಾದ ಭವಿಷ್ಯವಾಗಿ ಬದಲಾಯಿಸುವ ಪೌಲನಂತೆ ನಿಮ್ಮ ಜೀವನದಲ್ಲಿ ಯಾರಾದರೂ ಇದ್ದಾರಾ ಎಂದು ಯೋಚಿಸಿರಿ ? ನೀವು ಬದಲಾವಣೆ ಹೊಂದಲು ಎಷ್ಟರ ಮಟ್ಟಿಗೆ ಖಂಡನೆಗೆ ಗುರಿಯಾಗಲು ಬಯಸುತ್ತೀರಿ ?

ಯೋಗ್ಯವುಳ್ಳ, ಜೀವನ :

ರೋಮಾಪುರದಲ್ಲಿ ಹೊಸದಾಗಿ ಕಂಡುಕೊಂಡ, ಅದೂ ತಪ್ಪಾಗಿ ಪಡೆದುಕೊಂಡ ಸ್ವಾತಂತ್ರ್ಯ ಮತ್ತು ಆರಾಮನ್ನು ಬಿಟ್ಟು ಓನೆಸಿಮನು ತನ್ನ ಸ್ವಂತ ಊರಿಗೆ ತನ್ನ ಯಜಮಾನನ ಹತ್ತಿರ ಪುನಃ ಹೋಗಿ ಎಲ್ಲವನ್ನೂ ಸರಿಮಾಡಲು ಬಯಸಿದನು ಅದು ಅಪಾಯಕಾರಿಯಾಗಿತ್ತು ಆದರೆ ಅದೇ ಸಮಯದಲ್ಲಿ ವಚನಗಳ ಪ್ರಕಾರ ಬಹಳ ಶೂರತ್ವವುಳ್ಳದ್ದೂ ಆಗಿತ್ತು (ಮತ್ತಾಯ 5:9)

ಇನ್ನೊಬ್ಬ ಹಾಡದೇ ಇದ್ದ ನಾಯಕ ಈ ಕಥೆಯಲ್ಲಿರುವನು ಅವನು ಫಿಲೋಮೋನನು ಅವನು ತನ್ನ ನೋವು ಮತ್ತು ಅಧಿಕಾರಗಳನ್ನು ತ್ಯಜಿಸಿ ಓಡಿಹೋಗಿದ್ದ ದಾಸನನ್ನು ತನ್ನ ಪ್ರಿಯ ಸಹೋದರನಾಗಿ ಅಂಗೀಕರಿಸಲು ಮನಸ್ಸು ಮಾಡಿದನು. ತನ್ನ ವಿರೋಧಿಯನ್ನು ಕ್ಷಮಿಸುವುದಲ್ಲದೇ ಅವನನ್ನು ಅಂಗೀಕರಿಸಿಕೊಳ್ಳಬೇಕೆಂದು ಫಿಲೊಮೊನನಿಂದ ಎದುರುನೋಡಲಾಗಿತ್ತು ಇವರಿಬ್ಬಿರಿಗೂ ಈ ವಿಷಯ ಸುಲಭವಾಗಿತ್ತೆಂದು ನೀವು ತಿಳಿದುಕೊಂಡಿದ್ದೀರಾ ?

ಅವರ ಹಾಗೆಯೇ ಇವತ್ತಿಗೂ ಸಹ ಅನೇಕ ಹಾಡದೇ ಇದ್ದ ನಾಯಕರಿದ್ದಾರೆ. ಅವರು ವಿರೋಧವನ್ನು ಮರೆಯುವವರು, ನೋವನ್ನು ಕ್ಷಮಿಸುವವರು, ಯೇಸುವಿಗೆ ಮಹಿಮೆಪಡಿಸುವಲ್ಲಿ ಸ್ಥಿರಚಿತ್ತರು ಮತ್ತು ಆತ್ಮಗಳನ್ನು ರಕ್ಷಿಸಲು ಸದಾ ತವಕಪಡುವವರೂ ಆಗಿದ್ದಾರೆ.

ನಾನು ನಂಬುತ್ತೇನೆ, ಮುಂಬರುವ ದಿನಗಳಲ್ಲಿ ಸಭೆಯನ್ನು ನಾಶಗೊಳಿಸುವ ಶೋಧನೆಗಳು ನಮ್ಮೊಳಗೇ ಇರುವ ಬಗೆಹರಿಸಲಾರದ ಸಂಭಂಧಗಳು, ನೋವುಗಳು ಮತ್ತು ನಿಮ್ಮಲ್ಲಿ ಇದರಲ್ಲಿ ಯಾವುದಾದರೂ ಇದೆಯೇ ?
ಇವು ನಿಮ್ಮನ್ನು ಆಗಲೇ ನಾಶಮಾಡುತ್ತಿರುವುದನ್ನು ನೋಡುತ್ತಿರಾ ? ನೀವು ಹೇಗೆ ಸಹಾಯ ಪಡೆಯಬಹುದೆಂದು ಅಂದುಕೊಳ್ಳುತ್ತಿರಾ ?

ನಾವೆಲ್ಲರೂ ನಿಜವಾದ ಧೈರ್ಯ ಮತ್ತು ದೃಢಸಂಕಲ್ಪಹೊಂದಿರುವ ನಿಜವಾದ ನಾಯಕರಾಗೋಣ – ಸೂರ್ಯ ಮುಳುಗುವ ಮುನ್ನವೇ ಯಾವುದೇ ಜಗಳವನ್ನು ನೀತಿಯಿಂದ

ಬಗೆಹರಿಸುವರಾಗಿರೋಣ ಇದರಿಂದ ಸಭೆಗೆ ಮಹಿಮೆಯನ್ನು ತರೋಣ (ಎಫೆಸ 4:26)

## 31. ಎಪಫ್ರೊದಿತನು ತನ್ನ ಜೀವನವನ್ನು ಅಪಾಯದಲ್ಲಿರಿಸಿದ ಒಬ್ಬ ಸಹಪಾಠಿ

ಫಿಲಿಪ್ಪಿಯವರಿಗೆ 2:25–30, 4:18

ಎಪಫ್ರೊದಿತನ ಹೆಸರು ತಕ್ಷಣವೇ ಗುರುತಿಸಲಾಗದಿದ್ದರೂ ಅವನು ಸತ್ಯವೇದದ ಇತಿಹಾಸದಲ್ಲಿ ಒಂದು ಮುಖ್ಯ ಪಾತ್ರ ವಹಿಸುತ್ತಾನೆ. ಅವನ ಹೆಸರು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯಲ್ಲಿ ಎರಡುಸಲ ಪೌಲನ ಸೆರೆಮನೆಯ ಸುವಾರ್ತೆಯಲ್ಲಿ ಮೂಡಿಬಂದಿದೆ. ಏಪಫ್ರೊದಿತನು ಫಿಲಿಪ್ಪಿಯ ಮೂಲ ಪತ್ರಿಕೆಗಳನ್ನು ಫಿಲಿಪ್ಪಿ ಸಭೆಗೆ ವರ್ಗಾಯಿಸುವವನಾಗಿದ್ದನು. ಪೌಲನು ರೋಮಾಪುರದ ಸೆರೆಮನೆಯಲ್ಲಿದ್ದಾಗ, ಫಿಲಿಪ್ಪಿಸಭೆಯು ಆವನಿಗಾಗಿ ಉಡುಗೊರೆ ಕಳುಹಿಸಲು ಇಚ್ಚಿಸಿದರು. ಪೌಲನ ಈ ಉಡುಗೊರೆಯನ್ನು ಒಪ್ಪಿಸೊಳ್ಳಬೇಕಾದ ಯಜ್ಞ, ದೇವರಿಗೆ ಮೆಚ್ಚಿಗೆಯಾದುದ್ದೆಂದು ಕಂಡನು. ಎಪಫ್ರೊದಿತನಾದ ತನ್ನ ಸ್ವಂತ ಮನುಷ್ಯನ ಕೈಯಿಂದ ಫಿಲಿಪ್ಪಿ ಸಭೆಯವರು ವಸ್ತುಗಳನ್ನು ರೋಮಾಪುರಕ್ಕೆ ಕಳುಹಿಸಿದರು.

ಎಪಫ್ರೊದಿತನು ತನ್ನ ಸಭೆಯವರ ಉಡುಗೊರೆಯನ್ನು ವಿಶ್ವಾಸದಿಂದ ತಲುಪಿಸಿ ತನ್ನ ಕರ್ತವ್ಯಕ್ಕಿಂತಲೂ ಹೆಚ್ಚಾಗಿ ಮಾಡಿದನು. ಪೌಲನ ಸೇವೆಯ ಮೂಲಕ ದೇವರ ಕಾರ್ಯಗಳನ್ನು ನಿಸ್ವಾರ್ಥತೆಯಿಂದ ಮಾಡಿದ ಎಪಫ್ರೊದಿತನು ಸಾಯುವ ಮಟ್ಟಿಗೆ ಕಾಯಿಲೆಗೆ ಒಳಗಾದನು. ದೇವರು ಅವನಿಗೆ ಆರೋಗ್ಯವನ್ನು ಧಾರಾಳವಾಗಿ ಅನುಗ್ರಹಿಸಿದನು ಮತ್ತು ಪೌಲನು ತನ್ನ ಸ್ನೇಹಿತನಿಗೆ ಫಿಲಿಪ್ಪಿಯವರಿಗೆ ಬರೆದ ಪುಸ್ತಕವನ್ನು ಕೊಟ್ಟು ಮನೆಗೆ ಕಳುಹಿಸಿದನು.

ಫಿಲಿಪ್ಪಿಯವರಿಗೆ ಎಪಫ್ರೊದಿತನು ಒಬ್ಬ ಸಂದೇಶಕಾರನಾಗಿದ್ದು ಪೌಲನಿಗೆ ಅವನು ಒಬ್ಬ ಸಹೋದರನಿಗಿಂತ ಹೆಚ್ಚಾಗಿ (ಒಂದೇ ಕುಟುಂಬದವನಾಗಿದ್ದನು) ಒಬ್ಬ ಸಹಪಾಠಿ (ಒಂದೇ ಗುರಿಯತ್ತ ಸಾಗುತ್ತಿದ್ದರು) ಮತ್ತು ಒಬ್ಬ ಸಹಯೋಗಿ (ಒಂದೇ ಕಷ್ಟಗಳನ್ನು ಹಂಚಿಕೊಂಡಿದ್ದರು.

ಎಪಫ್ರೊದಿತನು ಒಬ್ಬ ದೇವ ಭಕ್ತ, ವಿಶ್ವಾಸಭರಿತ ಮತ್ತು ಸ್ವತ್ಯಾಗ ಮಾಡುವವನಾಗಿದ್ದನು. ಅವನು ಸ್ವಹಿತವನ್ನು ನೋಡಿದೆ ಪರಿಹಿತವನ್ನು ನೋಡಿ ಯೇಸು ಕ್ರಿಸ್ತನಲ್ಲಿರುವಂತಹ ಮನಸ್ಸನ್ನು ಹೊಂದಿದನು (ಫಿಲಿಪಿ 2:4–5)

ಅವನು ತನ್ನ ಅನಾರೋಗ್ಯದಲ್ಲಿಯೂ, ಪೌಲನ ಸ್ಥಾನದಲ್ಲಿದ್ದುಕೊಂಡು ಶ್ರಮಪಟ್ಟನು. ಎಪಫ್ರೊದಿತನು ತನ್ನ ಬಗ್ಗೆ ಯೋಚಿಸಲಿಲ್ಲ. ಆದರೆ ತನ್ನ ಸಭೆಯವರಿಗೆ ಅನಾರೋಗ್ಯದ ಬಗ್ಗೆ ಗೊತ್ತಾಯಿತೆಂದು ತಿಳಿದು ವೈಥೆಪಟ್ಟನು.

ಪೌಲನು ಎಪಫ್ರೊದಿತನ ಬಗ್ಗೆ ತನ್ನ ಪತ್ರಿಕೆಯ ಕೊನೆಯಲ್ಲಿ ಮತ್ತೊಮ್ಮೆ ಬರೆಯುತ್ತಾನೆ ಬೇಕಾದದ್ದೆಲ್ಲಾ ನನಗುಂಟು, ಸಮೃದ್ಧಿಯಾಯಿತು, ಎಪಫ್ರೊತನ ಕೈಯಿಂದ ನೀವು ಕೊಟ್ಟು ಕಳುಹಿಸಿದ ತಲುಪಲು ನಾನು ತುಂಬಿತುಳಿಕಿದವನಾಗಿದ್ದೇನೆ. ಅದು ದೇವರಿಗೆ ಮೆಚ್ಚಿಕೆಯಾದದ್ದು, ಸುಗಂಧವಾಸನೆಯೇ ಇಷ್ಟ ಯಜ್ಞನೇ (ಫಿಲಿಪಿ 4:18)

ಮುಂದಿರುವ ವಚನಗಳಲ್ಲಿ ದೇವರಿಗೆ ಮೊದಲಸ್ಥಾನದಲ್ಲಿಟ್ಟರೆ ಸಿಗುವ ವಾಗ್ದಾನದ ವಿಷಯವಾಗಿದೆ. ನನ್ನ ದೇವರು ಕ್ರಿಸ್ತಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು.

ಎಪಫ್ರೊದಿತನ ಹಾಗೆ ಅನೇಕ ಗಂಡಸರು ಹೆಂಗಸರು ದೇವರ ರಾಜ್ಯಕ್ಕಾಗಿ ಮತ್ತು ಇತರರಿಗಾಗಿ ತನ್ನನ್ನು ತಾನೇ ಸಂಪೂರ್ಣವಾಗಿ ಸಮರ್ಪಿಸಿದರು. ಅಂತಹ ವ್ಯಕ್ತಿಗಳು ಗೌರವಕ್ಕೆ ಪಾತ್ರರಾಗಿದ್ದಾರೆ ಮತ್ತು ಅವರ ಉಪಸ್ಥಿತಿ ಸಂತೋಷ ತರುತ್ತದೆ.

ಯೋಚಿಸಬೇಕಾದ ಕೆಲವು ಪ್ರಶ್ನೆಗಳು :
ಪೌಲನು ಎಪಫ್ರೊದಿತನನ್ನು ಸಹಪಾರಿ, ಸಹಯೋಗಿ ಎಂದು ಕರೆಯುತ್ತಾನೆ, ಸಭೆಯಲ್ಲಿ ನಿಮ್ಮನ್ನು ಏನೆಂದು ಕರೆಯುತ್ತಾರೆ ?

ಎಪಫ್ರೊದಿತನು ಪೌಲನನ್ನು ಸಹಾಯಮಾಡಲು ತನ್ನ ಜೀವನವನ್ನೆ ಅಪಾಯದಲ್ಲಿರಿಸಿದನು ನೀವು ಹೇಗೆ ದೇವರ ಸಭೆ ಮತ್ತು ಕುಟುಂಬ ಸಭೆಗೆ ನಿಮ್ಮ ಕಷ್ಟದಲ್ಲಿಯೂ ಆಧಾರವಾಗಿದ್ದೀರಿ ?

ನೆನಪಿರಲಿ ಎಪಫ್ರೊದಿತನು ತನ್ನ ಸ್ವಂತ ಮಹಿಮೆಗಾಗಿ ಏನನ್ನೂ ಮಾಡಲಿಲ್ಲ ಆದರೆ ದೇವರ ಮಹಿಮೆಗಾಗಿ ಮಾಡಿದರು. ಆದ್ದರಿಂದ ನಾವೂ ಸಹ ಹಾಗೆಯೇ ಮಾಡಬೇಕು.

ಮುಂದೆ ಓದಲು
ಫಿಲಿಪ್ಪಿ 2:14
ಕೊಲೊಸ್ಸೆ 3:17, 3:23-24.